ಗೌರಿ ಲಂಕೇಶ್




ಗೋರಖ್‌ಪುರ ಕಂದಮ್ಮಗಳ ನೆನಪಿನಲ್ಲಿ.....

30 ಆಗಸ್ಟ್ 2017 ಪುಟ 16 ರೂ. 15/- ರಂಜನೆ • ಬೋಧನೆ • ಪ್ರಚೋದನೆ

“ಅಮಿತ್ ಶಾ ಕರ್ನಾಟಕಕ್ಕೆ ಕಾಲಿಟ್ಟಿದ್ದೇ ಎರಡು ಅಜೆಂಡಾ ಇಟ್ಟುಕೊಂಡು. ಒಂದು ಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಡ್ಯಾಮೇಜ್ ಕಂಟ್ರೋಲ್ ಮಾಡಿಕೊಳ್ಳೋದು. ಮತ್ತೊಂದು ಭವಿಷ್ಯದ ಕೋಮು ಸ್ಕೆಚ್‌ಗೆ ಅನುವಾಗುವಂತೆ ಕರುನಾಡಿನ ಮಾಧ್ಯಮ-ಪತ್ರಿಕಾರಂಗವನ್ನೇ ಕೇಸರಿಮಯವಾಗಿಸೋದು......

ಕರುನಾಡಿಗೆ ಬೆಂಕಿ ಇಡಲುಬಂದ

ಒಂದು ಕೇಸರಿ ಮೊಟ್ಟೆಯ ಕಥೆ






ಟಿಕೆಟ್ ಚಟಗಾರರ ತಂಟೆಗೆ ತತ್ತರಿಸುತ್ತಿದೆ

ಕೇಸರಿ ಪಾಳಯ




ಕಾಂಗ್ರೆಸ್ ಭಿನ್ನಮತದ

ಬೇಗುದಿಗಳು



ಬ್ರಿಗೇಡ್ ವಿರೂಪಾಕ್ಷಪ್ಪ

ಜೆಡಿಎಸ್ ಸೇರ್ತಾರಾ?



ನಟ ಉಪೇಂದ್ರಗೆ ಒಂದು

ಬಹಿರಂಗ ಪತ್ರ


ಸುಳ್ಳುಗಳ ವಿಜೃಂಭಣೆ ಮತ್ತು 'ಬಹುತ್ವ'ದ ನಾಶ: ಸಮಕಾಲೀನ ಸವಾಲುಗ

There is little difference in people, but that little difference makes a big difference. The little difference is attitude and big difference is whether it is positive or negative

- W.Clement stone

ಅಸಮಾನತೆಯು ಹಿಂದೂಯಿಸಂನ ಆತ್ಮವಾಗಿದೆ. ಸಾಮಾಜಿಕ ಉಪಯುಕ್ತತೆಯ ಫಲಾಫಲವನ್ನು ಪರಾಮರ್ಶಿಸಲು ಸೋಲುವ ಹಿಂದೂಯಿಸಂ ಫಿಲಾಸಫಿಯು ವೈಯಕ್ತಿಕ ನ್ಯಾಯಪರತೆಯ ಫಲಾಫಲವನ್ನು ಪರಾಮರ್ಶಿಸಲು ಸಹ ಸೋತಿದೆ.

- ಬಿ.ಆರ್. ಅಂಬೇಡ್ಕರ್



ಇಂದು ಮತ್ತೆ ರಾಷ್ಟ್ರೀಯತೆ ಸುದ್ದಿಯಲ್ಲಿದೆ. ಸಾವರ್ಕರ್ ಅವರ ವಿಕೃತ ರಾಷ್ಟ್ರೀಯತೆ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮುಖ್ಯ ಪ್ರಣಾಳಿಕೆ ಆಗಿರುವುದು ಇಂದಿನ ವಾಸ್ತವ. ಕಳೆದ 3 ವರ್ಷಗಳ ಬಿಜೆಪಿ ನೇತೃತ್ವದ ಆರೆಸ್ಸೆಸ್‌ನ ಆಡಳಿತದಲ್ಲಿ ಘರ್ ವಾಪಸಿಯಿಂದ, ದಾದ್ರಿಯ ಅಖ್ಲಾಕ್ ಹತ್ಯೆಯವರೆಗೆ ಒಂದು ಘಟ್ಟಕ್ಕೆ ಬಂದು ತಲುಪಿದ ಸಂಘ ಪರಿವಾರದ ದುಷ್ಟತನದ ಹಲ್ಲೆಗಳು ಮತ್ತು ಹತ್ಯಾಕಾಂಡಗಳು ಈಗ ಮತ್ತೊಂದು ಮಜಲಿಗೆ ಬಂದು ನಿಂತಿದೆ. ಕೇಂದ್ರದಲ್ಲಿ ಸಂಘ ಪರಿವಾರ ಅಧಿಕಾರದಲ್ಲಿರುವ ಸಂದರ್ಭದಲ್ಲಿಯೇ ಜಾತಿ ತಾರತಮ್ಯವನ್ನು ಗಟ್ಟಿಗೊಳಿಸುವ ನಿರ್ಧಾರಕ್ಕೆ ಬಂದಿರುವ ಆರೆಸ್ಸೆಸ್ ಎಫ್‌ಟಿಐಐ, ಮದ್ರಾಸ್ ಐಐಟಿಯ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್, ಹೈದರಾಬಾದ್ ಕೇಂದ್ರೀಯ ಯೂನಿವರ್ಸಿಟಿ, ಜೆಎನ್‌ಯು, ಅಲಹಾಬಾದ್ ಯೂನಿವರ್ಸಿಟಿ, ಕೊಲ್ಕತ್ತಾದ ಜಾಧವ್ ಯೂನಿವರ್ಸಿಟಿ, ಪುಣೆಯ ಫರ್ಗ್ಯೂಸನ್ ಕಾಲೇಜ್ ಮತ್ತು ಮೊನ್ನೆ ದೆಹಲಿಯ ರಾಮ್‌ಜಾಸ್ ಕಾಲೇಜ್‌ವರೆಗೂ ಹೀಗೆ ಎಲ್ಲಾ ಉನ್ನತ ಶಿಕ್ಷಣದ ಯೂನಿವರ್ಸಿಟಿಗಳಲ್ಲಿ ತನ್ನ ಮತೀಯವಾದಿ ಅಜೆಂಡಾದ ಛಾಪನ್ನು ಒತ್ತಲು ಹೊರಟಿದೆ. ಶಿಲಾಯುಗದ ಸನಾತನವಾದಿ ಮನುಸ್ಮೃತಿಯನ್ನು ಇಂದು ಮರಳಿ ಚಲಾವಣೆಗೆ ತರಲು ತುದಿಗಾಲಲ್ಲಿರುವ ಆರೆಸ್ಸೆಸ್ ಯೂನಿವರ್ಸಿಟಿ ಕ್ಯಾಂಪಸ್‌ಗಳನ್ನು ಎಬಿವಿಪಿಯ ಮೂಲಕ ಒಂದು ರಣರಂಗದಂತೆ ಸಜ್ಜುಗೊಳಿಸಿದೆ.

ಹಿಂದೂ ಮತಾಂಧರ ಕೈಯಲ್ಲಿ ಬಲು ಸುಲಭವಾಗಿ ಅಸ್ತ್ರವಾಗಿಬಿಡುವ ಈ ಸಾವರ್ಕರ್ ರಾಷ್ಟ್ರೀಯತೆಯೊಳಗೆ ಹಿಂದೂ ಧರ್ಮವನ್ನು ಬೆರೆಸಿ ಯಾವ ಕಾಲಕ್ಕೆ ಬೇಕಾದರೂ ಸ್ಫೋಟಿಸಬಲ್ಲ ಒಂದು ಮದ್ದುಗುಂಡನ್ನು ಸದಾ ತಯಾರಿಸುತ್ತಾ ಅದನ್ನು ಕಾಲಕಾಲಕ್ಕೆ ಸ್ಫೋಟಿಸುತ್ತಾ ದಿನನಿತ್ಯ ಅಸಹನೆಯ, ಹಿಂಸಾಚಾರದ ವಾತಾವರಣವನ್ನು ಸೃಷ್ಟಿಸುತ್ತಿರುವ ಸಂಘ ಪರಿವಾರವನ್ನು ಇಂದು ಎದುರಿಸಲು ಬೇಕಾದ ನಿಜದ ಸೆಕ್ಯುಲರಿಸಂನ ಹತಾರಗಳಿಲ್ಲದೆ ಪ್ರಜ್ಞಾವಂತರು ಅಸಹಾಯಕರಾಗಿರುವುದು ಒಂದು ದುರಂತ.

ಏಕೆಂದರೆ ಈ ಹಿಂದೂ ಧರ್ಮವನ್ನು ತಾತ್ವಿಕವಾಗಿ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಅರ್ಥೈಸಲು ಇಲ್ಲಿನ ಪ್ರಗತಿಪರ ಚಿಂತನೆಗಳು ಸೋತಿರುವುದು ಒಂದೆಡೆಯಿದ್ದರೆ ಇದರ ಫಲವಾಗಿ ಹುಟ್ಟಿಕೊಂಡ ನಿರ್ವಾತವನ್ನು ಸಂಘ ಪರಿವಾರ ತನ್ನ ರಾಜಕೀಯ-ಸಾಮಾಜಿಕ ದುರುದ್ದೇಶಕ್ಕೆ ಯಶಸ್ವಿಯಾಗಿ ಬಳಸಿಕೊಳ್ಳುತ್ತಿದೆ. ಇದಕ್ಕೆ ಎಪ್ಪತ್ತು ವರ್ಷಗಳ ರಕ್ತಸಿಕ್ತ ಇತಿಹಾಸವೇ ಇದೆ. ಇದರ ಕುರಿತಾಗಿ ಸಾಕಷ್ಟು ಚರ್ಚೆಗಳಾಗಿವೆ. ವಿಶ್ಲೇಷಣೆಗಳಾಗಿವೆ. ಆದರೂ ಪ್ರಜ್ಞಾವಂತರು ಇದಕ್ಕೆ ಪರ್ಯಾಯ ಚಿಂತನೆಗಳನ್ನು ರೂಪಿಸುವುದಕ್ಕಾಗಿ ಇಂದಿಗೂ ಕತ್ತಲಲ್ಲಿ ತಡಕಾಡುತ್ತಿರುವುದು ಮಾತ್ರ ನಮ್ಮನ್ನು ಗಾಬರಿಗೊಳಿಸುತ್ತಿದೆ.

ಬ್ರಾಹ್ಮಣ ಉದಾರವಾದಿಗಳನ್ನು ಹೊಂದಿದ್ದ ಆರ್ಯ ಸಮಾಜ, ಬ್ರಹ್ಮ ಸಮಾಜದ ಬ್ರಾಹ್ಮಣ್ಯವನ್ನು ಮೀರಲಾಗದ ಆ ಸುಧಾರಣಾವಾದಿ ನಡೆಗಳ ಮಿತಿಗಳನ್ನು ಮೀರಿ 19ನೇ ಶತಮಾನದಲ್ಲಿಯೇ ಬ್ರಾಹ್ಮಣ್ಯ-ಫ್ಯೂಡಲಿಸಂ ವಿರುದ್ಧ ಹೊಸದಾದ "ಶೂದ್ರ ಅತಿಶೂದ್ರ" ಚಳವಳಿಯನ್ನು ಸಂಘಟಿಸಿದ ಫುಲೆ ದಂಪತಿಗಳ ಇಡೀ ಹೋರಾಟದ ಬದುಕನ್ನು ನಮ್ಮ ಪೋಸ್ಟ್ ಕಲೋನಿಯಲ್ ಚಿಂತಕರು ಮರೆತಿರುವುದು ಸಹ ಆತಂಕಗೊಳಿಸುತ್ತದೆ.

ಈ ಹಿಂದೂ ಮತಾಂಧರ ರಾಷ್ಟ್ರೀಯವಾದದ ಅಪಾಯವನ್ನು ಗ್ರಹಿಸಿದ್ದ ರವೀಂದ್ರನಾಥ ಟ್ಯಾಗೂರ್ ಅವರು ರಾಷ್ಟ್ರೀಯತೆಯ ಕುರಿತಾಗಿ ತಳೆದ ಸ್ಪಷ್ಟ ನಿಲುವುಗಳು ಇಂದಿಗೂ ಪ್ರಸ್ತುತವಾಗಿವೆ. ಇಪ್ಪತ್ತನೇ ಶತಮಾನದ ಆರಂಭದಲ್ಲಿಯೇ ಟ್ಯಾಗೂರ್ ಅವರು "ರಾಷ್ಟ್ರೀಯವಾದಿಗಳು ಆದರ್ಶಗಳ ಕುರಿತು ಮಾತನಾಡುವಾಗ ಸ್ವತಃ ತಾವೇ ಸಾಮಾಜಿಕ ಆಚರಣೆಯ ಸಂದರ್ಭದಲ್ಲಿ ಸಂಪ್ರದಾಯವಾದಿಗಳಾಗಿರುವುದನ್ನು ಮರೆತಿರುತ್ತಾರೆ. ಆದರೆ ಇಂಡಿಯಾದಲ್ಲಿ ಸಹಜವಾದ ಹುಟ್ಟಿನ ಕುರಿತಾದ ಹಕ್ಕು ಸಾಧ್ಯವಾಗಿಲ್ಲ, ಪಶ್ಚಿಮ ರಾಷ್ಟ್ರಗಳ ರಾಷ್ಟ್ರೀಯವಾದದ ಕುರಿತಾಗಿ ಮಾತನಾಡುವವರು ನಮ್ಮಲ್ಲಿನ ವಿವಿಧ ಜಾತಿಗಳಿರುವುದನ್ನು ಮರೆಯುತ್ತಾರೆ" ಎಂದು ಹೇಳುತ್ತಾರೆ.

ಹಿಂದೂ ಧರ್ಮ: ನಮ್ಮ ಚಿಂತನೆಯ ಬಿಕ್ಕಟ್ಟುಗಳು

ಇದೇ ಸಂದರ್ಭದಲ್ಲಿ 19ನೇ ಶತಮಾನದ ಪ್ರಮುಖ ಆಧ್ಯಾತ್ಮದ ಗುರುವಾಗಿದ್ದ ರಾಮಕೃಷ್ಣ ಪರಮಹಂಸರು ಧರ್ಮದ ಕುರಿತಾಗಿ "ವ್ಯಕ್ತಿಯೊಬ್ಬನು ತಾನು ನಂಬಿದ ಧರ್ಮದಲ್ಲಿ ಅನೇಕ ಲೋಪದೋಷಗಳಿದ್ದಲ್ಲಿ ಮತ್ತು ಆ ವ್ಯಕ್ತಿಯು ಪ್ರಾಮಾಣಿಕ ಮತ್ತು ಶ್ರದ್ಧೆಯುಳ್ಳವನಾಗಿದ್ದರೆ ಆಗ ದೇವರು ಸ್ವತಃ ಆ ಲೋಪದೋಷಗಳನ್ನು ಸರಿಪಡಿಸುತ್ತಾನೆ. ಬೇರೊಂದು ಧರ್ಮದಲ್ಲಿ ಲೋಪದೋಷಗಳಿದ್ದರೆ ಅದು ಆ ಧರ್ಮದಲ್ಲಿ ನಂಬಿಕೆಯಿಟ್ಟವರಿಗೆ ಸಂಬಂಧಪಟ್ಟಿರುತ್ತದೆ, ದೇವರು ಅದನ್ನು ಸರಿಪಡಿಸುತ್ತಾನೆ. ನಾನು ಹಿಂದೂಯಿಸಂ, ಇಸ್ಲಾಂ, ಕ್ರಿಶ್ಚಿಯಾನಿಟಿ ಎಲ್ಲಾ ಧರ್ಮಗಳನ್ನು ಪಾಲಿಸಿದ್ದೇನೆ. ಈ ಧರ್ಮಗಳ ಆಚರಣೆಗಳನ್ನು ಆಳವಾಗಿ ಆಚರಿಸಿದಾಗ ನಾನು ಕಂಡುಕೊಂಡ ಸತ್ಯವೇನೆಂದರೆ ಒಂದೇ ದೇವರ ಕಡೆಗೆ ನಾವೆಲ್ಲಾ ಚಲಿಸುತ್ತಿದ್ದೇವೆ ಆದರೆ ವಿಭಿನ್ನ ದಾರಿಗಳನ್ನು ಬಳಸುತ್ತಿದ್ದೇವೆ. ಆದರೆ ದುರಂತವೆಂದರೆ ಧರ್ಮದ ಹೆಸರಿನಲ್ಲಿ ಹಿಂದೂಗಳು, ಮುಸ್ಲಿಂರು, ಕ್ರಿಶ್ಚಿಯನ್ನರು, ವೈಷ್ಣವ, ಶೈವ ಹೀಗೆ ಪರಸ್ಪರ ಕಚ್ಚಾಡುತ್ತಿರುವುದು. ಆದರೆ ಕೃಷ್ಣ ಎಂದು ಕರೆಯಲ್ಪಡುವ ದೇವರು ಶಿವ ಎಂದು ಕರೆಯಲ್ಪಡುತ್ತಾನೆ, ಶಿವ ಎಂದು ಕರೆಯಲ್ಪಡುವ ದೇವರು ಜೀಸಸ್ ಎಂದೂ, ಅಲ್ಲಾಹು ಎಂದೂ ಕರೆಯಲ್ಪಡುತ್ತಾನೆ. ಎಲ್ಲರೂ ಒಂದೇ ಆದರೆ ಈ ನಂಬಿಕೆಯನ್ನು ಜನರು ಸೋಲುಗೆಲುವುಗಳ ನೆಲೆಯಲ್ಲಿ ನೋಡುವ ಜನರು ತಮ್ಮ ಧರ್ಮ ಮಾತ್ರ ಸದಾ ಗೆಲುವು ಸಾಧಿಸುತ್ತದೆ ಮತ್ತು ಬೇರೆಲ್ಲ ಧರ್ಮಗಳು ಸೋಲುತ್ತವೆ ಎಂದು ಚಿಂತಿಸುತ್ತಾರೆ" ಎಂದು ಹೇಳುತ್ತಾರೆ.

ಚಿಂತಕ ಜ್ಯೋತಿರ್ಮಯ ಶರ್ಮ ಅವರ ಸಂಶೋಧನ ಪುಸ್ತಕ **"Cosmic Love and Human Apathy: Swami Vivekananda's Restatement of Religion"** ದಲ್ಲಿ ರಾಮಕೃಷ್ಣ ಮತ್ತು ಅವರ ಶಿಷ್ಯರಾದ ವಿವೇಕಾನಂದರ ಕುರಿತಾಗಿ ಹೊಸ ಚಿಂತನೆಗಳೊಂದಿಗೆ ಚರ್ಚೆಗಳನ್ನು ನಡೆಸುತ್ತಾರೆ. ಆ ಪುಸ್ತಕದಲ್ಲಿ ಜ್ಯೋತಿರ್ಮಯ ಶರ್ಮ ಅವರು ಬರೆಯುತ್ತಾರೆ "1896ರಲ್ಲಿ ಅಮೆರಿಕ ಮತ್ತು ಲಂಡನ್‌ಗೆ ಪ್ರವಾಸ ಮಾಡುವ ವಿವೇಕಾನಂದ ಅಲ್ಲಿ ಧರ್ಮದ ಕುರಿತಾಗಿ, ತಮ್ಮ ಗುರುಗಳಾದ ರಾಮಕೃಷ್ಣರ ಕುರಿತಾಗಿ ಮಾತನಾಡುತ್ತ 'ರಾಮಕೃಷ್ಣ ಅವರು ಎಲ್ಲಾ ಧರ್ಮಗಳ ಕುರಿತಾದ ಸತ್ಯಗಳನ್ನು ಅರಿಯಲು ಉತ್ಸುಕರಾಗಿದ್ದರು. ರಾಮಕೃಷ್ಣರವರು ಯಾವುದೇ ವ್ಯಕ್ತಿಯ ವೈಯಕ್ತಿಕ ನಂಬಿಕೆಯನ್ನು ತೊಂದರೆಗೊಳಪಡಿಸಲು ಬಯಸುತ್ತಿರಲಿಲ್ಲ; ಎಂದು ಭಾಷಣ ಮಾಡಿದ್ದರು. ರಾಜಕೀಯವಾಗಿ ಹಿಂದೂಯಿಸಂ ಕುರಿತಾಗಿ ಆಳವಾಗಿ ಮಾತನಾಡಿದ್ದ ವಿವೇಕಾನಂದ ಬೇರೆ ಧರ್ಮದ ಜನರ ನಂಬಿಕೆಗಳ ಕುರಿತಾಗಿ ಬಹಳಷ್ಟು ಲಿಬರಲ್ ಆಗಿ ಚಿಂತಿಸುತ್ತಿದ್ದರು. ಎಲ್ಲಾ ಧರ್ಮಗಳ ನಂಬಿಕೆಗಳು ವಿಭಿನ್ನವಾಗಿದ್ದರೂ ಅದು ಕಡೆಗೆ ಒಂದೇ ದೇವರನ್ನು ಪ್ರಾರ್ಥಿಸುತ್ತದೆ ಎಂದು ವಿವೇಕಾನಂದ ಸಹ ನಂಬಿದ್ದರು. ತಮ್ಮ ಅನೇಕ ಸಾರ್ವಜನಿಕ ಭಾಷಣಗಳಲ್ಲಿ ವಿವೇಕಾನಂದರು ತಮ್ಮ ಸಂದೇಶವು ಶಾಂತಿ ಮತ್ತು ಧರ್ಮದ... ಬೆಂಬಲಿಸುತ್ತದೆ ಮತ್ತು ಶತ್ರುತ್ವವನ್ನು ನಾನು ವಿರೋ... ಎಂದು ಹೇಳಿದ್ದಾರೆ. ಸ್ವತಃ ಹಿಂದೂ ಧರ್ಮದ... ನಂಬಿಗೆಯನ್ನು ಹೊಂದಿದ್ದ ವಿವೇಕಾನಂದ ಪ್ರ... ತನ್ನ ಧರ್ಮದ ಕುರಿತಾದ ಇರುವ ... ಪ್ರಮಾಣದಷ್ಟೇ ವಿವಿಧ ಧರ್ಮಗಳ ಕುರಿತಾಗಿ ... ಹೇಳಿದ್ದರು. ನಂಬಿಕೆಗಳು ಬಹುರೂಪಿಯಾಗಿ... ನಂಬಿದ್ದರು. ವಿವಿಧ ಧರ್ಮಗಳ ನಂಬಿಕೆಗಳ... ವಿವೇಕಾನಂದ ಅವರು 'ಜಗತ್ತಿನಲ್ಲಿರುವ ವಿವಿಧ ... ನಾನು ವಿರೋಧಿಸುವುಲ್ಲ, ಪಂಥಗಳ ಸಂಖ್ಯೆ ... ದೇವರಿಗೆ ಆಯ್ಕೆಗಾಗಿ ವಲಯಗಳು ವಿಸ... ಹೋಗುತ್ತವೆ. ಆದರೆ ಪ್ರತಿಯೊಂದು ಸಂ... ಸಂಗತಿಗಳಲ್ಲಿ, ವ್ಯಾಜ್ಯಗಳಲ್ಲಿ ಒಂದೇ ಧರ್ಮವನ್ನು... ದೂಷಿಸುವುದನ್ನು ನಾನು ವಿರೋಧಿಸುತ್ತೇನೆ. ಪ್ರ... ಧರ್ಮದವರನ್ನು ನಾವು ಒಳಗೊಳ್ಳಬೇಕ... ಗೌರವಿಸಬೇಕು' ಎಂದು ಪ್ರತಿಪಾದಿಸಿದರು... ಜ್ಯೋತಿರ್ಮಯ ಶರ್ಮ ಹೇಳುತ್ತಾರೆ.

ಒಂದು ಕಡೆ ಧರ್ಮದ ವಿವಿಧ ಮ... ಅರಿತುಕೊಳ್ಳಲು ಆಧ್ಯಾತ್ಮವನ್ನು ಬಳಸಿಕೊಂಡ... ಹಿಂದೂ ಧರ್ಮವನ್ನು ಸನಾತನ ಧ... ಪರಿಭಾವಿಸಿದ್ದರು. ಇವರ ಆಧ್ಯಾತ್ಮದ ಚಿ... ಧರ್ಮದ ಕುರಿತಾದ ಶ್ರೇಣೀಕೃತ ವ್ಯವಸ್ಥೆಯ... ಚಿಂತನೆಗಳ ನಡುವೆ ಅನೇಕ ವೈರುಧ್ಯಗಳಿದ್ದ... ತಮ್ಮ ಗುರುಗಳಿಂದ ವಿಭಿನ್ನವಾಗಿ ... ವಿವೇಕಾನಂದರು ಧರ್ಮವನ್ನು ಒಂದು ಕಡೆ ... ತುದಿಯಲ್ಲಿಯೂ ಮತ್ತೊಂದೆಡೆ ರಾಜಕೀಯ ನೆ... ನಿರ್ವಚಿಸಿದರು.

ಮತ್ತೊಂದೆಡೆ ಅದೇ ಕಾಲಕ್ಕೆ ಹೆಗೆಲ್... ಆದರ್ಶವಾದ" (absolute idealism ... en.wikipedia.org/ Absolute_idealism>) Phenomenology of Spirit <... en.wikipedia.org/ The_Phenomenology_of_Sp... ಫಿಲಾಸಫಿ ಚಿಂತನೆಗಳ ನಂತರ 19ನೇ ಶತಮಾ... ಮತ್ತು ಮೂರನೇ ದಶಕಗಳಲ್ಲಿ ಯುರೋಪಿನಲ್ಲಿ... ವಿಸ್ಮೃತಿ ಮತ್ತು ಬಂಡವಾಳಶಾಹಿಗಳ ಏಳಿಗೆಗಳು... ದಾರ್ಶನಿಕರಲ್ಲಿ ಚಿಂತೆಯನ್ನು ಹೆಚ್ಚಿಸಿದ್ದವು. ಬೂದ... ತಲೆಯೆತ್ತುತ್ತಿರುವುದು ಅವರಲ್ಲಿ ಆತಂಕವನ್ನುಂಟ... ಕಡೆಗೆ 19ನೇ ಶತಮಾನದ ಕೊನೆಯ ... ಯುರೋಪ್ ರಾಷ್ಟ್ರಗಳು ಮತ್ತು ಇಂಡಿಯಾದಲ್ಲಿ... ಹಿತಾಸಕ್ತಿಯನ್ನು, ಚೈತನ್ಯವನ್ನು ಆಧ್ಯಾತ್ಮದ ಚಿಂತ... ಬೆಸೆಯಲಾಯಿತು. ಈ ಪ್ರಕ್ರಿಯೆಯು ... ಗಟ್ಟಿಗೊಳ್ಳುತ್ತಾ ಹೋಯಿತೇ ಹೊರತು ಕುಂಠಿತ... ಧರ್ಮವನ್ನು ಪುನರುಜ್ಜೀವನಗೊಳಿಸುವ ... ಕೇಳಿಬಂದವು.

ಇಂತಹ ಕಾಲಘಟ್ಟದಲ್ಲಿ ವಿವೇಕಾನಂದರು ... ಧರ್ಮದ ಪುನರುಜ್ಜೀವನದ ಚಿಂತನೆಗಳಿ... ತಿರುವುಗಳನ್ನು ಕೊಟ್ಟರು. ಈ ಹಿಂದೂ ... ಪಾರಮಾರ್ಥಿಕ ಚಿಂತನೆಗಳ ಜೊತೆಜೊತೆಗೆ ...

ಕಫೀಲ್ ಖಾನ್ ಎಂಬ ನಿಷ್ಠಾವಂತ ವೈದ್ಯನ ವಿರುದ್ಧ ಕುತಂತ್ರ



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

ಉತ್ತರಪ್ರದೇಶದ ಗೋರಖ್‌ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲವೇ ದಿನಗಳ ಅಂತರದಲ್ಲಿ 79 ಕೂಸುಗಳು ಆಮ್ಲಜನಕದ ಕೊರತೆಯಿಂದ ಮೃತಪಟ್ಟಿದ್ದು ದೇಶದ ಸೂಕ್ಷ್ಮಜನರನ್ನು ದಂಗುಬಡಿಸಿದೆ. ಆದರೆ ಸೂಕ್ಷ್ಮತೆಯ ಲವಲೇಶವೂ ಇಲ್ಲದ ಚೆಡ್ಡಿಗಳು - ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿ ಆದಿತ್ಯನಾಥ ಸೇರಿದಂತೆ - ಇವತ್ತಿಗೂ ತಮ್ಮ ಭಂಡತನವನ್ನು ಮುಂದುವರೆಸಿದ್ದಾರಲ್ಲದೆ ನಿಷ್ಠಾವಂತ ವೈದ್ಯ ಕಫೀಲ್ ಖಾನ್‌ನನ್ನು ಬಲಿಪಶುಮಾಡಲು ಯತ್ನಿಸುತ್ತಿದ್ದಾರೆ.

ಆದಿತ್ಯನಾಥ್ ಮತ್ತು ಆ ರಾಜ್ಯದ ಆರೋಗ್ಯ ಮಂತ್ರಿ ಈ ಮಕ್ಕಳ ಸಾವಿಗೆ ನೇರ ಕಾರಣವಾಗಿದ್ದಾರೆ. ಆದರೂ ಅವರಿಬ್ಬರು ಮಕ್ಕಳ ಸಾವಿಗೆ ಆಮ್ಲಜನಕದ ಕೊರತೆ ಕಾರಣವಲ್ಲ, ಬದಲಾಗಿ ಅಲ್ಲಿನ ಅವ್ಯವಸ್ಥೆ ಕಾರಣ, ವೈದ್ಯರು ಕಾರಣ, ಆ ಕಾಲೇಜಿನ ಪ್ರಾಂಶುಪಾಲ ಕಾರಣ ಎಂದೆಲ್ಲಾ ಸುಳ್ಳು ಬೊಗಳುತ್ತಿದ್ದಾರೆ. ಇವರಿಬ್ಬರು ಎಂತಹ ದುಷ್ಟರು ಎಂದರೆ, ಸಾಧ್ಯವಾದಷ್ಟು ಮಕ್ಕಳ ಪ್ರಾಣವನ್ನು ಕಾಪಾಡಲು ಯತ್ನಿಸಿದ ಕಫೀಲ್ ಖಾನ್‌ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ಆತನ ವಿರುದ್ಧ ವಿಕೃತ ಕತೆಗಳನ್ನು ಕಟ್ಟಿ, ಆತ ಮುಸಲ್ಮಾನ ಎಂಬ ಕಾರಣಕ್ಕೆ ಆತನನ್ನು ಕೆಲಸದಿಂದಲೇ ವಜಾ ಮಾಡಿದ್ದಾರೆ.


ಈಗ ಎಲ್ಲರಿಗೂ ಗೊತ್ತಿರುವಂತೆ ಆಗಸ್ಟ್ 10ರ ರಾತ್ರಿ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆ ಅತೀವವಾಗಿ, ಅದನ್ನು ಪೂರೈಸಲು ಖಾನ್ ತಮ್ಮ ಕೈಲಾದದ್ದನ್ನು ಮಾಡಿದ್ದರು. ಎಲ್ಲೆಲ್ಲಿಂದಲೋ ಆಮ್ಲಜನಕದ ಸಿಲಿಂಡರ್‌ಗಳನ್ನು ತಂದು ಮಕ್ಕಳ ಪ್ರಾಣ ಉಳಿಸಲು ಹೆಣಗಾಡಿದ್ದರು. ಆದರೂ ಮಕ್ಕಳು ಕೊನೆಯುಸಿರೆಳೆದಾಗ ಖಾನ್ ಅಸಹಾಯಕತೆಯಿಂದ ಬಿಕ್ಕಿ ಬಿಕ್ಕಿ ಅತ್ತಿದ್ದರು. ಹೆತ್ತ ಕುಡಿಗಳನ್ನು ಕಳೆದುಕೊಂಡ ನೋವಿನಲ್ಲೂ ಅದೆಷ್ಟೋ ತಾಯಂದಿರು ಖಾನ್‌ರ ವೃತ್ತಿನಿಷ್ಠೆಯನ್ನು ಹೊಗಳಿದ್ದರು. ಇವೆಲ್ಲಾ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ ಎಲ್ಲರೂ ಖಾನ್ ಓರ್ವ ಹೀರೋ ಎಂದು ಕೊಂಡಾಡಿದರು. ಒಬ್ಬ ದುಃಕಶ್ಚಿತ್ ಮುಸಲ್ಮಾನನನ್ನು ಹೀರೋ ಎಂದು ಕೊಂಡಾಡುವುದನ್ನು ಚೆಡ್ಡಿಗಳು ಎಂದಾದರೂ ಸಹಿಸಿಯಾರೆ? ಕೂಡಲೇ ಅವರ ಕಾಲಾಳುಗಳು ಕಾರ್ಯಪ್ರವೃತ್ತರಾದರು. ಖಾನ್ ಹೀರೋ ಅಲ್ಲವೇ ಅಲ್ಲ, ಆತ ಒಬ್ಬ ಅತ್ಯಾಚಾರಿ. ಆತ ಆಸ್ಪತ್ರೆಯಿಂದ ಆಮ್ಲಜನಕದ ಸಿಲಿಂಡರ್‌ಗಳನ್ನು ಕದ್ದು ತನ್ನ ಪತ್ನಿ ನಡೆಸುವ ಖಾಸಗಿ ಆಸ್ಪತ್ರೆಗೆ ಸಾಗಿಸಿದ್ದರಿಂದ ಕೊರತೆ ಉಂಟಾಗಿದ್ದು, ಮಕ್ಕಳ ಸಾವಿಗೆ ಆತನೇ ಕಾರಣ. ಈ ಹಿಂದೆ ಆತ ದೆಹಲಿಯಲ್ಲಿ ಬೇರೆಯವರ ಪರವಾಗಿ ವೈದ್ಯ ಪರೀಕ್ಷೆ ಬರೆಯುತ್ತಿದ್ದಾಗ ಸಿಕ್ಕಿಬಿದ್ದಿದ್ದ. ಆತ ಮಣಿಪಾಲದಲ್ಲಿ ವೈದ್ಯ ವಿದ್ಯಾರ್ಥಿಯಾಗಿದ್ದಾಗಲೂ ಲಫಡಾ ಮಾಡಿಕೊಂಡಿದ್ದ. ಇಲ್ಲೂ ಆತ ಒಬ್ಬ ವಿದ್ಯಾರ್ಥಿನಿಯ ಮಾನಾಪಹರಣಕ್ಕೆ ಯತ್ನಿಸಿದ್ದ.... ಇಂತಹ ಸುಳ್ಳುಗಳನ್ನು ಹಬ್ಬಿಸಲಾರಂಭಿಸಿದರು.

ಆದರೆ ವಾಸ್ತವ ಬೇರೆಯದೇ ಆಗಿತ್ತು.

ಆಗಸ್ಟ್ ತಿಂಗಳ ಮೊದಲ ಐದು ದಿನಗಳಲ್ಲೇ 63 ಮಕ್ಕಳು ಬಾಬಾ ರಾಘವದಾಸ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಅಸುನೀಗಿದ್ದರು. ಆಗಸ್ಟ್ 10ರ ರಾತ್ರಿ ಪರಿಸ್ಥಿತಿ ಕೈಮೀರಿತು. ಅವತ್ತು ರಾತ್ರಿ ಎರಡು ಗಂಟೆಗೆ ಆಸ್ಪತ್ರೆಯ ಸಿಬ್ಬಂದಿ ಖಾನ್ ಅವರನ್ನು ಎಬ್ಬಿಸಿ ಪರಿಸ್ಥಿತಿಯನ್ನು ವಿವರಿಸಿದರು. ಆಗ ಕೂಡಲೇ ಖಾನ್ ಸ್ವತಃ ತನ್ನ ಪತ್ನಿಯ ಮತ್ತು ಮಿತ್ರರ ಆಸ್ಪತ್ರೆಗಳಿಂದ ಆಮ್ಲಜನಕದ ಸಿಲಿಂಡರ್‌ಗಳನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ತಮ್ಮ ಜೇಬಿನಿಂದ ದುಡ್ಡು ಕೊಟ್ಟು ಹೆಚ್ಚಿನ ಸಿಲಿಂಡರ್‌ಗಳನ್ನು ಖರೀದಿಸಿದರು. ಇದು ಖಾನ್ ತನ್ನ ಸಾಹಸದ ಬಗ್ಗೆ ಕೊಚ್ಚಿಕೊಂಡ ಮಾತಲ್ಲ, ಬದಲಾಗಿ ಕೇಂದ್ರದ ಪೊಲೀಸ್ ಪಡೆಯಾದ ಸಶಸ್ತ್ರ ಸೀಮಾ ಬಲದ ಸಾರ್ವಜನಿಕ ಸಂಪರ್ಕ ಅಧಿಕಾರಿ ಓ.ಪಿ.ಸಾಹು ಅವರು ನ್ಯೂಸ್ 18 ಎಂಬ ಮಾಧ್ಯಮಕ್ಕೆ ಕೊಟ್ಟಿರುವ ಹೇಳಿಕೆ.

ವೈದ್ಯಕೀಯ ಶಿಕ್ಷಣದ ಅಧಿಕಾರಿ ಕೆ.ಕೆ.ಗುಪ್ತಾ ಎಂಬಾತ "ಡಾ.ಕಫೀಲ್ ಖಾನ್‌ನ ಪಾತ್ರ ನಿಗೂಢವಾಗಿದೆ. ಆತ ಎಲ್ಲಿಂದ ಸಿಲಿಂಡರ್‌ಗಳನ್ನು ಪಡೆದ ಎಂಬುದನ್ನು ವಿಚಾರಣೆ ಮಾಡುತ್ತಿದ್ದೇವೆ" ಎಂದು ಮಾಧ್ಯಮಗಳಿಗೆ ಹೇಳಿದಾಗ ಸಾಹು ಅವರು ಪ್ರತಿಕ್ರಿಯಿಸಿದ್ದು ಹೀಗೆ: "ಆಗಸ್ಟ್ 10ರ ರಾತ್ರಿ ಪರಿಸ್ಥಿತಿ ಕೈಮೀರಿದಾಗ ಡಾ. ಖಾನ್ ಅವರು ನಮ್ಮ ದಳದ ಡಿಐಜಿ ಅವರನ್ನು ಸಂಪರ್ಕಿಸಿ ಬೇರೆ ಬೇರೆ ಕಡೆಗಳಿಂದ ಸಿಲಿಂಡರ್‌ಗಳನ್ನು ವೈದ್ಯಕೀಯ ಆಸ್ಪತ್ರೆಗೆ ಸಾಗಿಸಲು ಒಂದು ಲಾರಿ ಬೇಕು ಎಂದು ಕೇಳಿದರು. ಆಗ ನಮ್ಮ ಡಿಐಜಿ ಒಂದು ಲಾರಿಯನ್ನು ಕೊಟ್ಟರಲ್ಲದೆ ಹನ್ನೊಂದು ಜವಾನರನ್ನು ಅವರೊಟ್ಟಿಗೆ ಕಳುಹಿಸಿಕೊಟ್ಟರು. ಅವತ್ತು ರಾತ್ರಿ ಹಲವಾರು ಗಂಟೆಗಳ ಕಾಲ ನಮ್ಮ ಜವಾನರು ವಿವಿಧ ಕಡೆಗಳಿಂದ ಆಮ್ಲಜನಕದ ಸಿಲಿಂಡರ್‌ಗಳನ್ನು ಸಾಗಿಸಿದರು. ದೂರದ ಖಲೀಲಾಬಾದ್‌ನಲ್ಲಿರುವ ಗೋದಾಮಿನಿಂದಲೂ ಸಾಗಿಸಿದರು. ಅವತ್ತಿನ ತುರ್ತು ಪರಿಸ್ಥಿತಿಯ ವಿರುದ್ಧ ಡಾ.ಖಾನ್ ಮತ್ತು ನಮ್ಮ ಜವಾನರು ಹೋರಾಡಿದರು."

ಇನ್ನು ಖಾನ್ ಓರ್ವ ಅತ್ಯಾಚಾರಿ ಎಂಬ ಆರೋಪ. ಆತನ ವಿರುದ್ಧ ಅಂತಹದ್ದೊಂದು ಆರೋಪ ಇದ್ದದ್ದು ನಿಜ. ಆದರೆ ತನಿಖೆ ಮಾಡಿದ ಗೋರಖ್‌ಪುರದ ಪೊಲೀಸರು, ಅದು ಸುಳ್ಳು ಆರೋಪ ಎಂದು ಪತ್ತೆ ಮಾಡಿ 2015ರ ಏಪ್ರಿಲ್ 3 ನೇ ತಾರಿಖು ವರದಿಯನ್ನು



ನೀಡಿ ಆಗಿದೆ. ಮಾತ್ರವಲ್ಲ ಅತ್ಯಾಚಾರ ಆರೋಪವು ಖಾನ್ ವಿರುದ್ಧದ ಪಿತೂರಿಯ ಭಾಗವಾಗಿತ್ತು ಎಂದಿದ್ದಾರೆ.

ಇನ್ನು ಖಾನ್ ಸರ್ಕಾರಿ ಆಸ್ಪತ್ರೆಯಿಂದ ಆಮ್ಲಜನಕದ ಸಿಲಿಂಡರ್‌ಗಳನ್ನು ತನ್ನ ಪತ್ನಿಯ ಆಸ್ಪತ್ರೆಗೆ ಸಾಗಿಸಿದ್ದ ಎಂಬ ಆರೋಪ. ಮೊದಲನೆಯದಾಗಿ ಆಗಸ್ಟ್ 11ರಂದು ಖಾನ್‌ನನ್ನು ಜನ ಕೊಂಡಾಡಿದ ನಂತರವೇ ಈ ಆರೋಪ ಕೇಳಿಬಂದದ್ದು, ಅದಕ್ಕೂ ಮುನ್ನ ಆತನ ವಿರುದ್ಧ ಇಂತಹ ಆರೋಪವೇ ಇರಲಿಲ್ಲ. ಎರಡನೆಯದಾಗಿ ಆತ ಆಮ್ಲಜನಕವನ್ನು ಹೇಗೆ ಕದ್ದಿರಬಹುದು ಎಂಬುದು. ಈ ಕುರಿತು ಸಂದೀಪನ್ ಶರ್ಮಾ ಎಂಬುವವರು ಫಸ್ಟ್‌ಪೋಸ್ಟ್.ಕಾಮ್‌ನಲ್ಲಿ ಬರೆದಿರುವ ಲೇಖನದಲ್ಲಿ ಹೀಗೆ ಪ್ರಶ್ನಿಸಿದ್ದಾರೆ: "ಆಸ್ಪತ್ರೆಯಲ್ಲಿ ಪೈಪುಗಳ ಮೂಲಕ ಸರಬರಾಜು ಆಗುವ ದ್ರವರೂಪದಲ್ಲಿರುವ ಆಮ್ಲಜನಕವನ್ನು ಖಾನ್ ಹೇಗೆ ಕದ್ದಿರಬಹುದು? ಅದೇನು ಬಾಟಲಿಯಲ್ಲಿ ನೀರು ತುಂಬಿಸಿಕೊಂಡು ಹೋದಷ್ಟು ಸುಲಭವೆ? ಇಲ್ಲ ಆತ ಸಿಲಿಂಡರ್‌ಗಳನ್ನೇ ಕದ್ದಿದ್ದ ಎನ್ನುವುದಾದರೆ ಯಾಕೆ ಈ ಹಿಂದೆ ಅದನ್ನು ಯಾರೂ ಗಮನಿಸಿರಲಿಲ್ಲ? ಯಾಕೆ ಆ ಕುರಿತು ಆರೋಪ ಮಾಡಿರಲಿಲ್ಲ? ಯಾಕೆ ಇದೆಲ್ಲ ಖಾನ್ ಒಬ್ಬ ಹೀರೋ ಆದ ನಂತರವೇ ಉದ್ಭವಿಸುತ್ತಿವೆ?"

ಇನ್ನು ಖಾನ್ ದೆಹಲಿಯಲ್ಲಿ ಬೇರೆಯವರ ಪರವಾಗಿ ವೈದ್ಯ ಪರೀಕ್ಷೆ ಬರೆಯುತ್ತಿದ್ದಾಗ ಸಿಕ್ಕಿಬಿದ್ದಿದ್ದ ಎನ್ನುವುದಕ್ಕೆ ಇಲ್ಲಿಯವರೆಗೂ ಯಾರೂ ಪುರಾವೆಯನ್ನು ಕೊಟ್ಟಿಲ್ಲ. ಹಾಗೆಯೇ, ಆತ ಮಣಿಪಾಲದಲ್ಲಿ ವೈದ್ಯಕೀಯ ಓದುತ್ತಿದ್ದಾಗ ಲಫಡಾ ಮಾಡಿಕೊಂಡಿದ್ದ; ಇಲ್ಲೂ ಆತ ಒಬ್ಬ ವಿದ್ಯಾರ್ಥಿನಿಯ ಮಾನಾಪಹರಣಕ್ಕೆ ಯತ್ನಿಸಿದ್ದ ಎಂಬುದನ್ನೂ ಯಾರೂ ಇಲ್ಲಿಯವರೆಗೆ ದೃಢಪಡಿಸಿಲ್ಲ. ಈ ಆರೋಪಗಳು ನಿಜವೇ ಆಗಿದ್ದರೆ ಇಷ್ಟು ಹೊತ್ತಿಗೆ ಮೋದಿ ಭಕ್ತನೂ, ಬಿಜೆಪಿ ಬೆಂಬಲಿಗನೂ ಆಗಿರುವ ಮಣಿಪಾಲದ ಮೋಹನ್‌ದಾಸ್ ಪೈ ಮಾಮ ಈ ಕುರಿತು ಪುರಾವೆ ಸಹಿತ ಟ್ವೀಟ್ ಮಾಡಿರುತ್ತಿದ್ದ.

ಇವೆಲ್ಲ ಆರೋಪಗಳು ಠುಸ್ ಆದಾಗ ಆದಿತ್ಯನಾಥನ ಸರ್ಕಾರ "ಖಾನ್ ಸರ್ಕಾರಿ ವೈದ್ಯನಾಗಿದ್ದರೂ ಆತ ಖಾಸಗಿಯಾಗಿಯೂ ಕೆಲಸ ಮಾಡುತ್ತಿದ್ದ" ಎಂದು ಆರೋಪಿಸಿದೆ. ದೇಶದಾದ್ಯಂತ ಅದೆಷ್ಟೋ ಸರ್ಕಾರಿ ವೈದ್ಯರು ಖಾಸಗಿ ಪ್ರಾಕ್ಟೀಸ್ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ಅದೇ ಗೋರಖ್‌ಪುರದ ವೈದ್ಯಕೀಯ ಕಾಲೇಜಿನ ಸಿಬ್ಬಂದಿ ವಾಸಿಸುವ ಕ್ವಾರ್ಟರ್ಸ್‌ನಲ್ಲಿ ಅದೆಷ್ಟೋ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಹಾಗೆ ಮಾಡುವುದು ಅಕ್ರಮವಾಗಿದ್ದರೆ ಅವರನ್ನೂ ವಜಾ ಮಾಡಬೇಕಲ್ಲವೇ? ಆದರೆ ಖಾನ್‌ನನ್ನು ಮಾತ್ರ ಗುರಿಯಾಗಿಸಿದ್ದು ಆತ ಮುಸಲ್ಮಾನ ಎಂಬ ಕಾರಣಕ್ಕೆ ಅಲ್ಲವೇ??

ಚೆಡ್ಡಿಗಳು ಖಾನ್ ವಿರುದ್ಧ ಇನ್ನೊಂದು ಆರೋಪವನ್ನೂ ಮಾಡಿದರು. ಅದೇನೆಂದರೆ, "ಖಾನ್‌ನ ನಿಷ್ಠೆ ಅಖಿಲೇಶ್ ಯಾದವನಿಗೆ. ಆದ್ದರಿಂದ ಇಂತಹ ಕೃತ್ಯ ಎಸಗಿ ಆದಿತ್ಯನಾಥನಿಗೆ ಕೆಟ್ಟ ಹೆಸರು ತಂದು ಮತ್ತೆ ಅಖಿಲೇಶ್ ಯಾದವ್ ಮುಖ್ಯಮಂತ್ರಿ ಆಗಬೇಕೆಂಬುದು ಖಾನ್‌ನ ಹುನ್ನಾರ" ಎಂಬುದು. ಇದು ಎಷ್ಟು ಹಾಸ್ಯಾಸ್ಪದವಾಗಿದೆ ಎಂದರೆ, ಹಾಗೊಮ್ಮೆ ಆದಿತ್ಯನಾಥ ರಾಜೀನಾಮೆ ಕೊಟ್ಟರೆ ಬೇರೆ ಯಾರೋ ಬಿಜೆಪಿಯವರೇ ಮುಖ್ಯಮಂತ್ರಿ ಆಗುತ್ತಾರೆಯೇ ಹೊರತು ಅಲ್ಲಿ ಮತ್ತೊಮ್ಮೆ ಚುನಾವಣೆ ನಡೆಯುವುದಿಲ್ಲ. ಇಂತಹ ಅಸಾಧ್ಯದ ಆರೋಪಗಳನ್ನು ಮಾಡುವ ಚೆಡ್ಡಿಗಳಿಗೆ ಕನಿಷ್ಠ ಅಷ್ಟು ಬುದ್ಧಿಯೂ ಇಲ್ಲ.

ಅಮಾಯಕ ಹಸುಳೆಗಳನ್ನು ಬಲಿ ತೆಗೆದುಕೊಂಡ ಆದಿತ್ಯನಾಥ್ ಮತ್ತು ಆತನ ವೈದ್ಯಕೀಯ ಶಿಕ್ಷಣ ಮಂತ್ರಿ ಆಶುತೋಷ್ ತಾಂಡನ್ ಮಕ್ಕಳ ಸಾವಿಗೆ ಕಾರಣ ಆಮ್ಲಜನಕದ ಕೊರತೆಯಲ್ಲ; ಬದಲಾಗಿ ಆಸ್ಪತ್ರೆಯಲ್ಲಿನ ಶುಚಿತ್ವದ ಕೊರತೆ, ಮಿದುಳು ರೋಗ ಎಂದೆಲ್ಲ ಸಬೂಬು ನೀಡಿದ್ದಾರೆ. ಮಾತ್ರವಲ್ಲ ಆಸ್ಪತ್ರೆಯಲ್ಲಿನ ಸ್ಥಿತಿಗತಿ ಬಗ್ಗೆ ತಮ್ಮಿಬ್ಬರಿಗೂ ಗೊತ್ತಿರಲಿಲ್ಲ; ಆಮ್ಲಜನಕದ ಕೊರತೆಯ ಬಗ್ಗೆಯೂ ಗೊತ್ತಿರಲಿಲ್ಲ ಎಂದಿದ್ದಾರೆ.


ಆದರೆ ವಾಸ್ತವವೇನೆಂದರೆ ಆಸ್ಪತ್ರೆಗೆ ಆಗಸ್ಟ್ 9ರಂದು ಆದಿತ್ಯನಾಥ ಮತ್ತು ತಾಂಡನ್ ಭೇಟಿ ನೀಡಿದ್ದರು. ಆಗ ಅಲ್ಲಿನ ಶುಚಿತ್ವದ ಕೊರತೆ ಅವರ ಕಣ್ಣಿಗೆ ಬೀಳಲಿಲ್ಲವೇ? ಇನ್ನು ಆಮ್ಲಜನಕದ ಕೊರತೆಯ ಬಗೆಗಿನ ಅವರಿಬ್ಬರ ಅಜ್ಞಾನ ಕುರಿತು ಟೆಲಿಗ್ರಾಫ್ ಪತ್ರಿಕೆಯು ನಿನ್ನೆ ಪ್ರಕಟಿಸಿರುವ ವರದಿ ನಿಜಾಂಶವನ್ನು ತೆರೆದಿಟ್ಟಿದೆ. ಆ ಪತ್ರಿಕೆಯಲ್ಲಿನ ವಿವರಗಳು ಹೀಗಿವೆ:

ಆಸ್ಪತ್ರೆಗೆ ಆಮ್ಲಜನಕ ಪೂರೈಸುತ್ತಿದ್ದ ಕಂಪನಿಗೆ ಹಣ ನೀಡಿರಲಿಲ್ಲ ಎಂಬ ಅಂಶ ನಮ್ಮ ಗಮನಕ್ಕೆ ಬಂದಿದ್ದು ಆಗಸ್ಟ್ 4ರಂದು. ಈ ಬಗ್ಗೆ ನಮಗೆ ವೈದ್ಯಕೀಯ ಆಸ್ಪತ್ರೆಯ ಪ್ರಾಂಶುಂಪಾಲ ರಾಜೀವ್ ಮಿಶ್ರ ತಿಳಿಸಿರಲಿಲ್ಲ, ಆದ್ದರಿಂದ ಅವರನ್ನೂ ವಜಾ ಮಾಡಿದ್ದೇವೆ ಎಂದು ಅಲ್ಲಿನ ಆರೋಗ್ಯ ಮಂತ್ರಿ ಸಿದ್ಧಾರ್ಥನಾಥ್ ಸಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಮಂತ್ರಿ ಆಶುತೋಶ್ ತಾಂಡನ್ ಹೇಳಿದ್ದಾರೆ.

ಆದರೆ ಆರೋಗ್ಯ ಇಲಾಖೆಯಡಿ ಬರುವ ಆಸ್ಪತ್ರೆಯ ಪ್ರಾಂಶುಪಾಲ ಮಿಶ್ರಾ ಅವರು ಮಾರ್ಚ್ 22ರಂದೇ ಆರೋಗ್ಯ ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆದು ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಕಟ್ಟಬೇಕು ಎಂದು ತಿಳಿಸಿದ್ದರು. ಈ ಪತ್ರದೊಂದಿಗೆ ಆಮ್ಲಜನಕವನ್ನು ಪೂರೈಸುತ್ತಿದ್ದ ಪುಷ್ಪಾ ಸೇಲ್ಸ್ ಲಿಮಿಟೆಡ್ ಕಂಪನಿಯು ಕೊಟ್ಟಿದ್ದ ಪತ್ರವನ್ನೂ ಲಗತ್ತಿಸಿದ್ದರು. ಆದರೆ ಇಲಾಖೆ ಏನನ್ನೂ ಮಾಡಲಿಲ್ಲ.

ಎರಡು ವಾರಗಳ ನಂತರ, ಅಂದರೆ ಏಪ್ರಿಲ್ 3ರಂದು, ಮಿಶ್ರಾ ಅವರು ವೈದ್ಯಕೀಯ ಶಿಕ್ಷಣ ಇಲಾಖೆಯ ಮುಖ್ಯಸ್ಥರಿಗೆ ಇನ್ನೊಂದು ಪತ್ರ ಬರೆದರು. ಅದರ ಪ್ರತಿಗಳನ್ನು ಆರೋಗ್ಯ ಇಲಾಖೆಯ ಮುಖ್ಯಸ್ಥರಿಗೂ ಕಳುಹಿಸಿದರು. ಜೊತೆಗೆ ಅವತ್ತೇ ಪುಷ್ಪಾ ಸೇಲ್ಸ್ ಕೊಟ್ಟಿದ್ದ ಇನ್ನೊಂದು ನೋಟಿಸನ್ನು ಲಗತ್ತಿಸಿದ್ದರು. ಇವುಗಳ ಪ್ರತಿಗಳನ್ನು ಸಿಂಗ್ ಮತ್ತು ತಾಂಡನ್ ಅವರಿಗೂ ಕಳುಹಿಸಿದ್ದರು. ಆದರೂ ಇಲಾಖೆ ಏನನ್ನೂ ಮಾಡಲಿಲ್ಲ.

ಮತ್ತೆ ಏಪ್ರಿಲ್ 17ರಂದು, ಮಿಶ್ರಾ ಈ ಕುರಿತು ಅಡಿಷನಲ್ ಚೀಫ್ ಸೆಕ್ರೆಟರಿ ಅವರಿಗೆ ಪತ್ರ ಬರೆದು, ಅದರ ಪ್ರತಿಗಳನ್ನು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಿದರು. ಆಗಲೂ ಇಲಾಖೆ ಏನನ್ನೂ ಮಾಡಲಿಲ್ಲ.



ಮತ್ತೊಮ್ಮೆ ಏಪ್ರಿಲ್ 24 ರಂದು ಪತ್ರ ಬರೆದರು. ಆಗಲೂ ಇಲಾಖೆ ಏನನ್ನೂ ಮಾಡಲಿಲ್ಲ.

ಹೀಗೆ ಮೇ 2, ಮೇ 6, ಮೇ 29, ಜೂನ್ 28, ಜುಲೈ 6, ಜುಲೈ 18 ರಂದು ಮೇಲಿಂದ ಮೇಲೆ ಆಮ್ಲಜನಕ ಸರಬರಾಜುದಾರನಿಗೆ ಪಾವತಿಸಿರಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಿ ಎಂದು ಮತ್ತೆಮತ್ತೆ ಕೇಳಿದರು. ಮಾತ್ರವಲ್ಲ, ಅವರು ಹೀಗೆ ಬರೆದ ಪತ್ರಗಳೊಂದಿಗೆ ಲಗತ್ತಿಸಿದ್ದ ಪುಷ್ಪಾ ಸೇಲ್ಸ್ ಕಂಪನಿಯು "ಕೊಡಬೇಕಿರುವ ಹಣವನ್ನು ಕೊಡದಿದ್ದರೆ ಸರಬರಾಜನ್ನು ನಿಲ್ಲಿಸುತ್ತೇವೆ" ಎಂದು ಐದು ಬಾರಿ ಕೊಟ್ಟ ಎಚ್ಚರಿಕೆಯ ಪತ್ರಗಳೂ ಇದ್ದವು.

ಆಗಸ್ಟ್ 1ರಂದು ಅಡಿಷನಲ್ ಚೀಫ್ ಸೆಕ್ರೆಟರಿ ಅವರಿಗೆ ಮತ್ತೆ ಇನ್ನೊಂದು ಪತ್ರ ಬರೆದ ಮಿಶ್ರಾ, ಪುಷ್ಪಾ ಕಂಪನಿಯು "ಸರ್ಕಾರದಿಂದ ತನಗೆ 63.65 ಲಕ್ಷ ರೂಪಾಯಿಗಳು ಬಾಕಿ ಇವೆ. ಆಮ್ಲಜನಕ ಸರಬರಾಜಿನಲ್ಲಿ ಅಡೆತಡೆ ಉಂಟಾಗಬಾರದೆಂದರೆ ಈ ಮೊತ್ತವನ್ನು ಪಾವತಿ ಮಾಡಿ" ಎಂದಿದ್ದ ಪತ್ರವನ್ನೂ ಲಗತ್ತಿಸಿದ್ದರು ಮತ್ತು ಅವುಗಳ ಪ್ರತಿಗಳನ್ನು ತಾಂಡನ್ ಅವರಿಗೂ ಕಳುಹಿಸಿದ್ದರು.

ಹೀಗೆ ಮಾರ್ಚ್ ತಿಂಗಳಿನಿಂದಲೇ ಮಿಶ್ರಾ ಮತ್ತೆಮತ್ತೆ ಪತ್ರ ಬರೆಯುತ್ತಿದ್ದರೂ ಏನನ್ನೂ ಮಾಡದ ಮಂತ್ರಿ ತಾಂಡನ್ ಇದು ತನ್ನ ಗಮನಕ್ಕೆ ಬಂದಿದ್ದು ಆಗಸ್ಟ್ 4ರಂದು ಎನ್ನುತ್ತಾನೆ.

ಅದಕ್ಕೂ ಮಿಗಿಲಾದ ವಿಚಿತ್ರ ಯಾವುದೆಂದರೆ ಇದೇ ತಾಂಡನ್ ಮತ್ತು ಆದಿತ್ಯನಾಥ್ ಆಗಸ್ಟ್ 9ರಂದು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಪುಷ್ಪಾ ಸೇಲ್ಸ್ ಕಂಪನಿಯ ಅಧಿಕಾರಿಗಳು ಅವರಿಬ್ಬರನ್ನು ಭೇಟಿಯಾಗಿ "ಆರು ತಿಂಗಳಿಂದ ನಮಗೆ ಕೊಡಬೇಕಿರುವ ಬಾಕಿ ಹಣ ಬಂದಿಲ್ಲ" ಎಂದು ಮನವಿ ಪತ್ರ ಕೊಡುತ್ತಾರೆ. ಆಸ್ಪತ್ರೆಯ ಮೂಲಗಳ ಪ್ರಕಾರ "ಈ ದೂರನ್ನು ಕೇಳಿದ ಕೂಡಲೆ ಆದಿತ್ಯನಾಥ್, ತಾಂಡನ್‌ನತ್ತ ಪ್ರಶ್ನಾರ್ಥಕವಾಗಿ ನೋಡಿದರು. ಆಮೇಲೆ ಆದಿತ್ಯನಾಥ ಏನನ್ನೂ ಹೇಳಲಿಲ್ಲ." ಅವತ್ತು ಆದಿತ್ಯನಾಥ ಆಸ್ಪತ್ರೆಯಿಂದ ಹೋದ ನಂತರ ಪುಷ್ಪಾ ಕಂಪನಿಯು ಆಮ್ಲಜನಕ ಸರಬರಾಜನ್ನು ನಿಲ್ಲಿಸಿತು. ಕೊನೆಗೆ 23 ಕೂಸುಗಳು ಸತ್ತ ನಂತರ ಆದಿತ್ಯನಾಥ "ಆಮ್ಲಜನಕದ ಕೊರತೆ ಬಗ್ಗೆ ನನಗೆ ಗೊತ್ತಿರಲಿಲ್ಲ" ಎಂದು ಆಗಸ್ಟ್ 10ರಂದು ಹೇಳಿದ. ಅವತ್ತೇ ರಾತ್ರಿ ಇನ್ನೂ 32 ಮಕ್ಕಳು ಮಡಿದನಂತರ ಸರ್ಕಾರ ಪುಷ್ಪಾ ಕಂಪನಿಗೆ 52 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಈಗಲೂ ಆಮ್ಲಜನಕ ಕೊರತೆ ಮಕ್ಕಳ ಸಾವಿಗೆ ಕಾರಣವಲ್ಲ ಎನ್ನುತ್ತಿರುವ ತಾಂಡನ್ ಮತ್ಯಾವ ಕಾರಣಕ್ಕೆ ಪ್ರಾಂಶುಪಾಲ ಮಿಶ್ರಾ ಅವರನ್ನು ವಜಾ ಮಾಡಿದ್ದಾನೆ. ತಾಂಡನ್ ಪ್ರಕಾರ ಪುಷ್ಪಾ ಕಂಪನಿಯಿಂದ ಮಿಶ್ರಾ ಕಿಕ್‌ಬ್ಯಾಕ್ ನಿರೀಕ್ಷಿಸಿದ್ದರಿಂದ ಆತ ಹಣವನ್ನು ಬಿಡುಗಡೆ ಮಾಡಿರಲಿಲ್ಲ. ಆದರೆ ಇಷ್ಟೆಲ್ಲ ಪತ್ರ ವ್ಯವಹಾರ ನಡೆಯುತ್ತಿದ್ದಾಗಲೂ ವೈದ್ಯಕೀಯ ಆಸ್ಪತ್ರೆಯ ಅಕೌಂಟಿನಲ್ಲಿ 3.86 ಕೋಟಿ ರೂಪಾಯಿಗಳಿದ್ದವು. ಆದರಿಂದಲೇ ಮಿಶ್ರಾ ಹಣ ಬಿಡುಗಡೆ ಮಾಡಬಹುದಿತ್ತು. ಆದರೆ ಆರೋಗ್ಯ ಇಲಾಖೆಯ ಮೂಲಗಳ ಪ್ರಕಾರ ಹಣ ಬಿಡುಗಡೆ ಮಾಡದಂತೆ ಸರ್ಕಾರದ ಉನ್ನತ ಮಂತ್ರಿಗಳಿಂದಲೇ ಆದೇಶ ಬಂದಿತ್ತು.

ಇದೆಲ್ಲದರ ಅರ್ಥ ಆದಿತ್ಯನಾಥನ ಮಂತ್ರಿಗಳಿಗೆ ಲಂಚ ಸಿಗದಿದ್ದರಿಂದ ಅವರು ಹಣ ಬಿಡುಗಡೆ ಮಾಡದೆ 79 ಮಕ್ಕಳ ಸಾವಿಗೆ ಕಾರಣರಾಗಿದ್ದಾರೆ.

ಇನ್ನು ಮೋದಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಿದೆ. 2016ರ ಏಪ್ರಿಲ್‌ನಲ್ಲಿ ಕೇರಳದ ಕೊಲ್ಲಂ ಎಂಬಲ್ಲಿ ದೇವಸ್ಥಾನಕ್ಕೆ ಬೆಂಕಿ ಬಿದ್ದು 15 ಜನ ಸಾವಿಗೀಡಾಗಿದ್ದರು. ಆಗ ಕೂಡಲೇ 2,000 ಕಿಲೋಮೀಟರ್ ದೂರದಲ್ಲಿರುವ ಕೇರಳಕ್ಕೆ ಮೋದಿ ಧಾವಿಸಿದ್ದ. ಮಾತ್ರವಲ್ಲ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸಲು ತನ್ನೊಂದಿಗೆ ವೈದ್ಯರನ್ನೂ ಕರೆದುಕೊಂಡು ಹೋಗಿದ್ದ. ಯಾಕೆಂದರೆ ಆ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಎದುರಾಗುವುದಿತ್ತು. ಆದರೆ ಈಗ ದೆಹಲಿಯಿಂದ ಕೇವಲ 300 ಕಿಲೋಮೀಟರ್ ದೂರದಲ್ಲಿರುವ ಗೋರಖ್‌ಪುರದಲ್ಲಿ 79 ಕಂದಮ್ಮಗಳು ಬಲಿಯಾಗಿದ್ದರೂ ಮೋದಿ ಅತ್ತ ಕಡೆ ಸುಳಿದಿಲ್ಲ. ಯಾಕೆಂದರೆ ಅಲ್ಲಿ ಚುನಾವಣೆಗಳು ನಡೆಯುವುದಿಲ್ಲ.

ಇನ್ನು ಜಗತ್ತಿನ ಯಾವುದೇ ಮೂಲೆಯಲ್ಲಿ ಅನಾಹುತ ಸಂಭವಿಸಿದರೆ ಮೋದಿ ಕೂಡಲೇ ಟ್ವೀಟ್ ಮಾಡುತ್ತಾನೆ, ವಿಷಾದ ವ್ಯಕ್ತಪಡಿಸುತ್ತಾನೆ... ಆದರೆ ಗೋರಖ್‌ಪುರ್ ದುರಂತ ಕುರಿತು ಇಲ್ಲಿಯವರೆಗೆ ಆತ ಚಕಾರ ಎತ್ತಿಲ್ಲ. ಅವರ ಭಂಡತನಕ್ಕೆ ಮಿತಿಯೇ ಇಲ್ಲ. ■

ಉತ್ತರ ಕನ್ನಡ: ಟಿಕೆಟ್ ಚಟಗಾರರ ತಂಟೆಗೆ ತತ್ತರಿಸುತ್ತಿದೆ ಕೇಸರಿ ಪಾಳೆಯ


ಅನಂತಕುಮಾರ್ ಹೆಗಡೆ


ಉತ್ತರ ಕನ್ನಡ ಜಿಲ್ಲೆಯ ಬಿಜೆಪಿ ಶಾಸಕಗಿರಿ ತೆವಲಿಗರ ನೂಕುನುಗ್ಗಲಿಗೆ ಕುಸಿದುಬಿದ್ದಿದೆ! ಜಿಲ್ಲೆಯಲ್ಲಿ ಒಟ್ಟು ಆರು ವಿಧಾನಸಭಾ ಕ್ಷೇತ್ರಗಳಿದ್ದು ಒಂದೊಂದರಲ್ಲಿ ಕನಿಷ್ಠ ಅರ್ಧ ಡಜನ್‌ನಿಂದ ಭರ್ತಿ ಎರಡು ಡಜನ್‌ತನಕ ಉಮೇದುವಾರರು ಸಾಲುಗಟ್ಟಿ ನಿಂತಿದ್ದಾರೆ. ಇವರ್‍ಯಾರೂ ಸುಮ್ಮನೇ ನಿಂತಿಲ್ಲ, ಒಬ್ಬನ ಕಾಲು ಮತ್ತೊಬ್ಬನ ಕೈಲಿದೆ. ಮೋದಿ-ಶಾ ಜೋಡಿಯ ಷಡ್ಯಂತ್ರ ಬಿಜೆಪಿಯನ್ನು ಗೆಲ್ಲಿಸುತ್ತದೆಂಬ ಭ್ರಮೆಗೆ ಬಿದ್ದಿರುವ ಚೆಡ್ಡಿ ಚಿತುರರು ತಾವೇ ಕ್ಯಾಂಡಿಡೇಟೆಂದು ಘೋಷಿಸಿಕೊಂಡು ಕ್ಷೇತ್ರದಲ್ಲಿ ಅಂಡಲೆಯುತ್ತಿದ್ದಾರೆ. ಆದರೆ ಟಿಕೆಟ್ ಯಾರಿಗೆಂಬುದು ಮಾತ್ರ ಪಕ್ಕಾ ಆಗದೆ ಕಾರ್ಯಕರ್ತರು ಗೊಂದಲಕ್ಕೆ ಬಿದ್ದಿದ್ದಾರೆ. ಈ ಒಳ ಗುದುಮುರಿಗೆ ಜಿಲ್ಲೆಯ ಕೇಸರಿ ಕ್ಯಾಂಪ್ ಹೈರಾಣಾಗಿ ಹೋಗಿದೆ.

ಜಿಲ್ಲಾ ಬಿಜೆಪಿಯಲ್ಲಿ ಸ್ಪಷ್ಟವಾಗಿ ಎರಡು ಬಣವಿದೆ. ಒಂದಕ್ಕೆ ರೌಡಿ ಸಂಸದ ಅನಂತಕುಮಾರ ಹೆಗಡೆ ಯಾನೆ ಅನಂತ್ಮಾಣಿ ಕ್ಯಾಪ್ಟನ್; ಮತ್ತೊಂದಕ್ಕೆ ಮಾಜಿ ಮಂತ್ರಿ ಕಾಗೇರಿ ವಿಶ್ವೇಶ್ವರ ಹೆಗಡೆ ಉರುಫ್ ಕಾಗೇರಿ ಮಾಣಿಯೇ ಮುಂದಾಳು. ಈ ವೈರಿ ಮಾಣಿಗಳ ಕಚ್ಚಾಟ ದಿನಕ್ಕೊಂದು ನಮೂನೆಯ ಕದನ ಕುತೂಹಲ ಚೆಡ್ಡಿ ಬಳಗಕ್ಕೆ ಮೂಡಿಸುತ್ತಿದೆ. ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿರುವ ಅನಂತ್ಮಾಣಿಗೆ ಜಿಲ್ಲೆಯಲ್ಲಿ ಬಿಜೆಪಿ ಗೆಲ್ಲಬೇಕೆಂಬ ಬದ್ಧತೆಯೇನೂ ಇಲ್ಲ, ಆತನದು ಎರಡಂಶದ ರಾಜಕೀಯ. ಒಂದು, ತಾನು ಕುಮಟಾ ಅಥವಾ ಯಲ್ಲಾಪುರದಿಂದ ಎಮ್ಮೆಲ್ಲೆಯಾಗಿ ಯಡ್ಡಿ ಸರ್ಕಾರದಲ್ಲಿ ಸರದಾರನಾಗಬೇಕು ಎಂಬುದು. ಎರಡನೆಯದು, ತನ್ನ ಹಿತಶತ್ರು ಕಾಗೇರಿ ಮಾಣಿ ಶಿರಸಿಯಲ್ಲಿ ಗೆಲ್ಲದಂತೆ ಮಾಡೋದು. ಈ ಮನೆಮುರುಕು ಕಾರ್ಯಾಚರಣೆ ಈಗಾಗಲೇ ಆತ ಶುರು ಹಚ್ಚಿಕೊಂಡಿದ್ದಾನೆ.

"ಆರು ಕ್ಷೇತ್ರದಲ್ಲಿ ಐದು ಗೆಲ್ತೇವೆ.... ಒಂದು ದೇವರಿಗೆ ಬಿಡ್ತೇನೆ..." ಎಂದು ಹೇಳುವ ಅನಂತ್ಮಾಣಿ ಹಿತಶತ್ರು ಕಾಗೇರಿ ಬಲಿಗೆ ಬಾಯ್ತೆರೆದು ಕುಂತಿರುವುದು ಜಿಲ್ಲೆಯ ಬಿಜೆಪಿಗಳಿಗೆಲ್ಲ ಗೊತ್ತಿರುವ ರಹಸ್ಯ. ಆತ ದೇವರಿಗೆ ಬಿಡುವ ಕ್ಷೇತ್ರವೆಂದರೆ ಶಿರಸಿ. ಅಲ್ಲಿ ಆತ ಕಾಗೇರಿಗೆ ಸೋಲಿಸಲು ಜೆಡಿಎಸ್‌ನ ಜಾತಿ ಬಂಧು ಶಶಿಭೂಷಣ್ ಹೆಗಡೆ ಅಥವಾ ಕಾಂಗ್ರೆಸ್‌ನಿಂದ ಕ್ಯಾಂಡಿಡೇಟಾದರೆ ದೀವರ ಧೀರ ಭೀಮಣ್ಣ ನಾಯ್ಕನಿಗೆ ಬೆಂಬಲಿಸುವುದು ಗ್ಯಾರಂಟಿ. ಈ ಇಬ್ಬರಿಗೂ ಆತ ಒಳಗೊಳಗೇ ಪ್ರೋತ್ಸಾಹ ಕೊಡುತ್ತಿದ್ದಾನೆ. ಇಡೀ ಜಿಲ್ಲಾ ಬಿಜೆಪಿ ಕಬ್ಜಾ ಮಾಡಿಕೊಂಡಂತೆ ಹಾರಾಡುತ್ತಿರುವ ಅನಂತ್ಮಾಣಿಗೆ ಕಳೆದ ಬಾರಿಗಿಂತ ಹೆಚ್ಚು ಸೀಟು ಹೊಡೆವ ಯಾವ ತಂತ್ರಗಾರಿಕೆಯೂ ಈವರೆಗೆ ಹೊಳೆದಿಲ್ಲ, ಪುಂಡಾಟ, ಕೋಮು ಮಾತುಗಾರಿಕೆಯ ಆತನ ತುಕ್ಕು ಹಿಡಿದ ಮೆದುಳಿಗೆ ಪಾರ್ಟಿ ಉದ್ಧಾರ ಮಾಡುವ ಸ್ಟ್ರೆಟಜಿ ಅದ್ಹೇಗೆ ಹುಡುಕಲಾದೀತು ಎಂಬುದು ವಿರೋಧಿ ಗ್ಯಾಂಗಿನ ಮೂದಲಿಕೆ.

ಮಜಾ ಅಂದರೆ, ಅನಂತ್ಮಾಣಿಗಷ್ಟೇ ಅಲ್ಲ, ಕಾಗೇರಿ ಮಾಣಿಗೂ ಜಿಲ್ಲಾ ಬಿಜೆಪಿಯನ್ನು ಯಾವ ತಂತ್ರಗಾರಿಕೆ ಗೆಲ್ಲಿಸಬಲ್ಲದೆಂಬ ಸ್ಪಷ್ಟತೆ ಇಲ್ಲದಾಗಿದೆ. ಯಡ್ಡಿ ಪ್ರಭಾವ-ಪುವರ ಉತ್ತರ ಕನ್ನಡದಲ್ಲಿ ನಡೆಯದು. ಐದು ಬಾರಿ ಸಂಸದನಾದರೂ ಅನಂತ್ಮಾಣಿಗೆ ಜಿಲ್ಲೆಯ ಎಲ್ಲ ಜಾತಿ-ಜನಾಂಗ ಆಕರ್ಷಿಸುವ ನಾಯಕತ್ವ ಕರಗತವಾಗಿಲ್ಲ, ಈತ ಸೋಗಲಾಡಿ ದೇಶಭಕ್ತನೆಂಬುದು .ಜನರಿಗೆ ಮನವರಿಕೆ ಆಗಿದೆ. ಒಂದು ಕಾಲದಲ್ಲಿ ಬುತ್ತಿ ಕಟ್ಟಿಕೊಂಡು ಚೆಡ್ಡಿ 'ಧರ್ಮ' ಪ್ರಸಾರಕ್ಕೆ ಹಳ್ಳಿಗೆ ಹೋಗುತ್ತಿದ್ದ ಈ ತಿರುಬೋಕಿ ವಟು ಇವತ್ತು ಕೋಟಿಗೆ ತೂಗುವ ಐಷಾರಾಮಿ ಪುಢಾರಿಯಾಗಿ ರೂಪಾಂತರ ಆಗಿರುವುದು ಜಿಲ್ಲೆಯ ಪ್ರಜ್ಞಾವಂತ ಮತದಾರರನ್ನು ಅವಾಕ್ಕಾಗಿಸಿದೆ. ಅಡ್ಡ ದಾರಿಯಲ್ಲಿ ದುಡ್ಡು ದೋಚುವುದೇ ಅಸಲಿ ಹಿಂದುತ್ವವಾ ಎಂಬ ಅನುಮಾನ ಜಿಲ್ಲೆಯ ಜನರನ್ನು ಕಾಡುತ್ತಿದೆ. ಅನಂತ್ಮಾಣಿ ನಂಬಿಕೆಗೆ ಅನರ್ಹನಾಗಿರುವುದರಿಂದ ಆತನಿಂದ ಪಾರ್ಟಿ ಕಟ್ಟಲು ಸಾಧ್ಯವಾಗುತ್ತಿಲ್ಲ, ಆತನದು ಬರೀ ಪೊಳ್ಳು ಪರಾಕ್ರಮವಷ್ಟೇ!!


ಜಿಲ್ಲೆಯ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಈ ಕಾಗೇರಿ, ಅನಂತು, ಯಡ್ಡಿಯನ್ನು ನಂಬಿಕೂತಿಲ್ಲ, ಅವರಿಗೆಲ್ಲ ಮೋದಿ-ಶಾ ಮಸಲತ್ತು ಮಾಡುವ ಪವಾಡದ ಮೇಲಷ್ಟೇ ಭರವಸೆ. ಹೀಗಾಗಿ ಎಮ್ಮೆಲ್ಲೆ ಕನಸಿಗರೆಲ್ಲಾ ತಾವೇ ಗ್ಯಾರಂಟಿ ಕ್ಯಾಂಡಿಡೇಟ್ ಎನ್ನುತ್ತ ಕ್ಷೇತ್ರ ಪ್ರದಕ್ಷಿಣೆ ಮಾಡುತ್ತಿದ್ದಾರೆ. ಈ ಟಿಕೆಟ್ ತಲುಬುದಾರರ ಹಾವಳಿ ಅದೆಷ್ಟು ಜೋರಾಗಿದೆ ಎಂದರೆ, ಚೆಡ್ಡಿ ಹೈಕಮಾಂಡ್ ಮುಂದಿನ ಅಸೆಂಬ್ಲಿ ಎಲೆಕ್ಷನ್ ಗೆಲ್ಲಲು ಸಿದ್ಧ ಮಾಡಿರುವ ವಿಸ್ತಾರಕ್ ತಂತ್ರಗಾರಿಕೆಯೂ ವ್ಯರ್ಥ ಆಗುವಂತಾಗಿದೆ. ಹಳ್ಳಿ-ಹಳ್ಳಿಯ ಮನೆ-ಮನೆಗೆ ವಿಸ್ತಾರಕ್ ಭೇಟಿ ಕೊಟ್ಟು ಪಕ್ಷದ ವ್ಯಾಪ್ತಿ ವಿಸ್ತರಿಸುವುದೇ ವಿಸ್ತಾರಕ ಯೋಜನೆ. ಆದರೆ ಈ ವಿಸ್ತಾರಕ ಈಗ ಉತ್ತರ ಕನ್ನಡ ಬಿಜೆಪಿಯನ್ನು ಅಸ್ತವ್ಯಸ್ತ ಮಾಡಿಬಿಟ್ಟಿದೆ. ವಿಸ್ತಾರಕ ಎಂದು ಹೇಳಿಕೊಳ್ಳುವವರು ಟಿಕೆಟ್ ಮೇಲೆ ಕಣ್ಣಿರುವ ಕಲಿಗಳು ಅಥವಾ ಆತನ ನಿಷ್ಠಾವಂತ ಹಿಂಬಾಲಕರು. ಇವರು ತಮ್ಮ-ತಮ್ಮವರ ಪ್ರಚಾರ ಮಾಡುತ್ತಿದ್ದಾರೆಯೇ ಹೊರತು ಕೇಸರಿ ಪಡೆಗೆ ಬಲ ತುಂಬುತ್ತಿಲ್ಲ, ಇದೇ ಬಿಜೆಪಿಗೀಗ ದೊಡ್ಡ ಮಾರಕ ಆಗಿಬಿಟ್ಟಿದೆ.



ಕಾಗೇರಿಯ ಶಿರಸಿ ಒಂದು ಕ್ಷೇತ್ರ ಬಿಟ್ಟರೆ ಉಳಿದೆಲ್ಲೆಡೆ ವಿಸ್ತಾರಕರೆಂಬ ಭಸ್ಮಾಸುರರದೇ ಹಾವಳಿ; ಅರ್ಥಾತ್ ಕೇಸರಿ ಟಿಕೆಟ್ ಕಸರತ್ತುದಾರರದೇ ಆರ್ಭಟ. ಕರಾವಳಿಯ ಕಾರವಾರ, ಕುಮಟಾ ಮತ್ತು ಭಟ್ಕಳ ಅಸೆಂಬ್ಲಿ ಕ್ಷೇತ್ರದಲ್ಲಿ ಅನಂತ್ಮಾಣಿಯ ಶಿಷ್ಯರಲ್ಲೇ ಪೈಪೋಟಿ ಜೋರಾಗಿದೆ. ಅನಂತ್ಮಾಣಿಯನ್ನು ಡೋಂಟ್ ಕೇರ್ ಮಾಡಿ ಬೆಂಗಳೂರು-ದಿಲ್ಲಿಯಲ್ಲಿ ಟವಲ್ ಹಾಸಿ ಬಂದಿರುವವರಿಗೇನೂ ಕಮ್ಮಿಯಿಲ್ಲ, ಕಾರವಾರದ ಮಾಜಿ ಶಾಸಕ ರಂಗ್‌ರಂಗೀಲಾ ಆನಂದ್ ಅಸ್ನೋಟಿಕರ್ ಬಿಜೆಪಿಯಲ್ಲಿ ಇಲ್ಲವೆಂದು ಜಿಲ್ಲಾ ಬಿಜೆಪಿ ರಬ್ಬರ್ ಸ್ಟ್ಯಾಂಪ್ ಅಧ್ಯಕ್ಷ ಕೆ.ಜಿ. ನಾಯ್ಕ್ ಹೇಳುತ್ತಿದ್ದಾನೆ. ಆದರೆ ಆನಂದ್ ತನ್ನ ಗಾಡ್‌ಫಾದರ್ ಈಶ್ವರಿ ಹಿಡಿದುಕೊಂಡು ಆಟ ಆಡುತ್ತಿದ್ದಾನೆ. ಕೇಂದ್ರ ಮಂತ್ರಿ ನಿತಿನ್ ಗಡ್ಕರಿ ತನಕವೂ ಆತನ ಜಾಲ ವ್ಯಾಪಿಸಿದೆ ಎಂದು ಕಾರವಾರದಲ್ಲಿ ಗುಲ್ಲೆದ್ದಿದೆ. ಪಕ್ಷೇತರ ಶಾಸಕ ಸತೀಶ್ ಸೈಲ್ ಸಹ ಬಿಜೆಪಿ ಟಿಕೆಟ್‌ಗಾಗಿ ಕಟಿಪಿಟಿ ನಡೆಸಿದ್ದಾನೆ. ಕಾಂಗ್ರೆಸ್ ಡಾನ್ ದೋಷಪಾಂಡೆ ತನಗೆ ಅಭ್ಯರ್ಥಿಯಾಗುವ ಅವಕಾಶ ತಪ್ಪಿಸುತ್ತಾನೆಂಬ ಭಯದಲ್ಲಿರುವ ಸೈಲ್ ಕಳ್ಳ ಗಣಿಗಾರಿಕೆ ಗುರು ಜನಾರ್ದನ ರೆಡ್ಡಿ ಸಖ್ಯದಿಂದ ಕೇಸರಿ ಟಿಕೆಟ್ ಪಡೆವ ಪ್ರಯತ್ನ ನಾಜೂಕಾಗಿ ನಡೆಸಿದ್ದಾನೆ.

ಮೀನುಗಾರ ಮುಖಂಡ ಗಣಪತಿ ಉಳ್ವೇಕರ್ ನಂಬಿರುವುದು ಕಾಗೇರಿ ಜಾದೂ ಮಾತ್ರ. ಪಹರೆ ನಾಗ ತಾನು ಸ್ವತಂತ್ರ ಹೋರಾಟದ ನೆಲ ಬಾಸ್ಗೋಡದ ಮುಷ್ಠಿ ಮಣ್ಣು ಯಡ್ಡಿಗೆ ಗಿಫ್ಟಾಗಿ ಕೊಟ್ಟದ್ದೇ ಕಾಪಾಡುತ್ತದೆ ಎಂದು ಕಣ್ಣು-ಬಾಯಿ ಬಿಟ್ಟುಕೊಂಡು ಕೂತಿದ್ದಾನೆ. ಆಕರ್ಷಕ ರಾಜಕೀಯ ಮಾಡುತ್ತಿರುವ ರೂಪಾಲಿ ನಾಯ್ಕ್ ಸಾಮರ್ಥ್ಯ ಎದುರಾಳಿಗಳ ಅಂದಾಜಿಗೆ ನಿಲುಕುತ್ತಿಲ್ಲ. ಆಕೆ ಯಾವ್ಯಾವ ಪ್ರಚಂಡ ಚೆಡ್ಡಿ ನಾಯಕರ ಮೂಲಕ ಲಾಬಿ ನಡೆಸಿದ್ದಾಳೆಂಬುದರ ಬಗ್ಗೆ ತರಹೇವಾರಿ ಕತೆಗಳಿವೆ. ಕಾಗೇರಿ ಮಾಣಿ ಮತ್ತು ಆನಂದ್ ಅಸ್ನೋಟಿಕರ್ ಮಂತ್ರಿಯಾಗಿದ್ದಾಗ ಆ ಇಬ್ಬರ ನಾಮಬಲದಿಂದಲೇ ದುಡ್ಡು ಮಾಡಿದ ಅಂಕೋಲೆಯ ಒರಿಜಿನಲ್ ಚೆಡ್ಡಿ ಭಾಸ್ಕರ್ ನಾರ್ವೇಕರ್, ಕಾಗೇರಿ ಟೀಮಿನ ಜಿಪಂ ಸದಸ್ಯ ಜಗದೀಶ್ ನಾಯಕ್ ಒಂದು ಕೈ ನೋಡುವ ಯೋಚನೆಯಲ್ಲಿದ್ದಾರೆ. ಟಿಕೆಟ್ ಪುಕ್ಕಟೆ ಸಿಕ್ಕರೆ ಸಿಗಲಿ ಎಂಬ ಮನಸ್ಸು ಅರುಣ ನಾಡಕರ್ಣಿಯದು.

ಭಟ್ಕಳದಲ್ಲಿ ಅನಂತ್ಮಾಣಿ ಟಿಕೆಟ್ ಆಸೆ ತೋರಿಸಿ ಬಿಜೆಪಿಯನ್ನು ಹಲವು ಚೂರು ಮಾಡಿರುವುದು ಕುತೂಹಲಕರವಾಗಿದೆ. ಮಾಜಿ ಮಂತ್ರಿ ಶಿವಾನಂದ ನಾಯ್ಕನ ಕಂಡರೆ ಅನಂತ್ಮಾಣಿಗೆ ಆಗದು. ಆದರೆ ಈತ ಯಡ್ಡಿ ಪಡೆಯ ಪರಾಕ್ರಮಿ. ಅನಂತ್ಮಾಣಿಗಿಂತ ಹೆಚ್ಚು ನಂಬಿಗಸ್ಥ ಈ ಶಿವಾನಂದ ನಾಯ್ಕ, ಬಾಸ್ ಯಡ್ಡಿಗೆ. ಅನಾರೋಗ್ಯಪೀಡಿತನಾಗಿ ಡಲ್ ಆಗಿರುವ ಶಿವಣ್ಣ ತನಗೆ ಟಿಕೆಟ್ ಕೊಡಲಾಗದಿದ್ದರೆ ಹೆಂಡತಿಗಾದರೂ ಕೊಡಿ ಎಂದು ಯಡ್ಡಿಗೆ ದುಂಬಾಲು ಬಿದ್ದಿದ್ದಾನೆ. ಅನಂತ್ಮಾಣಿ ಆಯ್ಕೆ ಎಡವಟ್ಟು ಪೋರ ಸುನಿಲ್ ನಾಯ್ಕ್, ಶಿರಸಿಯಲ್ಲಿರುವ ತನ್ನ ಬಂಜರುಭೂಮಿ ಸುನಿಲ್ ತಲೆಗೆ ಕಟ್ಟಿ ಕಾಸು ಮಾಡಿಕೊಂಡಿರುವ ಅನಂತ್ಮಾಣಿ ಆ ಋಣಕ್ಕಾದರೂ ಆತನಿಗೆ ಟಿಕೆಟ್ ಕೊಡಿಸಬೇಕಾಗಿದೆ ಎಂಬ ಮಾತು ಭಟ್ಕಳ ಬಿಜೆಪಿಯಲ್ಲಿ ಕೇಳಿಬರುತ್ತಿದೆ. ಈಚೆಗಷ್ಟೇ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿರುವ ಮಾಜಿ ಶಾಸಕ ಜೆ.ಡಿ. ನಾಯ್ಕ ಈಡಿಗರ



ಸತೀಶ್ ಸೈಲ್


ಲಾಬಿ ಮೂಲಕ ಕರಾಮತ್ತು ನಡೆಸಿದ್ದಾರೆ. ಕಳಪೆ ಕ… ಈಶ್ವರ ನಾಯ್ಕ, ರಸಿಕ ಶಿಖಾಮಣಿ ಗೋವಿಂದ … ಹೊನ್ನಾವರದ ವಿನೋದ್ ನಾಯ್ಕ ವಿವಿಧ … ತುಂಡುಗುಪ್ಪಳ ಹೊಡೆಯುತ್ತಿದ್ದಾರೆ.


ಬಿಜೆಪಿಯ ಟಿಕೆಟ್ ತಳಮಳ ಕಳವಳಕಾರಿ… ತಲುಪಿರುವುದು ಕುಮಟಾದಲ್ಲಿ, ಇಲ್ಲಿ ದಿನಕ್ಕೊ… ಕ್ಯಾಂಡಿಡೇಟ್ ತಯಾರಾಗುತ್ತಿದ್ದಾನೆ. ಈಗಾಗಲೇ ಬರ… 24 ಮಂದಿ ಟಿಕೆಟ್‌ಗಾಗಿ ತಾರಾಡುತ್ತಿದ್ದಾರೆ! … ಬಿಟ್ಟು ಬಿಜೆಪಿ ಸೇರುವಾಗ ಮಾಜಿ ಶಾಸಕ ದಿನಕ… ನಂಬಿದ್ದು ಸ್ವಜಾತಿ (ಗಾಣಿಗ) ಬಂಧುವೂ, … ಒಡ್ಡೋಲಗದ ಮದ್ದಲೆಗಾರನೂ ಆದ ಪುಟ್ಟಸ್ವಾಮಿ… ಆದರೆ ದಿನಗಳೆದಂತೆ ತನಗಿಂತ ಪ್ರಭಾವಿ… ಹಣವಂತರೂ, ಜಾತಿ ಬಲದವರೂ ಕುಮಟೆ ಬಿಜೆ… ಧಾಂಗುಡಿ ಇಡುತ್ತಿರುವುದು ದಿನಕರ ಶೆಟ್ಟಿ… ಕಂಗೆಡಿಸಿಬಿಟ್ಟಿದೆ. ಯಾಕಾದರೂ ಬಿಜೆಪಿ ಸೇರಿ… ಎಂಬಂಥ ಸಂಕಷ್ಟದಲ್ಲೀಗ ದಿನಕರ ಒದ್ದಾಡುತ್ತಿದ್ದಾನೆ… ಅರಣ್ಯಾಧಿಕಾರಿಯಾಗಿದ್ದಾಗ ಫಲಾನುಭವಿಗಳ ಅ… ಜೈಲು ಪಾಲಾಗಿದ್ದ ನಾಗರಾಜ ನಾಯಕ್ 'ಬೆಳಕು… ಸೇವಾಟ್ರಸ್ಟ್ ಕಟ್ಟಿಕೊಂಡು ಬಿಜೆಪಿಗೆ ಸೇರಿದ್ದಾ… ಟ್ರಸ್ಟ್ ತನ್ನಲ್ಲಿ ತುಂಬಿರುವ ಶಾಸಕಗಿರಿಯ ಗಾಡಾ… ಹೋಗಲಾಡಿಸೀತೆಂಬ ದುರಾಸೆ ನಾಗರಾಜ ನಾಯ… ಹಿಂದಿನ ಬಾರಿ ಸೋತಿರುವ ಸುನಿಲ್ ಸೋನಿಗೆ … ಲಾಬಿಯ ಕುಮಾರ ಬಂ, ಬೇಳೂರು ಗೋಪು, ಹ… ಹಾಳುಗಳೇ ಗತಿ ಎಂಬಂತಾಗಿದೆ. ಅನಂತ್ಮಾಣಿ… ತಾನು ಕೆಟ್ಟೆನೆಂದು ಸೋನಿ ಕಂಡವರ … ಹಳಹಳಿಯುತ್ತಿರುವುದು ಮೋಜಾಗಿದೆ. ಡಾ. ಜಿ.ಜಿ… ಪತ್ರಕರ್ತ ವಿಷಭಟ್ಟನ ಬಲ ನಂಬಿದ್ದಾನೆ. ವಾಹನ… ಪುಟ್ಟ ಹೆಗಡೆಗೆ ವಿಆರ್‌ಎಲ್‌ನ ಸಂಕೇಶ್ವರ್‌ನೇ …

ಈ ಎರಡು ಡಜನ್ ಪಟ್ಟಿಗೆ ಈಗ ಯಶ… ನಾಯ್ಕ ಎಂಬ ಮೈಸೂರು ಉದ್ಯಮಿ ಕೆಲವೇ … ಸೇರ್ಪಡೆಯಾಗಲಿದ್ದಾನೆ. ಈ ಟ್ರಾನ್ಸ್‌ಪೋರ್ಟ್ … ಗಿಲಿಗಿಲಿ ಶೋನಲ್ಲಿ ಪ್ರವೀಣ. ಸಿಎಂ ಸಿದ್ದು ತನಗೆ… ಹತ್ತಿರವೆಂಬ ಭ್ರಮೆಯಲ್ಲಿದ್ದ ಯಶೋಧರ ನಾಯ… ಮೊನ್ನೆ-ಮೊನ್ನೆ ಕಾಂಗ್ರೆಸ್ ಬಿಟ್ಟು ಹೋಗಿದ್ದಾನೆ…


▶▶



ಯಶೋಧರ ನಾಯ್ಕ



ಸುಬ್ರಾಯ ವಾಳ್ಕೆ



ಕಾಗೇರಿ-ವಿಶ್ವೇಶ್ವರ ಹೆಗಡೆ



ಗಾಯತ್ರಿ ಗೌಡ



ಆನಂದ್ ಅಸ್ನೋಟಿಕರ್



ರೂಪಾಲಿ ನಾಯ್ಕ


ದಿನಕರ ಶೆಟ್ಟಿ


ಜೆ.ಡಿ.ನಾಯ್ಕ


ಶಿವಾನಂದ ನಾಯ್ಕ


ಸುನಿಲ್ ಹೆಗಡೆ


ವಿ.ಎಸ್.ಪಾಟೀಲ

ಉಪೇಂದ್ರನ ಪಾರ್ಟಿ ಸೇರನ ಅಂತ ಇದ್ದೀನಿ



ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಆ ಹಾಳು ಬೆಂಗಳೂರಿಗೆ ವಡಿಯೊ ಮಳೆ ಇಲ್ಲಾರ ಊದಿದ್ರೆ ಕ್ಯರೆ ಕಟ್ಟೆ ತುಂಬಿಕಳವು, ರಾಗಿನಾರ ಬಿತ್ನೆ ಮಾಡಬವುದಿತ್ತು" ಎಂದು ಕಾಳಮಾವ ತನಗೆ ತಾನೇ ಗೊಣಗಿಕೊಂಡ.

"ಬೆಂಗಳೂರಿಗೆ ಆ ತರ ಮಳೆ ಹುಯ್ಲೆಬೇಕು ಕಣ ಮಾವ" ಎಂದ ಉಗ್ರಿ.

"ಅಲ್ಲೇನು ಬ್ಯಳದತ್ತ?"

"ಏನು ಬ್ಯಳದೆಯಿದ್ರೂ ಊರು ಕ್ಲೀನಾಗಬ್ಯಾಡವೆ" ಎಂದು ಉಗ್ರಿ ಹೇಳುವಾಗ ಮಧ್ಯೆ ಬಾಯಿ ಹಾಕಿದ ಸೀರ,

"ಬೆಂಗಳೂರು ಜನ ಯರಡುಕ್ಕೋಯ್ತರಲ್ಲಾ, ಅದನ್ಯಲ್ಲ ಕೊಚ್ಚಿ ಕಂಡೋಗಕ್ಕೆ ಅಂಥಾ ಧಡಿ ಮಳೆ ಹ್ವಡಿಲೇಬೇಕು" ಎಂದ.

"ಅದಕ್ಯಲ್ಲ ನೀರು, ಕಕ್ಕಸ್ ಮನೆ, ಚರಂಡಿ ಯವಸ್ಥೆ ಅದೆ ಕಣೊ. ಅವುರೇನು ನಿನ್ನಂಗೆ ಬಯಲಲ್ಲೇ ಹೋದರೆ."

"ನಾನೇಳಿದ್ದು ಅದ್ನೆ ಕಂಡ್ಯ. ಕಕ್ಕಸ್ ಮನೆ ಅದೆ ಅಂತ ಅಲ್ಲೇನು ಟಾಕ್ ಮಾಡಿಕಳಕ್ಕಾದತೆ. ಬೆಂಗಳೂರಲ್ಲಿ ಒಂದು ಕೋಟಿ ಜನಿದ್ದರಂತೆ, ಅವುರ್ಯೆಲ್ಲ ವತ್ತರಲೆ ಎದ್ದು ತಲಿಗರ್ಧ ಕೆ.ಜಿ. ಅಂತ ಯರಡುಕ್ಕೋದ್ರೆ, ಅದೇ ಐವತ್ತು ಲಕ್ಷ ಕೆಜಿ ಆಯ್ತು. ಅದ್ಯಲ್ಲ ಅಲ್ಲೆ ಇದ್ರೆ ಊರುಳದತೆ" ಎಂದು ಸೀರ ನಕ್ಕ.

"ನೀನೇನೋ ಮುದ್ದೆ ತಿಂದು ಅರ್ಧ ಕೆ.ಜಿ ಮಡುಗ್ತಿ ಅಂತ ಬೆಂಗಳೂರೊರು ಅಂಗೆ ಹೋದರೇನೋ ಮಾವ" ಎಂದು ಜುಮ್ಮಿ ನಕ್ಕಳು.

"ಏಟನಾರ ಹೋಗ್ಲಿ, ಕಕ್ಕಸ್ ಮನೆ ಅದೆ ಅಂತ ಎಂದಂಗೂ ಹೊಯ್ತರೆ ಕಂಡ್ಯ. ಅದಲ್ಲಿಗೆ ಬತ್ತವ್ನ" ಎಂದ ಸೀರ.

"ಥೂತ್ ಬುಡಿರ್ಲ ಅದೇನು ಸುದ್ದಿ ಅಂತ ಮಾತಾಡಿರಿ" ಎಂದು ಕಾಳಮಾವ ಗದರುವಾಗ ವಾಟಿಸ್ಸೆ ಕಣೆಸಿಕೊಂಡು,

"ಯಾವ ಮ್ಯಾಟ್ರು ದೊಡಪ್ಪ?" ಎಂದ.

"ಬೆಂಗಳೂರು ಕಕ್ಕಸ್ ಮ್ಯಾಟ್ರು ಕಣೊ. ಒಂದು ಕೋಟಿ ಜನ ಒಂದೇ ಸತಿ ಹೋದ್ರೆ ಅದನ್ಯಲ್ಲ ಊರಾಚೆಗೆ ನೂಕಕ್ಕೆ ಧಡಿ ಮಳೆ ವಡಿಬೇಕು ಅಂತ ಮಾತಾಡತಿದ್ದೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಮನುಷ್ಯ ಅನಾದಿಕಾಲದಿಂದ ತಿನ್ನದರ ಬಗ್ಗೆ ತಲೆ ಕೆಡಿಸಿಗಂಡನೇ ಹ್ವರತು, ಅದ ವರಿಕಾಕದರ ವಿಷಯದಲ್ಲಿ ಇವತ್ತಿಗೂ ತಲೆ ಕೆಡಿಸಿಕಂಡಿಲ್ಲ. ಆ ಮ್ಯಾಟ್ರು ಬಿಡಿ. ಇಂತ ವಿಷಯಗಳಲ್ಲಿ ತೀರ ತಲೆ ಕೆಡಿಸಿಗಳೊ ಉಪೇಂದ್ರ ರಾಜಕಾರಣಕ್ಕೆ ಬತ್ತಾ ಅವುನೆ. ಅವುನ ಪಾರ್ಟಿಗೋಗ್ಲೊ ಬ್ಯಾಡವ್ವೊ ಅಂತ ನಿಮ್ಮನ್ನ ಕೇಳ್ತಿನಿ. ಒಂದು ತೀರ್ಮಾನ ಹೇಳಿ."

"ಯಾವ ಪಾರ್ಟಿಗೋದನ್ಲ?" ಎಂದಳು ಜುಮ್ಮಿ.



"ಸದ್ದಿಕೆ ಯಾವ ಪಾರ್ಟಿಗೂ ಎಂಟ್ರಿ ಕೊಡದಿಲವಂತೆ. ಅವುನದೇ ಒಂದು ಪಾರ್ಟಿ ಮಾಡ್ತನಂತೆ. ಬತ್ತಿಯೇನಕ್ಕ?"

"ಅಲ್ಲಿಗೋಗೊ ಅಂತೆದು ನನಿಗೇನಾಗ್ಯದ್ಲ?"

"ಅದೂ ಸರಿನೆ. ಅಂತ ಉಪೇಂದ್ರನ ಪಾರ್ಟಿಗೋಗಕ್ಕೆ ಏನಾರ ಆಗ್ಲೇಬೇಕು ಅಂದಂಗಾಯ್ತು."

"ಅವುನ್ಯಾಕೆ ರಾಜಕೀಯಕ್ಕೆ ಬಂದಾ?" ಎಂದ ಸೀರ.

"ಯಾಕೆ ಅಂದ್ರೆ ಅವುನ ಮಾರ್ಕೆಟ್ಟು ಹೋಗ್ಯದೆ. ನಮ್ಮ ಯಸ್ಸು, ಸುದೀಪ, ದರ್ಶನ್, ಪುನೀತ್ ಇವುರಿಗ್ಯಲ್ಲ ಇರೋ ಮಾರ್ಕೆಟ್ಟು ಅವುನಿಗಿಲ್ಲ. ಹಿಮಾಲಯಕ್ಕೆ ಹೆಲಿಕಾಪ್ಟರಲ್ಲಿ ಹೋದಂಗೆ ಹೋದ. ಈಗ ಕಾಲನಡಗೆಲಿ ಕ್ಯಳಿಕಿಳಿತ ಅವುನೆ. ಇಳದಮ್ಯಾಲೆ ಏನಾರ ಮಾಡಬೇಕಲ್ಲಾ, ಅದ್ಕೆ ರಾಜಕಾರಣಕ್ಕೆ ಬತ್ತಾ ಅವುನೆ" ಎಂದ ವಾಟಿಸ್ಸೆ.

"ರಾಜಕಾರಣ ಅಂದ್ರೆ ಇವ್ನಲ್ಲ ಏನು ತಿಳಕಂಡವುಲ?" ಎಂದ ಕಾಳಮಾವ.

"ಧಣಾರಂತ ದುಡ್ಡು ಮಾಡೊ ಕ್ಷೇತ್ರ ಯರಡೆ ದೊಡಪ್ಪ ಒಂದು ಸಿನುಮ, ಯರಡ್ನೆದು ರಾಜಕಾರಣ. ಆದ್ರೆ ಈ ಉಪೇಂದ್ರ ದುಡ್ಡೂ ಬ್ಯಾಡ, ಜಾತಿನು ಬ್ಯಾಡ ಅಂತ ಕುಂತವುನೆ."

"ದುಡ್ಡು ಬ್ಯಾಡ ಅನ್ನದು ದೊಡ್ಡ ಮಾತಾಯ್ತು, ಆದ್ರೆ ಜಾತಿ ಬ್ಯಾಡ ಅಂತ ಅವುನು ಏನೇ ಹೇಳಿದ್ರು, ಟಿ.ವಿ ವಳಗಿರೊ ಅವುನ ಜಾತಿಯೊರ್ನೆಲ್ಲ ಒಟ್ಟಾಗಿ ಇಡೀ ದಿನ ಮಾತಾಡಿಸಿದರಪ್ಪ ಅದು ಯಂಗೆ ಅಂತ, ಕರ್ನಾಟಕಕೊಬ್ಬ ಕೇಜ್ರಿವಾಲ ಬಂದ ಅನ್ನಂಗೆ ಮಾತಾಡಿಬುಟ್ರು, ಬ್ರಾಂಬ್ರುಡುಗ್ರು" ಎಂದ ಉಗ್ರಿ.

"ಮಾತಾಡ್ಲಿ ಬುಡೊ ಉಗ್ರಿ. ಆ ಕಡ್ಡಿರಂಗ, ರಮಾದೇವಿ ಕುಂದ್ರಿಸಿಗಂಡು ಎಷ್ಟು ಮಾತಾಡಿದಾ ಅಂದ್ರೆ ಇವತ್ತು ಅವುನು ಬಾಯಿಬುಟ್ಟೇಟಿಗೆ ನಗ್ತರೆ. ರಮಾದೇವಿ ಕಾಣ್ತಾಯಿಲ್ಲ, ಮಾತಾಡ್ಲಿ ಬುಡೊ. ನಮ್ಮತ್ರನೂ ಮಾತವೆ. ಉಪೇಂದ್ರನ ಜಾತಗನೆ ಅದೆ."

"ಅದೇನಿದ್ವತ್ಲ ನಿನ್ನತ್ರ?"

"ನೋಡಕ್ಕ, ಈ ಉಪೇಂದ್ರ ಕಾಶಿನಾಥನತ್ರ ಚಿಲ್ಲರೆ ಕಾಸಿಗಿದ್ದ. ಆದ್ರೆ ಭಾರಿ ಬುದ್ದಿವಂತುಡುಗ. ಬ್ರಾಂಬ್ರಲ್ಲಿ ಅಂಗಿರತರೆ. ಕರಟ್ಟಾಗಿ ಇಲ್ಲಿಗೆ ಇಪ್ಪತ್ತು ವರಸದ ಹಿಂದೆ ಹೀರೊ ಆಗಿ ಮೂರು ನಾಕು ಸಿನುಮ ತಗದ. ಅವು ಯಂಗೆ ದುಡದೊ ಅಂದ್ರೆ ಸಿನುಮ ನೋಡಿದ ಹುಡುಗ್ರು ಅವುನಂಗೆ ಆಡವ್ರು."

"ಊ ಕಂಡ್ಯ... ನಮ್ಮೂರಲ್ಲೂ ಒಸಿ ಅಂಗೆ ಇದ್ರೊ."

"ರಾಜಕುಮಾರನ ಸಿನುಮದಲ್ಲಿ ಯೀರೊಯಿನ್ ಮನಸ ಗೆಲ್ಲಬೇಕಾದ್ರೆ, ಅಣ್ಣಾರು ವಳ್ಳೆ ಮಾತು, ನಡವಳಕೆ, ಪ್ರಾಮಾಣಿಕತೆ, ಸಾಹಸ... ಹಿಂಗೆ ಏನೇನೊ ಮಾಡಿ ಒಲಿಸಿಗಳನು."

"ಊ ಕಂಡ್ಯ. ಅಂತ ಸಿನುಮ ನಾನು ನೋಡಿದ್ದೆ. ಇವತ್ತು ಬಂದ್ರೂ ನೋಡಂಗವೆ" ಎಂದಳು ಜುಮ್ಮಿ.

"ಆದ್ರೆ ಇವುನ ಸಿನುಮ ಯಂಗಿದ್ದೊ ಅಂದ್ರೆ 'ಲವ್ ಮಾಡ್ತಿಯೋ ಇಲ್ಲವ್ವೊ ಕಾಲೇಜಿಗೆ ಯಂಗೊಯ್ತಿ ನೋಡ್ತಿನಿ. ಆಸಿಡ್ ಗೊತ್ತ' ಅನ್ನಂಗೆ ಹುಡುಗರನ್ಯಲ್ಲ ಕೆರಳಿಸಿಬುಟ್ಟ. ನನಿಗಂತೂ ಅವುನ್ನ ನೋಡಿದಾಗ ಇವುನು ಮನೋವೈದ್ಯರಿಗೆ ತೋರಿಸಿಗಳದು ವಳ್ಳೆದು ಅನ್ನುಸ್ತು."

"ಅದ್ಯಾಕ್ಲ ಅಂಗಂತಿ?"

"ಇವುನು ಸಿನುಮದ ಮಾತು, ನಡವಳಿಕೆ ನೋಡಿದ ಒಬ್ಬ ಹುಡುಗ ಕೋಲಾರದಲ್ಲಿ ಹುಡುಗಿ ತಲೆ ಕಡದು ಕೈಲಿಡಕಂಡು ಪ್ರೀತ್ಸೆ ಪ್ರೀತ್ಸೆ ಅಂತ ಕೂಗತಿದ್ದ ಕಣಕ್ಕ."

"ಅವುನಾಥರ ಸಿನುಮ ತಗೀಬೇಕಾದ್ರೆ ಅವುಮಾನ ಬಡತನವೇ ಕಾರಣವಂತೆ ಕಣೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನನ್ನ ಬಡತನಕ್ಕಿಂತ ಅವ್ರುಂದಲ್ಲ. ಆದ್ರೆ ನನಿಗೂ ಸಾಮಾಜಿಕ ಜವಾಬ್ದಾರಿ ಅವೆ ಕಣೊ."

"ಅವುನಿಗೂ ಇರೊವತ್ತಿಗೆ ರಾಜಕಾರಣಕ್ಕೆ ಬಂದವುನೆ ತಗೊ."

"ಬರಬೇಕಾದ್ರೆ ಏನಾರ ಮಾಡಿರಬೇಕು ಕಣೊ. ನಮ್ಮ ಯಶ್ ಕ್ಯರೆ ಹೂಳು ತಗಸಿ ನಾಲ್ಕು ಕೋಟಿ ರೂಪಾಯಿ ರೈತರಿಗೆ ಖರ್ಚು ಮಾಡಿಕಂಡು ಕುಂತವುನೆ. ಅದೇ ಉಪೇಂದ್ರ ಸಣ್ಣಪುಟ್ಟ ರೈತರ ಜಮೀನ ಬರಿಸಿಗಂಡು ರುಪ್ಪೀಸ್ ರೆಸಾರ್ಟ್ ಅಂತ ಮಾಡಿಕಂಡು ಅದ ದಕ್ಕಿಸಿಗಳಕ್ಕೆ ರಾಜಕಾರಣಕ್ಕೆ ಬಂದ ಅನ್ನದು ನನ್ನ ಡವುಟು."

"ಬರ್ಲಿ ಬುಡೊ. ಕರ್ನಾಟಕದ ರಾಜಕಾರಣ ವಳ್ಳೆ ಹುಲ್ಲುಗಾವುಲಿದ್ದಂಗೆ. ಇಲ್ಲಿಗೆ ಬಾಳ ಹಿಂದಿನಿಂದ ಬ್ಯಾರೆ ಬ್ಯಾರೆ ಜಾತಿತಳಿಗಳು ಬಂದು ಮೆಯಿಕಂಡು ಹೋಗ್ಯವೆ."

"ಅದೇನೋ ನಿಜ ಕಣೊ. ಈಚೆಗೆ ರೀಸೆಂಟಾಗಿ ಒಬ್ಬ ಲಾರಿ ಮಾಲೀಕ ಬಂದ. ಕಾಯೋಳು ಕವುರಿಕಂಡೋದ. ಆ ಕಾಯೋಳ ಎಡೂರಪ್ಪ ಒಸಿದಿನ ಕವುರಿ ಬಿಸಾಕಿ ಬಿಜೆಪಿಗೋದ. ಇನ್ನ ರಾಮುಲು ಅನ್ನು ಕುರುಮಾಮನೂ ಒಂದು ಪಾರ್ಟಿ ಮಾಡಿ 'ಏಮಾಟಾ ಇದಿ ನಾಕೊದ್ದು' ಅಂತ ಅವುನೂ ಬಿಜೆಪಿಗೋದ. ಈ ಉಪೇಂದ್ರ ಮಾಡೋ ಸದ್ದು ನೋಡಿ ಅಮಿತ್ ಶಾ ಕಡಿಯೋರು ಕಾಳಾಕಿದ್ರೆ ಇವುನು ಅತ್ತಗೋಗಬವುದು ಅನ್ನೊ ಡವುಟು ನನಿಗೆ."

"ಉಪೇಂದ್ರ ಅಂಗೆ ಮಾಡದಿಲ್ಲ ಕಣೊ."

"ಏನೋ ಇಷ್ಟು ಕಾನ್ಫಿಡೆಂಟಾಗಿ ಹೇಳ್ತಿಯಲ್ಲೊ?"

"ಬುದ್ಧಿವಂತ ಕಣೊ ಅವುನು. ದುಡ್ಡು ಬ್ಯಾಡ ಜಾತಿನೂ ಬ್ಯಾಡ ಅನ್ನೋನು. ಅವ್ನರದು ಜಾಸ್ತಿಯಾಗಿ ಹಾಳಾಗಿರೊ ಬಿಜೆಪಿಗೊದನೆ."

"ಉಗ್ರಿ ಹೇಳದು ನೋಡಿದ್ರೆ ನಿಜ ಕಂಡ್ಯ" ಎಂದಳು ಜುಮ್ಮಿ.

"ಅವುನ್ಯಾರೊ ಡಿಲ್ಲಿಯಿಂದ ಬಂದಿದ್ನಲ್ಲ, ಹೋದನೇನ್ಲ?" ಎಂದ ಸೀರ.

"ಅವುನ್ಯಾರೊ ಅಲ್ಲ ಚಿಗಪ್ಪ, ರಾಷ್ಟ್ರೀಯ ಬಿಜೆಪಿ ಪ್ರಸಿಡೆಂಟು ಅವುನು."

"ಅದ್ಕೆ ನಮ್ಮ ಸ್ವಾಮಿ ಎದ್ರಿಗೆ ಕಾಲಮ್ಯಾಲೆ ಕಾಲಾಯ್ಕಂಡು ಕುಂತಿದ್ನೆ?"

"ಅಂತವುನ್ಯಲ್ಲ ಯಾಕ್ಲ ಕರೀಬೇಕು ಮಠಕ್ಕೆ?" ಎಂದ ಕಾಳಮಾವ.

"ಅದು ಹಿಂಗೆ ದೊಡಪ್ಪ. ನಮ್ಮ ಡಿ.ಕೆ.ಶಿ ಮನೆಯ ರೈಡ್ ಮಾಡಿಸಿದನಲ್ಲಾ ಅದು ಅವುರ ಕಡಿಕೆ ತಿರಿಕತ್ತು. ಆಗ ನಮ್ಮ ಯಸ್ಸೆಂ ಕಿಷ್ಣ 'ಶಾ ಅವುರೆ ಯಾವುದ್ಕೂ ನೀವು ಬಂದು ನಮ್ಮ ಜನಾಂಗದ ಮಠಕ್ಕೋಗಿ ಸ್ವಾಮೀಜಿಗಳ ಜೊತೆ ಮಾತಾಡಿ ಹೋದ್ರೆ ಒಕ್ಕಲಿಗ ಜನಾಂಗ ನೀವು ಮಾಡಿರೊ ರೈಡ್ ವಿಷಯದಲ್ಲಿ ಸ್ವಲ್ಪ ಸಾಫ್ಟಾಗ್ತರೆ' ಅಂದನಂತೆ. ಅದ ಕೇಳಿ ಈ ಅಮಿತ್ ಶಾ ಬಂದೋನು ಸ್ವಾಮಿ ಎದ್ರಿಗೆ ಕಾಲಮ್ಯಾಲೆ ಕಾಲಾಯ್ಕಂಡು ಕುತಗಂಡು ಇನ್ನೊಂದು ಅನಾಹುತ ಮಾಡಿಕಂಡೋದ ಅತ್ತಗೆ."

"ಅವನೂ ವಬ್ಬ ರಾಜಕಾರಣಿ ನೋಡಪ್ಪ!" ■

04 ⏮

ನಾಲ್ಕೈದು ವರ್ಷದಿಂದ ಕುಮಟೆಯಲ್ಲಿ ಟೆಂಟ್ ಹೊಡೆದು ಸರ್ಕಸ್ ಮಾಡುತ್ತಿದ್ದ ಯಶು ಸಿಎಂ ಸಿದ್ದು ತನಗೆ ಕಾಂಗ್ರೆಸ್ ಸೀಟು ಕೊಡಿಸುತ್ತಾರೆಂದೇ ಇಷ್ಟು ದಿನ ನಂಬಿಕೊಂಡಿದ್ದ. ತಾನು ಸಿದ್ದುಗೆ ಮಾಡಿದ 'ಸೇವೆ'ಗೆ ಪ್ರತಿಫಲವಾಗಿ ಶಾಸಕನಾಗುವ ಸ್ಕೆಚ್ ಆತ ಹಾಕಿಕೊಂಡಿದ್ದ. ಆದರೆ ಈತನ ಖದರಾ ಕಂಡು ಕೆರಳಿದ ಸಿಎಂ ಸಿದ್ದು ದೂರವಿಟ್ಟುಬಿಟ್ಟರು. ಏನಾದರೂ ಮಾಡಿ ಕುಮಟೆಯಿಂದ ಶಾಸಕನಾಗಲೇಬೇಕೆಂದು ಆತ ಹೂಡಿದ ಹಣ ಕೋಟಿ ದಾಟಿದೆ! ಹೀಗಾಗಿ ಜೆಡಿಎಸ್‌ಗೆ ಹೋಗಲು ಪ್ಲಾನ್ ಹಾಕಿ ಕಾಂಗ್ರೆಸ್ ಆತ ಬಿಟ್ಟಿದ್ದ. ಆದರೆ ಆದಾಗಲೇ ಅಲ್ಲಿ ಪ್ರದೀಪ್ ನಾಯಕನೆಂಬ ...ಪ್ಪಿ ಮಾಫಿಯಾ ದೊರೆ ಗಟ್ಟಿಗೊಂಡಿದ್ದ. ಸಾಕ್ಷಾತ್ ಕುಮ್ಮಿ ...ಯಿಂದಲೇ ಜೆಡಿಎಸ್ ಕ್ಯಾಂಡಿಡೇಟೆಂದು ಘೋಷಿಸಲ್ಪಟ್ಟ ...ದ್ದು ಆದಾಗಲೇ ಪ್ರಚಾರ ಪ್ರಾರಂಭಿಸಿಬಿಟ್ಟಿದ್ದಾನೆ.

ಜೆಡಿಎಸ್‌ನಲ್ಲಿ ಜಾಗವಿಲ್ಲ ಎಂಬುದು ಖಾತ್ರಿಯಾಗು ...ತ್ತಲೇ ಯಶೂನಾಯ್ಕ ಬಿಜೆಪಿಯತ್ತ ಕಣ್ಣು ಹಾಯಿಸಿದ. ...ರಡು ತಿಂಗಳ ಹಿಂದೆ ಯಡ್ಡಿ ಸಿದ್ದಾಪುರಕ್ಕೆ ಬಂದಾಗ ...ತನ ಕಾರೇರಿ ಯಲ್ಲಾಪುರದ ತನಕ ಹೋಗಿ ಡೀಲ್ ...ಮಾಡಿಬಂದಿದ್ದ ಯಶೂ ನಾಯ್ಕ. ಯಡ್ಡಿ ಕಾರಿಗೆ ಆತನ ...ಹತ್ತಿದ್ದು ಖುದ್ದು ಅನಂತ್ಕಾಣಿಯೇ ಆಗಿತ್ತು. ಹೀಗೆ ...ಬಂದವರೆಲ್ಲ ಬಿಜೆಪಿ ಟಿಕೆಟ್ ಆಸೆಯಿಂದ ಪಾರ್ಟಿಗೆ ...ಬಂದರೆ ಮಾಣಿ ಬಿಸ್ನೆಸ್ ಬಿರುಸಾಗುತ್ತೆ, ಪಕ್ಷ ಪ್ರವೇಶಕ್ಕೆ ...ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಮೊದಲು ಅನಂತ್ಕಾಣಿಗೆ ...ಕೊಡಬೇಕಾಗುತ್ತದೆ! ಯಶೂ ನಾಯ್ಕ ಬರೀ ಅನಂತ್ಕಾಣಿ ...ಬ್ಬನಿಗೇ ಜೋತು ಬೀಳುವ ಮಳ್ಳನಲ್ಲ. ಆತ ಮೈಸೂರಿನ ...ರಾಜ ಮನೆತನದ ಜತೆ ತನಗಿರುವ ವ್ಯಾವಹಾರಿಕ; ...ಕೌಟುಂಬಿಕ ಸಂಪರ್ಕ ಪ್ರಯೋಗಿಸಿ ಬಿಜೆಪಿ ಸೇರಲು ...ಪ್ರಯತ್ನ ನಡೆಸಿದ್ದ. ಕೆಲವು ದಿನಗಳ ಹಿಂದೆ ರಾಜಮಾತೆ ಪ್ರಮೋದಾ ದೇವಿಯವರನ್ನು ಕುಮಟೆಗೆ ಕರೆದುಕೊಂಡು ಬಂದು ತನ್ನ ಟ್ರಸ್ಟ್‌ನ ಮಂಕುಬೂದಿ ಕಾರ್ಯಕ್ರಮಗಳಲ್ಲಿ ತೋರಿಸಿದ್ದ ರಾಜಸ್ತಾನದ ಮುಖ್ಯಮಂತ್ರಿ ವಸುಂಧರಾ ರಾಜೆ ಮೂಲಕವೂ ಆತ ಟಿಕೆಟ್‌ಗೆ ತಂತ್ರಗಾರಿಕೆ ನಡೆಸಿದ್ದಾನೆಂಬ ಸುದ್ದಿಗಳು ಹಬ್ಬಿದೆ. ಪ್ರಮೋದಾ ದೇವಿಯ ಸೊಸೆಗೆ ವಸುಂಧರಾ ರಾಜೆಯ ನಂಟಿದೆಯಂತೆ. ಹೀಗಾಗಿ ರಾಜವಂಶದ ಸೊಸೆ ಮೂಲಕ ವಸುಂಧರೆಯ ಸಂಧಿಸಿ ಯಶು ನಾಯ್ಕ ಬಿಜೆಪಿ ಟಿಕೆಟ್ ಪಕ್ಕಾ ಮಾಡಿಕೊಂಡಿದ್ದಾನಂತೆ. ಅಂತೂ ಆತ ಮುಂದಿನ ವಾರ ಕುಮಟೆಯಲ್ಲೊಂದು ಬೃಹತ್ ಸಮಾವೇಶ ಮಾಡಿ ಸಾಕ್ಷಾತ್ ಯಡ್ಡಿ ಕರೆಸಿ ಚೆಡ್ಡಿ ಪಕ್ಷಕ್ಕೆ ಅರ್ಪಣೆ ಆಗಲಿದ್ದಾನೆ. ಈ ಯಶು ನಾಯ್ಕನಿಗೆ ರಾಜವಂಶಸ್ಥರ, ರಾಜಸ್ತಾನದ ಸಿಎಂ ವಸುಂಧರೆಯ ನಂಟಿದೆಯೋ ಇಲ್ಲವ್ರೋ. ಆದರೆ ಇಂಥ ಪ್ರಭಾವಿಗಳ ಹೆಸರು ಬಳಸಿಕೊಂಡು ತೂಕ ಹೆಚ್ಚಿಸಿಕೊಳ್ಳುವ ಗಿಮಿಕ್ ಅಂತೂ ಆತನಿಗೆ ಕರಗತವಾಗಿ ಹೋಗಿದೆ.

ಯಶ್ ನಾಯ್ಕನ ಶೋ ಡಲ್ ಹೊಡೆವಂಥ ಸಮಾವೇಶ ಮಾಡಿ ಬಿಜೆಪಿ ಪಾಲಾಗುವ ಯೋಜನೆ ಸುಬ್ರಾಯ ವಾಳ್ಕೆ ಎಂಬ ನಿಗೂಢ ಶ್ರೀಮಂತ ಹಾಕಿದ್ದಾನೆ. ಈತ ತಾನು ಸಿನಿಮಾ ನಿರ್ಮಾಪಕ ಅಂತಾನೆ. ಆದರೆ ಆತನ ಸಿನಿಮಾ ಜನರ್‍ಯಾರೂ ನೋಡಿಲ್ಲ, ಬೆಳಗಾವಿಯ ಗ್ರಾನೈಟ್ ಉದ್ಯಮಿ ಅಂತಾನೆ. ಆದರೆ ಅದ್ಯಾರಿಗೂ ಗೊತ್ತಿಲ್ಲ, ಮಹಾರಾಷ್ಟ್ರದ ಸಿಎಂ ದೇವೇಂದ್ರ ಫಡ್ನವೀಸ್ ಆಸ್ಥಾನದ 'ಬಿಸ್ನೆಸ್'ಮನ್ ಈತನೆಂಬ ಪ್ರತೀತಿಯೂ ಇದೆ. ಇದ್ಯಾವುದೂ ಯಾರಿಗೂ ಪಕ್ಕಾ ಆಗಿಲ್ಲ, ಆದರೆ ಕುಮಟೆಯಲ್ಲಿ ಹಣ ಮಾತ್ರ ಕೋಟಿಗಳ ಲೆಕ್ಕದಲ್ಲೇ ಹರಿಸುತ್ತಾನೆ. ಬಡ ಮಾಲ್ಯರಿ ಮಗನಾದ ಸುಬ್ಬಾಳ್ಕೆ ಹಣವಂತಿಕೆ ಒಂದು ನಿಗೂಢ ರಹಸ್ಯ. ಈತ ಕುಮಟೆಯ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟು ಮಾಡುತ್ತಿರುವ ಸರ್ಕಸ್ ಹಲವು ವ್ಯಾಖ್ಯಾನಕ್ಕೆ ಕಾರಣವಾಗಿದೆ. ಸ್ಥಳೀಯ ಚೆಡ್ಡಿ ಚತುರ ವಿನೋದ ಪ್ರಭು ಎಂಬ ಗೇರು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷನಿಗೆ ವಾಳ್ಕೆ ಇನ್ನೋವಾ ಕಾರು ಗಿಫ್ಟ್ ಮಾಡಿದ್ದಾನೆ. ಪುರಸಭೆಯ ಪುಂಡ ಸದಸ್ಯನೊಬ್ಬನಿಗೂ ಅದೇ ಮಾದರಿಯ ಮತ್ತೊಂದು ಇನ್ನೋವಾ ಕಾರು ಕಾಣಿಕೆಯಾಗಿ ಕೊಟ್ಟು ತನ್ನ ಪರ ಪ್ರಚಾರ ಕಾರ್ಯಕ್ರಮ ನಡೆಸುವಂತೆ ಹೇಳಿದ್ದಾನೆ. ವಿನೋದ್ ಪ್ರಭು ಚೆಡ್ಡಿ ವಲಯದಲ್ಲಿ ಹೆಸರುವಾಸಿ. ಹಾಗಾಗಿ ಆತ ಟಿಕೆಟ್ ಕೊಡಿಸಲು ನೆರವಾಗುತ್ತಿದ್ದಾನೆಂದು ವಾಳ್ಕೆ ನಂಬಿದ್ದಾನೆ.


ಒಟ್ಟಿನಲ್ಲಿ ಜಿಲ್ಲಾ ಬಿಜೆಪಿಯಲ್ಲೀಗ ಟಿಕೆಟ್ ದಂಧೆ ಬಿರುಸಾಗಿ ಬಿಟ್ಟಿದೆ. ಘಟ್ಟದ ಮೇಲಿನ ಹಳಿಯಾಳ-ಜೋಯಿಡಾ ಕ್ಷೇತ್ರದ ಟಿಕೆಟ್ ಭರವಸೆ ಪಡೆದೇ ಮಾಜಿ ಶಾಸಕ ಸುನಿಲ್ ಹೆಗಡೆ ಎಂಬ ಕೊಂಕಣಿ ಪೋರ ಜೆಡಿಎಸ್‌ಗೆ ಬೈ ಹೇಳಿದ್ದ. ಆದರೀಗ ಆತನ ಪರಿಸ್ಥಿತಿ ದಿನಕರ ಶೆಟ್ಟಿಯ ದುರಂತದಂತೆಯೇ ಆಗಿದೆ. ಮೂಲಚೆಡ್ಡಿ ರಾಜೂಧೂಳಿ ಗ್ಯಾಂಗ್ ಸುನಿಲ್‌ನ ಕಾಡುತ್ತಿದೆ. ಮಾಜಿ ಎಸ್‌ಪಿ ಜಿ.ಆರ್. ಪಾಟೀಲ್ ಎಂಬ ಬಹುಸಂಖ್ಯಾತ ಮರಾಠರ ಮಾನುಸ್‌ನನ್ನು ಸಂಘ ಪರಿವಾರ ಅಭ್ಯರ್ಥಿಯಾಗಿ ತಯಾರು ಮಾಡುತ್ತಿದೆ. ತನಗೆ ಟಿಕೆಟ್ ಕೊಡದಿದ್ದರೆ ಬೇಡ, ಸುನಿಲ್ ಹೆಗಡೆಗೆ ಕೊಡಬೇಡಿ, ಜಿ.ಆರ್. ಪಾಟೀಲ್‌ಗೆ ಅಭ್ಯರ್ಥಿ ಮಾಡಿ ಯೆಂಬುದು ರಾಜೂಧೂಳಿ ಹಿಕ್ಮತ್ತು. ಹಳಿಯಾಳದ ನಿರ್ಣಾಯಕ ಮರಾಠರಿಗೂ ಅದೇ ದೋಷಪಾಂಡೆ; ಅದೇ ಸೋಗಲಾಡಿ ಸುನಿಲ್ ಹೆಗಡೆ ಕಂಡು ಬೇಜಾರು ಬಂದಿದೆ. ಮರಾಠರು ಹಠ ಹಿಡಿದು ಟಿಕೆಟ್ ಕೇಳಿದರೆ ಸುನಿಲ್ ಹೆಗಡೆಗೆ ಹಳೆ ಗಂಡ (ಜೆಡಿಎಸ್)ನ ಪಾದವೇ ಗತಿ ಆಗುತ್ತದೆ. ಸಾಕ್ಷಾತ್ ಕುಮ್ಮಿಯೇ "ಆ ಸುನಿಲ್ ಹೆಗಡೆ ಮತ್ತೆ ಪಾರ್ಟಿಗೆ ಬರ್ತೇನೆಂದು ದುಂಬಾಲು ಬಿದ್ದಿದ್ದಾನೆ..." ಎಂದು ಹೇಳಿದ್ದೂ ಇದೆ. ಗತಿಗೇಡಿ ಸುನಿಲ್ ಜೆಡಿಎಸ್ ಲೀಡರ್‌ಗಳ ಸುದ್ದಿಯಲ್ಲಿ ಇದ್ದಾನೆ.

ಯಲ್ಲಾಪುರ-ಮುಂಡಗೋಡು ಕ್ಷೇತ್ರದಿಂದ ಕಣಕ್ಕಿಳಿದರೆ ಏನಾದೀತೆಂದು ಲೆಕ್ಕಾಚಾರ ಖುದ್ದು ಅನಂತ್ಕಾಣಿ ಹಾಕುತ್ತಿದ್ದಾನೆ. ಆತನಿಗೆ ಮುಂದಿನ ಬಾರಿ ಲೋಕಸಭೆಗೆ ಸ್ಪರ್ಧಿಸಲು ಮೋದಿ-ಶಾ ಟಿಕೆಟ್ ಕೊಡಲಾರರೆಂಬುದು ಖಾತ್ರಿಯಾಗಿದೆ. ಅಷ್ಟು ಉತ್ತಮ ಸಾಧನೆ-ಸೇವೆ-ಜನಸಂಪರ್ಕ ಆತ ಸಾಧಿಸಿದ್ದಾನೆ. ಅಕಸ್ಮಾತ್ ಮೋದಿ-ಶಾ ಸಂಸದರಿಗೆ ಅಸೆಂಬ್ಲಿ ಚುನಾವಣೆಗೆ ನಿಲ್ಲುವ ಭಾಗ್ಯ ಕರುಣಿಸಿದರೆ ಕುಮಟಾ ಅಥವಾ ಯಲ್ಲಾಪುರ ಕ್ಷೇತ್ರದ ಕ್ಲೇಮು ಮಂಡಿಸಲು ಅನಂತ್ಕಾಣಿ ಸಿದ್ಧನಾಗಿ ಕುಂತಿದ್ದಾನೆ. ಯಲ್ಲಾಪುರದ ಮಾಜಿ ಶಾಸಕ ವಿ.ಎಸ್. ಪಾಟೀಲ್ ಯಡ್ಡಿಯ ಲಿಂಗಾಯತ ಲಾಬಿಯಲ್ಲಿದ್ದರೂ ಅನಂತ್ಕಾಣಿಗೆ ಈತನ ಮುಸುಡಿ ಕಂಡರಾಗದು. ಹೀಗಾಗಿ ಆತ ತನಗಲ್ಲದಿದ್ದರೂ ತನ್ನ ಮಗ ಬಾಪುಗೌಡನಿಗಾದರೂ ಚಾನ್ಸ್ ಕೇಳುತ್ತಿದ್ದಾನೆ. ಕೋಣೆ ಮನೆ, ಭಾಗ್ವತ್ ವಗೈರೆಗಳು ಕ್ಯೂ ನಿಂತಿದ್ದಾರೆ. ಆದರೆ ಇವರೆಲ್ಲರಿಗಿಂತ ಹೆಚ್ಚು ಎಮ್ಮೆಲ್ಲೆ ಚಟವಿರುವುದು ಪ್ರಮೋದ್ ಹೆಗಡೆ ಎಂಬ ಎಡಬಿಡಂಗಿ ಪುಢಾರಿಗೆ. ಎಲ್ಲಾ ಪಾರ್ಟಿ ಎರಡೆರಡು ಬಾರಿ ಹೊಕ್ಕು ಹೊರಬಂದಿರುವ ಈತ ಗುದುಮುರಿಗೆ ಗುಂಡ ಅನಂತ್ಕಾಣಿ ಕಾಲಿಗೆ ಬೀಳುವ ದೈನೇಸಿ ಸ್ಥಿತಿ ತಲುಪಿದ್ದಾರೆಂಬುದೇ ಹವ್ಯಕ ವಲಯದ ಘೋರ ದುರಂತ ಎಂಬಂತಾಗಿದೆ.

ಇಡೀ ಜಿಲ್ಲೆಯಲ್ಲಿ ಒಂದು ಸುತ್ತು ಕಣ್ಣು ಹಾಯಿಸಿದರೆ ಯಾವ ಕ್ಷೇತ್ರದಲ್ಲೂ ಬಿಜೆಪಿಗೆ ಪಕ್ಕಾ ಕ್ಯಾಂಡಿಡೇಟೇ ಇಲ್ಲದಂತಾಗಿದೆ. ಒಳಬೇಗುದಿಯಿಂದ ಬಿಜೆಪಿ ಕೊತಗುಡುತ್ತಿದೆ. ಯಾರಿಗೆ ಟಿಕೆಟ್ ಸಿಕ್ಕರೂ ಪ್ರತಿ ಕ್ಷೇತ್ರದಲ್ಲಿ ಬಂಡಾಯ ಖಂಡಿತ ಎಂದು ಬಿಜೆಪಿ ರಹಸ್ಯ ರಗಳೆ ಕಂಡ ಹಿರಿಯರು ಹೇಳುತ್ತಿದ್ದಾರೆ. ಇದನ್ನು ನಿಭಾಯಿಸುವ ಚಾಕಚಕ್ಯತೆ ಹುಂಬ ಅನಂತ್ಕಾಣಿಗೆ ಇಲ್ಲ, ಹೀಗೇ ಆತ ಸ್ವಯಂ ಅವಸಾನ ಆಗಲೆಂದು ಕಾಗೇರಿ ಕಾಯುತ್ತಿದ್ದಾನೆ. ಮಜಾ ಎಂದರೆ, ಬಿಜೆಪಿ ತೆಪ್ಪವನ್ನು ಗುಂಡು ಕಲ್ಲುಗಳು ತುಂಬುತ್ತಲೇ ಇವೆ....

■ ವರದಿಗಾರ

ಕೊಪ್ಪಳ ಕಾಂಗ್ರೆಸ್: ಭಿನ್ನಮತದ ಬೇಗುದಿಗಳ





ವಿಧಾನಸಭೆ ಎಲೆಕ್ಷನ್‌ಗೆ ದಿನಗಣನೆ ಶುರುವಾದಂತೆ ಕೊಪ್ಪಳದ ಕಾಂಗ್ರೆಸ್‌ನಲ್ಲಿ ಆಂತರಿಕ ಗುದಮುರಗಿಯ ಲಕ್ಷಣಗಳು ದಟ್ಟೈಸತೊಡಗಿವೆ. ಮೊನ್ನೆ ಕುಷ್ಟಗಿ ಮತ್ತು ಶ್ರೀರಾಮನಗರದಲ್ಲಿ ನಡೆದ ಪೊಲಿಟಿಕಲ್ ಹೈಡ್ರಾಮಾಗಳು ಅದನ್ನು ಸಾಬೀತುಮಾಡಿವೆ.

ಚುನಾವಣೆ ಸನ್ನಿಹವಾಗುತ್ತಿರೋದರಿಂದ ಬೂತ್ ಮಟ್ಟದಲ್ಲಿ ಕಾರ್ಯಕರ್ತರನ್ನು ಸಜ್ಜುಗೊಳಿಸಲು ಎಲ್ಲಾ ಪಕ್ಷಗಳೂ ಚುರುಕಿನಿಂದ ಓಡಾಡುತ್ತಿವೆ. ಮೊನ್ನೆ ಕಾಂಗ್ರೆಸ್ ಕೂಡಾ ಕುಷ್ಟಗಿಯಲ್ಲಿ ತಾಲ್ಲೂಕು ಮಟ್ಟದ ಕಾರ್ಯಕರ್ತರ ಸಭೆ ಆಯೋಜಿಸಿತ್ತು, ಎಐಸಿಸಿ ಕಾರ್ಯದರ್ಶಿ ಶೈಲಜಾನಾಥ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ ಭಟ್, ರಾಘು ಗುಜ್ಜಲ ಮೊದಲಾದವರು ಭಾಗವಹಿಸಿದ್ದರು. ಆ ಸಭೆಯಲ್ಲಿ ಕುಷ್ಟಗಿಯ ಮಾಜಿ ಶಾಸಕ ಹಸನಸಾಬ ಧೋಟಿಹಾಳ ಎಲ್ಲಾ ಮುಖಂಡರೆದುರು ಜಿಲ್ಲಾಧ್ಯಕ್ಷ ಬಸವರಾಜ್ ಹಿಟ್ನಾಳ್‌ನನ್ನು ತರಾಟೆಗೆ ತೆಗೆದುಕೊಂಡು ಭಿನ್ನಮತದ ಸುಳಿವು ನೀಡಿದರು. ಜಿಲ್ಲಾ ಅಧ್ಯಕ್ಷ ಎನಿಸಿಕೊಂಡ ಬಸವರಾಜ ಹಿಟ್ನಾಳ್, ಕುಷ್ಟಗಿ ಕಡೆ ಮುಖ ಕೂಡ ಮಾಡುವುದಿಲ್ಲ, 20 ವರ್ಷ ಕಾಂಗ್ರೆಸ್ಸಿನಲ್ಲಿರುವ ತನ್ನಂತಹ ಮಾಜಿ ಶಾಸಕನಿಗೆ ಹಿಟ್ನಾಳ್ ಕೇರ್ ಮಾಡಲ್ಲ ಅಂದಮೇಲೆ ಕಾರ್ಯಕರ್ತರಿಗೆ ಇನ್ನೆಂತಹ ಮರ್ಯಾದೆ ಸಿಗಬೇಡ ಅಂತ ಗುಡುಗಿದ್ದರು. ಕೊನೆಗೆ ವೇದಿಕೆ ಮೇಲಿದ್ದ ಮುಖಂಡರು ಸಮಾಧಾನ ಮಾಡಿದ ಮೇಲೆ ಸಭೆ ಮುಂದುವರೆಯಿತು.

ಹಿಟ್ನಾಳ್ ವಿರುದ್ಧ ಇಂತಹ ಆರೋಪಗಳು ಇದೇ ಮೊದಲೇನಲ್ಲ, 1999ರಲ್ಲಿ ಕೊಪ್ಪಳದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ ಅಂದಾನಪ್ಪ ಅಗಡಿ ಕೂಡಾ ಹಿಟ್ನಾಳ್ ದರ್ಬಾರ್‌ಗೆ ಬೇಸತ್ತು ಬಿಜೆಪಿ ಹೊಕ್ಕಿದ್ದಾನೆ. 1994ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ 12,000 ಮತ ಪಡೆದಿದ್ದ ಅಂದಾನಪ್ಪ 2008ರ ವೇಳೆಗೆ ಬಿಜೆಪಿ ಅಭ್ಯರ್ಥಿಯಾಗಿ ಸೋತಿದ್ದ. ಯಾವಾಗ ಕರಡಿ ಸಂಗಣ್ಣ ಬಿಜೆಪಿ ಸೇರಿದನೋ ಆಗ ಕಾಂಗ್ರೆಸ್ಸಿಗೆ ವಾಪಸಾಗಿದ್ದ ಅಂದಾನಪ್ಪ, ಹಿಟ್ನಾಳ್‌ನ ಸರ್ವಾಧಿಕಾರಿ ಧೋರಣೆ ಕಂಡು ಮೊನ್ನೆ ಕೊಪ್ಪಳಕ್ಕೆ ಬಂದಿದ್ದ ಯಡ್ಡಿ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದಾನೆ. ಇಲ್ಲಿ ದೋಟಿಹಾಳ್, ಅಂದಾನಪ್ಪನಂತವರಿಂದ ಎಷ್ಟು ಲಾಭ ಅಂತ ಲೆಕ್ಕ ಹಾಕುವುದಕ್ಕಿಂತ ಚುನಾವಣೆಯ ಹೊಸ್ತಿಲಲ್ಲಿ ಎಲ್ಲರನ್ನೂ ಒಗ್ಗೂಡಿಸಿ ಕೊಂಡೊಯ್ಯಬೇಕಿದ್ದ ಜಿಲ್ಲಾಧ್ಯಕ್ಷನೇ ಹಲವರ ಬೇಗುದಿಗೆ ಕಾರಣವಾಗುತ್ತಿರೋದು ಕಾಂಗ್ರೆಸ್ ಪಕ್ಷ ತಲೆಕೆಡಿಸಿಕೊಳ್ಳಬೇಕಾದ ಸಂಗತಿ.


ಯಲಬುರ್ಗದ ರಾಯರೆಡ್ಡಿಗೆ 'ಭೂತೆ' ಕಾಟ


ಇದು ಕುಷ್ಟಗಿಯ ಕತೆಯಾದರೆ ಯಲಬುರ್ಗದಲ್ಲೂ ಭಿನ್ನಮತದ ಲಕ್ಷಣಗಳು ಕಾಣಿಸಿಕೊಂಡಿವೆ. ಇಲ್ಲಿನ ಹಾಲಿ ಶಾಸಕ ಕಂ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಯ ವಿರುದ್ಧ ಬಸವಲಿಂಗಪ್ಪ ಭೂತೆ ತಿರುಗಿಬಿದ್ದಿದ್ದಾರೆ. 1985ರಿಂದ 2004ರವರೆಗೆ ಜನತಾ ಪರಿವಾರದಲ್ಲಿ ರಾಜಕಾರಣ ಮಾಡಿ ನಾಲ್ಕು ಬಾರಿ ಶಾಸಕನಾಗಿ, ಒಮ್ಮೆ ಸಚಿವಗಿರಿ ರುಚಿಕಂಡ ರಾಯರೆಡ್ಡಿ 2004ರಲ್ಲಿ ಕಾಂಗ್ರೆಸ್‌ಗೆ ಜಿಗಿದಾಗ ಪಕ್ಷದೊಳಗೆ ಒಂದಷ್ಟು ಗಲಿಬಿಲಿಗಳು ಶುರುವಾಗಿದ್ದವು. ಯಾಕೆಂದರೆ ಸತತ 30 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠನಾಗಿದ್ದ ಶಿವಶರಣಪ್ಪ ಗೌಡನಿಗೆ ಟಿಕೆಟ್ ತಪ್ಪಿಸಿ ರಾಯರೆಡ್ಡಿ ಕೈ ಪಾರ್ಟಿಯ ಬಿ ಫಾರಂ ದಕ್ಕಿಸಿಕೊಂಡದ್ದು ಹಲವು ಕಾಂಗ್ರೆಸ್ಸಿಗರಿಗೆ ಇಷ್ಟವಾಗಿರಲಿಲ್ಲ, ಅವರೆಲ್ಲ ಉಲ್ಟಾ ಹೊಡೆಯುವ ಸಾಧ್ಯತೆ ಇದ್ದ ಆ ಚುನಾವಣೆಯಲ್ಲಿ ರಾಯರೆಡ್ಡಿಯ ಗೆಲುವೂ ಅನುಮಾನವಾಗಿತ್ತು, ಅಂತಹ ಸಂದರ್ಭದಲ್ಲಿ ರಾಯರೆಡ್ಡಿ ಬೆನ್ನಿಗೆ ನಿಂತದ್ದು ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷನಾಗಿದ್ದ ಬಸವರಾಜ್ ಭೂತೆ.


ಯಲಬುರ್ಗಾ ತಾಲೂಕಿನಲ್ಲಿ ಭೂತೆಯವರದ್ದು ಪ್ರತಿಷ್ಠಿತ ರಾಜಕಾರಣ ಕುಟುಂಬ. ಇವರ ತಂದೆ ಕರಿಬಸಪ್ಪ 1960ರ ದಶಕದಲ್ಲೇ 10 ವರ್ಷಗಳ ಕಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಂತವರು. ಅವರ ನಂತರ ಮಗನಾದ ಬಸವಲಿಂಗಪ್ಪ ಕೂಡಾ ಹೆಚ್ಚೂಕಮ್ಮಿ 7 ದಶಕಗಳ ಕಾಲ ಕಾಂಗ್ರೆಸ್ ನಿಷ್ಠೆಗೆ ಬಿಗಿದುಕೊಂಡು ಬಂದಿದ್ದಾರೆ. ತನ್ನ ಆರಂಭಿಕ ಕಾಂಗ್ರೆಸ್ ಹಾದಿಯ ಗೆಲುವಿಗೆ ಕಾರಣವಾಗಿದ್ದ ಅಂತಹ ಭೂತೆಯನ್ನು ಇದೀಗ ರಾಯರೆಡ್ಡಿ ಕಡೆಗಣಿಸಲು ಶುರು ಮಾಡಿದ್ದಾರೆ. ಇದು ಇವರಿಬ್ಬರ ನಡುವೆ ವೈಮನಸ್ಸು ತಂದಿಟ್ಟಿದ್ದು ಭೂತೆ ಕಾಂಗ್ರೆಸ್‌ಗೆ ಆಘಾತ ನೀಡುವಂತಹ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಅವರ ಆಪ್ತರು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಹಾಗೇನಾದರು ಆದಲ್ಲಿ ಈಗಾಗಲೇ ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಸುತ್ತಿಕೊಂಡಿರುವ ರಾಯರೆಡ್ಡಿಯ ಗೆಲುವು ಕಷ್ಟವಾಗಲಿದೆ.


ಕನಕಗಿರಿ ತಂಗಡಗಿಗೆ ಸಂಕಟ


ಇನ್ನು ಕನಕಗಿರಿ ಕಾಂಗ್ರೆಸ್ಸಿನಲ್ಲೂ ಶೀತಲಸಮರ




























ತಾರಕಕ್ಕೇರಿದೆ. ಮಾಜಿ ಮಂತ್ರಿ ಸಾಲೋಣಿ ನಾಗಪ್ಪ ಮತ್ತು ಆತನ ಮಗ ಜಿ.ಪಂ ಮಾಜಿ ಸದಸ್ಯ ವಿರೇಶ ಸಾಲೋಣಿ, ಹಾಲಿ ಶಾಸಕ ಶಿವರಾಜ ತಂಗಡಗಿಯ ಬಗ್ಗೆ ಮುನಿಸಿಕೊಂಡಿದ್ದಾರೆ. ಇತ್ತೀಚೆಗೆ ಶ್ರೀರಾಮನಗರದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದ ಭಾನ್ಗಡಿಯೇ ಇದಕ್ಕೆ ಸಾಕ್ಷಿ. ಅವತ್ತಿನ ಕಾರ್ಯಕ್ರಮದಲ್ಲಿ ಹಲವು ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಆದರೆ ಬ್ಯಾನರ್‌ಗಳಲ್ಲಿ ಮಾಜಿ ಮಂತ್ರಿ ನಾಗಪ್ಪ ಸಾಲೋಣಿಯ ಫೋಟೊ ಇರಲೇ ಇಲ್ಲ, ಇದು ನಾಗಪ್ಪನ ಹಿಂಬಾಲಕರನ್ನು ಕೆರಳಿಸಿತ್ತು, ಅವರೆಲ್ಲ ಸಭೆಯಲ್ಲಿ ಗದ್ದಲ ಎಬ್ಬಿಸಿ ಬ್ಯಾನರ್ ಹರಿದುಹಾಕಿಯೇಬಿಟ್ಟರು. ಕೊನೆಗೆ ಶಾಸಕ ತಂಗಡಗಿ ಕ್ಷಮೆ ಕೋರಿದ ಬಳಿಕವಷ್ಟೇ ಸಭೆ ಆರಂಭವಾಯಿತು.

ಕುರುಬ ಸಮುದಾಯದ ಸಾಲೋಣಿ ನಾಗಪ್ಪ ಕೊಪ್ಪಳ ಜಿಲ್ಲಾ ರಾಜಕಾರಣದಲ್ಲಿ ಜನಪ್ರಿಯ ಹೆಸರು. 1985ರಿಂದ ಜನತಾದಳದಲ್ಲಿ ರಾಜಕಾರಣ ಶುರು ಮಾಡಿದ ಈತ ಒಮ್ಮೆ ಕಾಂಗ್ರೆಸ್ಸಿನ ಶ್ರೀರಂಗದೇವರಾಯನ ವಿರುದ್ಧ ಕೇವಲ 400 ಮತಗಳ ಅಂತರದಿಂದ, ಮಗದೊಮ್ಮೆ 1989ರಲ್ಲಿ ಕಾಂಗ್ರೆಸ್ಸಿನ ಎಂ ಮಲ್ಲಿಕಾರ್ಜುನ ವಿರುದ್ಧ 10,000 ಮತಗಳಿಂದ ಸೋತಿದ್ದರು. 1994ರಲ್ಲಿ ಅವರ ನಸೀಬು ಖುಲಾಯಿಸಿತು. ಆ ವರ್ಷ ಕಾಂಗ್ರೆಸ್ಸಿನ ಎಂ ಮಲ್ಲಿಕಾರ್ಜುನ್ ವಿರುದ್ಧ ಕೇವಲ 1000 ಮತಗಳಿಂದ ಗೆದ್ದ ಸಾಲೋಣಿ ಜನತಾದಳದಿಂದ ಪ್ರಥಮ ಬಾರಿಗೆ ವಿಧಾನಸಭೆ ಹೊಕ್ಕಿದ್ದರು. 1999ರ ವೇಳೆಗೆ ಜೆಡಿಯುನಿಂದ ಸ್ಪರ್ಧಿಸಿ ಸೋತ ಸಾಲೋಣಿ 2004ರಲ್ಲಿ ಬಿಜೆಪಿ ಹೊಕ್ಕು, ಕೇಸರಿ ಅಭ್ಯರ್ಥಿಯಾಗಿ ಲೋಕಸಭಾ ಕದನಕ್ಕಿಳಿದು ಸೋತರು.

2008ರಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡ ಸಾಲೋಣಿ ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ಸೋಲುಂಡರು. ತನ್ನ ರಾಜಕೀಯ ಜೀವನದಲ್ಲಿ ಆಜಮಾಸು ಎಲ್ಲಾ ಪಾರ್ಟಿಗಳನ್ನು ಹೊಕ್ಕುಬಂದಿರುವ ಮತ್ತು ಬರೋಬ್ಬರಿ 5 ಬಾರಿ ಸೋತಿರುವ ಸಾಲೋಣಿ ಈಗ ಕನಕಗಿರಿ ಶ… ಶಿವರಾಜ ತಂಗಡಗಿಯೊಂದಿಗೆ ಜಿದ್ದಿಗೆ ಬಿದ್ದಿದ್ದಾರೆ. ಈ… ಮಗ ವಿರೇಶ್ ಸಾಲೋಣಿ ಜಿ.ಪಂ ಸದಸ್ಯನಾಗಿ … ಮಾಜಿಯಾಗಿದ್ದಾನೆ. ಆತನಿಗೆ ಭದ್ರ ರಾಜಕೀಯ ಭ… ರೂಪಿಸುವ ಹೊಣೆ ನಾಗಪ್ಪನ ಮೇಲೆ ಬಿದ್ದಿದೆ. ಮು… ಎಲೆಕ್ಷನ್‌ನಲ್ಲಿ ಮಗನಿಗೆ ಕಾಂಗ್ರೆಸ್ ಟಿ… ಕೊಡಿಸಬೇಕೆನ್ನುವುದು ತಂದೆಯ ಇರಾದೆಯಾಗಿತ್ತು, … ಶಿವರಾಜ್ ತಂಗಡಗಿಯಿಂದ ಅದು ಸಾಧ್ಯವಾಗುತ್ತಿ…


ಪಕ್ಷಾಂತರದ ಪರ್ಮಿಟ್ ಪಡೆದಿರುವ ಸಾಲೋಣಿಯ… ಈಗಾಗಲೇ ತಮ್ಮ ಮಗ ವಿರೇಶ್‌ನನ್ನು ಕುಮಾರಸ್ವಾ… ಜೊತೆ ಮಾತುಕತೆಗೆ ಕಳುಹಿಸಿಕೊಟ್ಟಿದ್ದಾರೆ ಎನ್ನಲಾಗಿ… ಗಂಗಾವತಿಯಲ್ಲಿ ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿ ಪಕ್ಷ… ಅಮಾನತ್ತುಗೊಂಡು ಕಾಂಗ್ರೆಸ್ ಸೇರಿಕೊಳ್ಳುತ್ತಿರೋದರಿಂ… ಜೆಡಿಎಸ್ ಕುರ್ಚಿ ಖಾಲಿಯಿದೆ. ಹೇಗೂ ಗಂಗಾವತಿ… ಕುರುಬ ಮತಗಳು 40 ಸಾವಿರಕ್ಕೂ ಜಾಸ್ತಿ ಇರೋ… ಜಾತಿ ಟ್ರಂಪ್‌ಕಾರ್ಡ್ ಬಳಸಿಕೊಂಡು ಕುಮಾರಣ್ಣನನ್ನು … ಮಗ ವಿರೇಶ್‌ನನ್ನು ಗಂಗಾವತಿಯ ಜೆಡಿ… ಅಭ್ಯರ್ಥಿಯಾಗಿಸೋದು ನಾಗಪ್ಪ ಸಾಲೋಣಿಯ ಹಿಕ… ಎಂಬ ಸುದ್ದಿ ಹರಿದಾಡುತ್ತಿದೆ. ಇದೇ ತಂಗಡಗಿ … ಸಾಲೋಣಿಗಳ ನಡುವೆ ಕಂದಕವನ್ನು ಸೃಷ್ಟಿಸಿರುವ ಸಂಗ… ಜಿಲ್ಲಾ ಕಾಂಗ್ರೆಸ್ಸಿನ ಪುರಾತನ ಕುಳ ಎಚ್.ಜಿ.ರಾಮುಲ… ಮಗ ಎಚ್.ಆರ್.ಶ್ರೀನಾಥನ ರಾಜಕೀಯ ಭ… ಡೋಲಾಯಮಾನಕ್ಕೆ ಸಿಲುಕಿದೆ. ಜೆಡಿಎಸ್ ಬಂಡಾಯ … ಇಕ್ಬಾಲ್ ಅನ್ಸಾರಿಗೆ ಗಂಗಾವತಿಯ ಕಾಂಗ್ರೆಸ್ ಟಿ… ನಿಕ್ಕಿಯಾಗಿರೋದ್ರಿಂದ ಆತ ಮುಂದಿನ ಭವಿಷ್ಯದ ಬಗ್ಗೆ ಚಿಂತ… ಶುರುಮಾಡಿದ್ದಾನೆ.

ಒಟ್ಟನಲ್ಲಿ ಕಾಂಗ್ರೆಸ್ ಜಿಲ್ಲೆಯ ಮಟ್ಟಿಗೆ ಸ… ಬಲಿಷ್ಠವಾಗಿರುವ ಕಾಂಗ್ರೆಸ್ ತನ್ನ ಆಂತ… ಗುದಮುರಗಿಗಳಿಂದಲೇ ಮೆತ್ತಗಾಗುತ್ತಿದೆ. ಹಾಗೆ ನೋಡಿ… ಕೊಪ್ಪಳ ಜಿಲ್ಲೆಯಲ್ಲಿ ಮೂವರು ಕಾಂಗ್ರೆಸ್ ಶಾಸ… ಒಬ್ಬ ಸಚಿವ ಕಾಂಗ್ರೆಸ್ಸಿಗರೇ ಇದ್ದಾರೆ. ಸಾಲದ್ದಕ್ಕೆ ಕೊ… ಜಿಲ್ಲಾ ಪಂಚಾಯತಿ ಮತ್ತು ಕೊಪ್ಪಳ, ಯಲಬು… ಗಂಗಾವತಿ ತಾಲೂಕಾ ಪಂಚಾಯತಿಗಳು ಹಾ… ಕುಕನೂರು, ಯಲಬುರ್ಗಾ, ಕನಕಗಿರಿ, ಕಾರಟಗಿ ಪ… ಪಂಚಾಯತಿಗಳು, ಎಪಿಎಂಸಿಗಳು, ಬಹುತೇಕ ಪಿಎ… ಬ್ಯಾಂಕ್‌ಗಳು ಕಾಂಗ್ರೆಸ್ ಹಿಡಿತದಲ್ಲೇ ಇವೆ. ಆದರೆ … ಭುಗಿಲೇಳುತ್ತಿರುವ ಭಿನ್ನಮತಗಳೇ ಕಾಂಗ್ರೆಸ್‌ಗೆ ತಲೆನೋ… ಅವುಗಳನ್ನು ಈಗಲೇ ಶಮನ ಮಾಡಿಕೊಳ್ಳದಿದ್ದರೆ ಬಿ… ಜೆಡಿಎಸ್‌ಗಳು ಅದರ ಲಾಭ ಪಡೆಯುವುದರಲ್ಲಿ ಯ… ಅನುಮಾನವೂ ಇಲ್ಲ.

■ ಸ.ಶರಣಪ್ಪ ಪಾಟಿ…

ಈ ಕಿಡಿ ಅರಿವಿನ ಜ್ವಾಲೆಯಾಗಲಿ





ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ (11-08-2017ರಂದು) ಮಠಾಧೀಶರುಗಳೆಲ್ಲ ಸೇರಿ ಲಿಂಗಾಯತ ಧರ್ಮಕ್ಕೆ ನಿಷ್ಠರಾಗಿ ನಿರ್ಣಯ ತೆಗೆದುಕೊಂಡ ಸುದ್ದಿ ಪ್ರಸಾರವಾಯಿತು. ದಿನಾಂಕ: 12-08-2017ರ ರಾತ್ರಿ ಸುಮಾರು 8.45 ಗಂಟೆಗೆ ಶ್ರೀ ತೋಂಟದಾರ್ಯ ಸ್ವಾಮಿಗಳವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, "ಸ್ವಾಮೀಜಿ ನೀವೆಲ್ಲ ಉತ್ತಮ ನಿರ್ಧಾರ ತೆಗೆದುಕೊಂಡಿದ್ದೀರಿ. ಲಿಂಗಾಯತ ಧರ್ಮ ಎನ್ನುವುದೇ ಸರಿ. ತಮಗೆಲ್ಲ ಅಭಿನಂದನೆಗಳು" ಎಂದೆ. ಅವರು "ಅದಕ್ಕೆ ನಿಮ್ಮ ಪುಸ್ತಗಳ ಅಧ್ಯಯನವೇ ಕಾರಣ. ಅದರಲ್ಲೂ 'ಶಂಕರಾ ಚಾರ್ಯ ಮತ್ತು ಪ್ರತಿಗಾಮಿತನ' ಕೃತಿ ಬಹಳ ಸ್ಪಷ್ಟತೆ ನೀಡಿತು" ಎಂದರು. ನಾನು "ಸ್ವಾಮೀಜಿ, ಬಹಳ ದೊಡ್ಡ ಮಾತು. ತಮ್ಮ ಆಶೀರ್ವಾದ ಬೇಕು" ಎಂದೆ. "ಭಗವಂತನದು" ಎಂದರು. ಪೂಜ್ಯ ತೋಂಟದಾರ್ಯ ಸ್ವಾಮಿಗಳು ಬಹಳ ದೊಡ್ಡವರು. ಅವರ ಸಭೆಗಳಲ್ಲಿ ಈ ಪುಸ್ತಕವನ್ನು ಪ್ರಸ್ತಾಪಿಸಿದ್ದಾರೆ. ಇದರ ನೂರಾರು ಪ್ರತಿಗಳನ್ನು ತರಿಸಿಕೊಂಡು ವಿತರಿಸಿದ್ದಾರೆ. ಪೂಜ್ಯರಿಗೆ ನಾನು ಸದಾ ಋಣಿ.


ಕಲ್ಬುರ್ಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಬಿ.ಆರ್.ಪಾಟೀಲರು, "ನಾವು ವೈದಿಕರ ಗುಲಾಮರಲ್ಲ" (ಪ್ರಜಾವಾಣಿ: 04-08-2017) ಎಂದಿದ್ದಾರೆ. ಇದು ತೀರ ಜಾಗೃತಿಯ ತೀಕ್ಷ್ಣ ಮಾತು. ಮಹಾ ವಿವೇಕಿ ಮತ್ತು ಸ್ವಾಭಿಮಾನಿ ಆಗಿರುವ ಬಿ.ಆರ್. ಪಾಟೀಲರು ನನ್ನ ಆತ್ಮೀಯ ಮಿತ್ರರು ಎನ್ನಲು ನನಗೆ ಹೆಮ್ಮೆ.

ಬಹಳ ಜನರಿಗೆ, ಸರಿಯಾಗಿ ಹೇಳುವುದಾದರೆ ನೂರಕ್ಕೆ ತೊಂಬತ್ತೊಂಬತ್ತು ಪಾಯಿಂಟ್ ಒಂಬತ್ತು ಜನರಿಗೆ ಹಿಂದೂ ಧರ್ಮ ಎಂದರೆ ಏನೂ ಗೊತ್ತಿಲ್ಲ, ಹಬ್ಬ ಹರಿದಿನ, ಪೂಜೆ ಪುನಸ್ಕಾರ, ದೇವಸ್ಥಾನಕ್ಕೆ ಹೋಗುವುದು – ಇದೇ ಧರ್ಮ ಎಂದುಕೊಂಡುಬಿಟ್ಟಿದ್ದಾರೆ. ಇದು ಹಿಂದೂ ಧರ್ಮ ಎಂಬ ಪಾತಾಳದ ಅತ್ಯಂತ ಹೊರ ಅಂಚು. ಹಿಂದೂ ಧರ್ಮ ಎಂದರೆ ಬ್ರಾಹ್ಮಣ ಧರ್ಮ ಎಂದು ಅರಿತುಕೊಳ್ಳುವುದು ಅತ್ಯಗತ್ಯವಾಗಿದೆ. ಹಿಂದೂ ಧರ್ಮದ ಮಹಾಕು… ಆಳದಲ್ಲಿ ಚಾತುರ್ವರ್ಣ ಇದೆ. ಅದರಲ್ಲಿ ನಾಲ್ಕು ಜಾತಿ… – ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂ… ಶೂದ್ರರು ಬ್ರಾಹ್ಮಣರ ಗುಲಾಮರು – "ದಾಸ್ಯಂ ಶೂ… ದ್ವಿಜನ್ಮನಾಂ" (ಮನುಸ್ಮೃತಿ ಅಧ್ಯಾಯ 8, ಶ್ಲೋಕ … ಆದ್ದರಿಂದ ಯಾರು ಹಿಂದೂ ಧರ್ಮ ಒಪ್ಪಿಕೊಳ್ಳುತ್ತಾ… ಅವರು ಬ್ರಾಹ್ಮಣರ ಗುಲಾಮರಾಗುತ್ತಾರೆ. ಶೂದ್ರ … ಸೂಳೆ ಮಗ (ಮನುಸ್ಮೃತಿ ಅಧ್ಯಾಯ 8, ಶ್ಲೋಕ … ಆದ್ದರಿಂದ 'ಶೂದ್ರರು' ಹಿಂದೂ ಧರ್ಮ ಅರ್ಥಾತ್ ಬ್ರಾ… ಧರ್ಮ ನಮ್ಮದಲ್ಲ ಎಂದು ಹೊರಬರಬೇಕಾಗಿದೆ. ಬ್ರಾ… ಧರ್ಮಕ್ಕೆ ವೈದಿಕ ಮತ ಎಂಬ ಹೆಸರೂ ಇದೆ. ವೈ… ಇರುವ ಅರ್ಥಗಳಲ್ಲಿ ಇಲ್ಲಿ ಎರಡು ಪ್ರಸ್ತುತ. ಒಂದು, … ಸಂಬಂಧಿಸಿದ್ದು; ಎರಡು, ಶ್ರಾದ್ಧ ಚಾತುರ್ವರ್ಣದ … ವೈದಿಕ ಮತ ಶೂದ್ರರನ್ನು ತಿಥಿ ಮಾಡಿದೆ.

ಈ ನಿಟ್ಟಿನಲ್ಲಿ ಈಗ ಒಕ್ಕಲಿಗರಲ್ಲಿ ಎಚ್ಚರಿಕೆಯು… ಸಿಡಿದಿದೆ. ಮಾಜಿ ಉಪಮುಖ್ಯಮಂತ್ರಿ ಆರ್. ಅಶೋ… ಮತ್ತು ಮಾಜಿ ಸಚಿವ ಚಲುವರಾಯಸ್ವಾಮಿ ನಮ… ಆದ ಧರ್ಮ ಬೇಕು ಎಂದಿರುವುದು (ಡೆಕನ್ ಕ್ರಾನಿ… ವಿಜಯ ಕರ್ನಾಟಕ ದಿನಾಂಕ: 12-08-2017) ಸೂಚನೆ. ಈ ಕಿಡಿ ಅರಿವಿನ ಜ್ವಾಲೆಯಾಗಲಿ.

■ ಪ್ರೊ| ಕೆ.ಎಸ್.ಭಗವಾನ್, ಮೈ…

ರಾಯಚೂರು: ಬ್ರಿಗೇಡ್ ವಿರೂಪಾಕ್ಷಪ್ಪ ಜೆಡಿಎಸ್ ಸೇರ್ತಾರಾ?


ಕೆ.ವಿರೂಪಾಕ್ಷಪ್ಪ


ಗಂಡ-ಹೆಂಡ್ತಿ ನಡುವೆ ಕೂಸು ಬಡವಾಯ್ತು ಅನ್ನೋರಲ್ಲ, ಹಾಗಾಗಿದೆ ಪಾಪ, ಕೊಪ್ಪಳದ ಕುರುಬರ ವಿರೂಪಾಕ್ಷಪ್ಪನ ಕತೆ. ಯಡ್ಡಿ ವಿರುದ್ಧ ತಿರುಗಿ ಬೀಳಲು ರಾಯಣ್ಣ ಬ್ರಿಗೇಡ್ ಕಟ್ಟಿಕೊಂಡು ಅವತಾರ ಪುರುಷನಂತೆ ಬಿಂಬಿಸಿದ್ದ ಈಶ್ವರಪ್ಪನಿಗೆ ಬೆನ್ನೆಲುಬಾಗಿ ನಿಂತದ್ದೇ ಈ ವಿರೂಪಾಕ್ಷಪ್ಪ. ಬಿಜೆಪಿ ಅಧ್ಯಕ್ಷ ಅಮಿತ್ ಶಾ ಕಟ್ಟಪ್ಪಣೆ ಹೊರಡಿಸಿ ಬ್ರಿಗೇಡ್ ಆಟವನ್ನು ಕಟ್ಟಿಡು ಅಂತ ತಾಕೀತು ಮಾಡಿದ್ದೇ ತಡ ಈಶ್ವರಪ್ಪ ಬ್ರಿಗೇಡ್ ಗೂಟ ಕಿತ್ತೆಸೆದು ಗಪ್‌ಚುಪ್. ಈಶ್ವರಪ್ಪನ ಈ ಯೂಟರ್ನ್ ಡ್ರಾಮಾಕ್ಕೆ ಬಲಿಪಶು ಆದದ್ದು ಮಾತ್ರ ವಿರೂಪಾಕ್ಷಪ್ಪ.

ಹೈದರಾಬಾದ್ ಕರ್ನಾಟಕ ಭಾಗದ ಕುರುಬ ಸಮುದಾಯದ ಪ್ರಮುಖ ನಾಯಕ ಕೆ.ವಿರೂಪಾಕ್ಷಪ್ಪ ಒಳ್ಳೆ ರಾಯಣ್ಣ ಬ್ರಿಗೇಡ್ ಕಟ್ಟಿದ್ದೇ ಈಶ್ವರಪ್ಪನ ಸಲಹೆಯಂತೆ. ತಾನೇ ಅಧ್ಯಕ್ಷನಾದರೆ ಮುಂದೆ ಎಲ್ಲಿ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತೋ ಅಂತ ವಿರೂಪಾಕ್ಷಪ್ಪನನ್ನು ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಕುರ್ಚಿಯಲ್ಲಿ ಕೂರಿಸಿದ್ದ. ರಾಜಕೀಯವಾಗಿ ನಿರುದ್ಯೋಗಿಯಾಗಿದ್ದ ವಿರೂಪಾಕ್ಷಪ್ಪನೂ ಈಶುವನ್ನು ಅಪಾರವಾಗಿ ನಂಬಿ ಕೂಡಲಸಂಗಮದಲ್ಲಿ ದೊಡ್ಡ ಸಮಾವೇಶ ಕೂಡಾ ಮಾಡಿದ್ದ. ಆದರೆ ಈಶ್ವರಪ್ಪನ ನಂಬಿಕೆ ದ್ರೋಹದಿಂದ ಬ್ರಿಗೇಡ್ ಸಭೆಗಳು ಬರ್ಖಾಸ್ತಾಗಿದ್ದು ಅದರ ಅಧ್ಯಕ್ಷರೂ ಖಾಲಿ ಅಬ್ಬೇಪಾರಿಯಾಗಿದ್ದಾನೆ. ಯಡ್ಡಿಯ ವಿರೋಧ ಕಟ್ಟಿಕೊಂಡು ಈಶು ಜೊತೆ ಗಟ್ಟಿಯಾಗಿ ನಿಂತಿದ್ದಕ್ಕೆ ವಿರೂಪಾಕ್ಷಪ್ಪನ ಪಾಲಿಗೆ ಸಿಕ್ಕಿದ್ದು ಬರೀ ಚೊಂಬು. ಅತ್ತ ಬಿಜೆಪಿಯೂ ಇಲ್ಲ, ಇತ್ತ ರಾಯಣ್ಣ ಬ್ರಿಗೇಡೂ ಇಲ್ಲ!

ಬ್ರಿಗೇಡ್‌ನಿಂದಾಗಿ ವಿರೂಪಾಕ್ಷಪ್ಪ ಮತ್ತೆ ಲೈಮ್‌ಲೈಟಿಗೆ ಬರುತ್ತಾರೆಂದು ಅವರ ಹಿಂಬಾಲಕರು ನಿರೀಕ್ಷೆ ಹೊತ್ತಿದ್ದರು. ಆದರೆ ಅದ್ಯಾವುದೂ ನಡೆಯಲಿಲ್ಲ. ಬ್ರಿಗೇಡ್‌ನಲ್ಲಿದ್ದವರಿಗೆ ಬಿಜೆಪಿಯಲ್ಲಿ ಒಳ್ಳೆಯ ಸ್ಥಾನಮಾನ ಕೊಡಬೇಕೆಂದು ಈಶು ಬಾಯಿಮಾತಿಗೆ ಡಿಮ್ಯಾಂಡ್ ಇಟ್ಟಿರುವುದೇನೊ ನಿಜ ಆದರೆ ಅದು ಇದುವರೆಗೂ ಈಡೇರಿಲ್ಲ, ಈಡೇರುವ ಲಕ್ಷಣವೂ ಕಾಣುತ್ತಿಲ್ಲ. ಯಾಕೆಂದರೆ ಸ್ವತಃ ರಾಷ್ಟ್ರಾಧ್ಯಕ್ಷ ಅಮಿತ್ ಶಾನೇ ಯಡ್ಡಿಯನ್ನು ಮುಖ್ಯಮಂತ್ರಿ ಅಭ್ಯರ್ಥಿಯೆಂದು ಪುನರುಚ್ಚರಿಸಿರುವುದರಿಂದ ಆತ ಈಶುವಿನ ಬೇಡಿಕೆಗಳಿಗೆ ಮತ್ತೆ ಮಣೆ ಹಾಕೋದು ಕಷ್ಟ.

ಉತ್ತಮ ಸ್ಥಾನಮಾನ ಸಿಗುವ ಲಕ್ಷಣಗಳು ಕಾಣುತ್ತಿಲ್ಲ. ನಿನ್ನೆ ತಾನೇ ನಡೆದಿರುವ ಬಿಜೆಪಿ ಕಾರ್ಯಕಾರಿಣಿ ಸಭೆಗೆ ಈಶ್ವರಪ್ಪ ಗೈರುಹಾಜರಾಗಿರುವುದು ಕುತೂಹಲಕ್ಕೆ ಎಡೆಮಾಡಿಕೊಟ್ಟರೂ ಇದರಿಂದ ವಿರೂಪಾಕ್ಷಪ್ಪನಿಗೆ ಲಾಭವಾಗುತ್ತದೆ ಎಂದು ಹೇಳಲು ಆಗುವುದಿಲ್ಲ.

ಯೂಸ್ ಆ್ಯಂಡ್ ಥ್ರೋ



ಈಶ್ವರಪ್ಪ, ವಿರೂಪಾಕ್ಷಪ್ಪನನ್ನು ಯೂಸ್ ಆ್ಯಂಡ್ ಥ್ರೋ ರೀತಿಯಲ್ಲಿ ಬಳಸಿಕೊಳ್ಳುತ್ತಿರುವುದು ಕೆಲ ನಾಯಕರಲ್ಲಿ ಅಸಮಾಧಾನ ತರಿಸಿದೆ. ವಿರೂಪಾಕ್ಷಪ್ಪ ಕೂಡಾ ಸಾಮಾನ್ಯ ಆಸಾಮಿಯೇನಲ್ಲ. ಈ ಹಿಂದೆ ಆತ ಕಾಂಗ್ರೆಸ್‌ನಲ್ಲಿದ್ದಾಗ ಕೆಪಿಸಿಸಿ ಉಪಾಧ್ಯಕ್ಷರಾಗಿದ್ದಂತವ. ಒಂದು ಕಾಲದಲ್ಲಿ ಸಿಎಂ ಸಿದ್ದರಾಮಯ್ಯನವರ ಪರಮಾಪ್ತ ಕೂಡ. ಬೇರೆ ಪಕ್ಷದಲ್ಲಿದ್ದಾಗಲೂ ಜಾತಿ ಲೆಕ್ಕದಲ್ಲಿ ಸಿದ್ದರಾಮಯ್ಯನನ್ನು ಸಿಂಧನೂರಿಗೆ ಆಹ್ವಾನಿಸಿ ಸಮಾರಂಭ ಏರ್ಪಡಿಸಿದ್ದಿದೆ. ಮಾಜಿ ಎಮ್ಮೆಲ್ಲೆ ಸಿಪಿಐನ ಅಮರೇಗೌಡ ಗದ್ರಟಗಿ ಬಳಿ ಪಳಗಿದ ವಿರೂಪಾಕ್ಷಪ್ಪ ಕಾಂಗ್ರೆಸ್‌ನಿಂದ ಒಂದು ಬಾರಿ ಸಿಂಧನೂರು ಎಮ್ಮೆಲ್ಲೆ ಒಂದು ಬಾರಿ ಕೊಪ್ಪಳ ಸಂಸದರೂ ಆಗಿದ್ದರು.



ಪುನಃ ಕಾಂಗ್ರೆಸ್‌ನಿಂದ ಕೊಪ್ಪಳ ಲೋಕಸಭೆಗೆ ಸ್ಪರ್ಧಿಸಬೇಕೆನ್ನುವ ಮಹದಾಸೆ ಹೊತ್ತಿದ್ದ ವಿರೂಪಾಕ್ಷಪ್ಪನಿಗೆ ಕೆಲ ಕೈ ರಾಜಕಾರಣಿಗಳು ಹೈಕಮಾಂಡ್ ಕಿವಿಯೂದಿ ಟಿಕೆಟ್ ತಪ್ಪಿಸಿದ್ದರು. ಇದರಿಂದ ಸಿಟ್ಟಿಗೆದ್ದ ವಿರೂಪಾಕ್ಷಪ್ಪ ತಾಳ್ಮೆಗೆಟ್ಟವನಂತೆ ಕಾಂಗ್ರೆಸ್‌ನಿಂದ ಹೊರಬಂದು ಬಿಜೆಪಿ ಅಂಗಳ ಹೊಕ್ಕಿದ್ದ. ಆದರೆ ಇದೀಗ ಈಶ್ವರಪ್ಪ ಕೂಡ ವಿರೂಪಾಕ್ಷಪ್ಪನಿಗೆ ಸರಿಯಾದ ಏಟನ್ನೇ ಕೊಟ್ಟಿದ್ದಾನೆ.

ಜೆಡಿಎಸ್‌ನತ್ತ ವಿರೂಪಾಕ್ಷಪ್ಪ?

ಮೊನ್ನೆ ಸಿಂಧನೂರಿನಲ್ಲಿ ನಡೆದ ಜೆಡಿಎಸ್ ಸಭೆ ಅಂತಹದ್ದೊಂದು ಅನುಮಾನ ಹುಟ್ಟುಹಾಕಿದೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಜೊತೆಗೆ ಇತ್ತೀಚೆಗೆ ಜೆಡಿಎಸ್ ಸೇರ್ಪಡೆಗೊಂಡ ಮಾಜಿ ಸಚಿವ ಎಚ್.ವಿಶ್ವನಾಥ ಕೂಡಾ ಆಗಮಿಸಿದ್ದರು. ಸಮಾರಂಭ ಮುಗಿದಬಳಿಕ ವಿಶ್ವನಾಥರು ವಿರೂಪಾಕ್ಷಪ್ಪನ ಜೊತೆ ಕೆಲಹೊತ್ತು ಪ್ರತ್ಯೇಕವಾಗಿ ಮಾತನಾಡಿರೋದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಬಿಜೆಪಿಯಲ್ಲಿ ಮೂಲೆಗುಂಪಾಗಿರುವ ವಿರೂಪಾಕ್ಷಪ್ಪ ಜೆಡಿಎಸ್‌ನತ್ತ ವಾಲಲಿದ್ದಾರೆ ಎನ್ನುವ ವದಂತಿಗಳು ದಟ್ಟವಾಗುತ್ತಿವೆ. ವಿರೂಪಾಕ್ಷಪ್ಪನ ಸಹೋದರನ ಮಗ ಕೆ.ಕರಿಯಪ್ಪ ಕಾಂಗ್ರೆಸ್ ರಾಜ್ಯ ಹಿಂದುಳಿದ ವರ್ಗದ ಹಾಲಿ ಕಾರ್ಯದರ್ಶಿ. ಅಲ್ಲದೇ ಸಿದ್ದರಾಮಯ್ಯ ಈಗಲೂ ವಿರೂಪಾಕ್ಷಪ್ಪನ ಆಪ್ತರು. ಹಾಗಾಗಿ ಅವರು ಜೆಡಿಎಸ್ ಪಕ್ಷವನ್ನು ಅಷ್ಟು ಸುಲಭಕ್ಕೆ ಸೇರ್ತಾರಾ ಅನ್ನೋದು ಪ್ರಶ್ನೆ. ಆದರೆ ಸಿದ್ದು ಆತ್ಮೀಯತೆಗೆ ಕಟ್ಟುಬಿದ್ದು ಕಾಂಗ್ರೆಸ್‌ಗೆ ವಾಪಾಸ್ ಹೋದರೆ ಈ ಮೊದಲು ಅಡ್ಡಗಾಲು ಹಾಕಿದ್ದ ಕಾಂಗ್ರೆಸ್‌ನ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಮತ್ತು ವಿಧಾನಪರಿಷತ್ ಸದಸ್ಯರಾದ ಎನ್.ಎಸ್. ಬೋಸರಾಜು ಮೊದಲಾದವರ ಕಾಟ ತಪ್ಪಿದ್ದಲ್ಲ. ಇನ್ನು ರಾಯಚೂರು ಜಿಲ್ಲಾ ಪಂಚಾಯತಿ ಉಪಾಧ್ಯಕ್ಷನಾಗಿದ್ದ ವಿರೂಪಾಕ್ಷಪ್ಪನ ಅಳಿಯ ಎಂ. ದೊಡ್ಡ ಬಸವರಾಜು ಬಿಜೆಪಿಗೆ ಅಂಟಿಕೊಂಡಿರುವುದು ವಿರೂಪಾಕ್ಷಪ್ಪನ ಆಯ್ಕೆಯನ್ನು ಕಗ್ಗಂಟಾಗಿಸಿದೆ.

ಕಾಂಗ್ರೆಸ್‌ಗೆ ಹೋಗಲು ಮನಸ್ಸಿಲ್ಲ, ಬಿಜೆಪಿಯಲ್ಲಿ ಸ್ಥಾನವಿಲ್ಲ, ಇಂಥಾ ಸಂದರ್ಭದಲ್ಲಿ ಕುಲಸ್ಥ ವಿಶ್ವನಾಥ್‌ರನ್ನು ಅನುಸರಿಸಿ ಜೆಡಿಎಸ್ ಸೇರಿಕೊಳ್ಳುವ ಆಯ್ಕೆಯನ್ನು ಮುಂದಿರಿಸಿಕೊಂಡಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಒಟ್ಟಿನಲ್ಲಿ ಯಡವಟ್ಟು ಈಶ್ವರಪ್ಪನ ಹುಂಬಾಟಕ್ಕೆ ಬಿದ್ದು ವಿರೂಪಾಕ್ಷಪ್ಪ ಅತ್ತ ದರಿ ಇತ್ತ ಪುಲಿ ಎಂಬಂಥ ಪರಿಸ್ಥಿತಿಗೆ ಸಿಲುಕಿದ್ದಾರೆ.

■ ಮುತ್ತುರಾಜು

ದಿವಂಗತ ಪತ್ರಕರ್ತ, ಲೇಖಕ ಬಿ.ಎಂ.ರಶೀದ್ ಅವರು 'ಉಪೇಂದ್ರ' ಸಿನಿಮಾ ನೋಡಿದ ನಂತರ ಬರೆದ ಲೇಖನವಿದು. ಉಪೇಂದ್ರ ಈಗ ರಾಜಕೀಯ ಪ್ರವೇಶಿಸುತ್ತೇನೆ ಎಂದಿರುವ ಹಿನ್ನೆಲೆಯಲ್ಲಿ ಇದನ್ನು ಇಲ್ಲಿ ಮರುಮುದ್ರಿಸುತ್ತಿದ್ದೇವೆ.

ಉಪೇಂದ್ರರಿಗೊಂದು ಪತ್ರ!


ಪ್ರಿಯ ಉಪೇಂದ್ರರಿಗೆ,

ನಿಮ್ಮದೇ ಹೆಸರಿನ ನಿಮ್ಮ ಸಿನಿಮಾ ಮಂಗಳೂರಿಗೆ ಬಂದಿದೆ. ಮಂಗಳೂರಿನ ಗೋಡೆಗಳ ತುಂಬಾ ನಿಮ್ಮದೇ ಚಿತ್ರಗಳು. ದೀಪಾ ಮೆಹ್ತಾರ '1947-ಅರ್ತ್', ಸ್ಪೀಲ್‌ಬರ್ಗ್‌ನ 'ಸೇವಿಂಗ್ ಪ್ರೈವೇಟ್ ರಯನ್'ನಂತಹ ಚಿತ್ರಗಳು ಬಂದುಹೋದ ಕುರುಹನ್ನೂ ಉಳಿಸದ ಮಂಗಳೂರಿನ ಥಿಯೇಟರ್ ಅಂಗಳದಲ್ಲಿ ನಿಮ್ಮ ಚಿತ್ರಕ್ಕೆ ಜನ ಜಾತ್ರೆ! ನಿಮಗೆ ಅಭಿನಂದನೆಗಳು. ಅಭಿನಂದನೆ ಯಾಕೆಂದರೆ ಉಪೇಂದ್ರ ಬಾಬು, ಆ ಥಿಯೇಟರ್ ಅಂಗಳದಲ್ಲಿ ಸಿಡಿಲುಬಡಿದ ಕೊರಡುಗಳಂತೆ ನಿಂತು ನಿಮ್ಮ ಚಿತ್ರದ ಟಿಕೆಟ್‌ಗಾಗಿ ಕಾದಿರುವ ಆ ಜನಗಳಲ್ಲಿ ಏನನ್ನು ನೋಡಲು ಬಂದಿರೆಂದು ಒಮ್ಮೆ ಕೇಳಿ ನೋಡಿ. ಅವರಲ್ಲಿ ಉತ್ತರಗಳಿಲ್ಲ! ಆಮೇಲೆ ಏನನ್ನು ನೋಡಿದಿರೆಂದು ಕೇಳಿ ನೋಡಿ. ಇಲ್ಲ, ಅದಕ್ಕೂ ಉತ್ತರಗಳಿಲ್ಲ!! ನಾನು ನಿಮ್ಮನ್ನು ಅಭಿನಂದಿಸದೇ ಇರುವುದಕ್ಕಾಗುತ್ತದೆಯೇ ಉಪೇಂದ್ರಜೀ? ತಮ್ಮ ತಮ್ಮ ಆತ್ಮ ಮರುಕವನ್ನೂ, ಸ್ವಯಂ ಪ್ರೇಮವನ್ನೂ ಕಲೆಯ ಹೆಸರಿನಲ್ಲಿ ಮಾರಿದವರನ್ನು ನಾನಿಲ್ಲಿ ತನಕ ಕಂಡಿದ್ದೆ. ತನ್ನ ವಿಕೃತಿಯನ್ನು ಹೀಗೆ ಕಾಸು ಪಡೆದು ಜನರಿಗೆ ಉಣಿಸುವ ಈ ದಂಧೆ ನಿಮಗೆ ಲಾಭವನ್ನು ತರಬಹುದು. ಸ್ವಲ್ಪ ಕಾಲ, ಮುಂದುವರಿಸಿ. ತನ್ನ ಕೃತ್ಯಗಳಿಗಾಗಿ ಸ್ವಯಂ ಗರ್ವಪಟ್ಟುಕೊಳ್ಳುವವನನ್ನು ಯಾವ ಬಗೆಯಲ್ಲೂ ಶಿಕ್ಷಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ನಂಬಿಕೆ.

ಆದರೆ ಒಂದು ವಿಕೃತಿಯನ್ನು ಕಾಣಲು ಕಾಸು ಕೊಟ್ಟು ಸಾಲುಗಟ್ಟಿ ನಿಂತವರನ್ನು ಕಂಡು ನನ್ನಂಥವರಲ್ಲಾಗುತ್ತಿರುವ ಯಾತನೆ ನಿಮಗೆ ಅರ್ಥವಾಗಲಾರದು ಉಪೇಂದ್ರಜೀ. ನಾಡಿನ ಕಲೆ, ಸಿನಿಮಾ, ಜನ, ಜನರ ಅಭಿರುಚಿ ಹಾಳಾದರೆ ನಿಮಗೇನಂತೆ? ಇದು ಉಪೇಂದ್ರನಿಂದ ಅಲ್ಲದೆ ಇನ್ನಾರಿಂದ ಎಂಬ ಧಿಮಾಕಷ್ಟೆ ನಿಮಗೆ ಮುಖ್ಯ. ಇಂತಹ ಅಗ್ಗದ ಸಾಧನೆಗಳಿಗೆ ನಿಮ್ಮೊಳಗಿನ ವಿಕೃತಿಯ ವಿನಃ ಇನ್ಯಾವುದರ ನೆರವು ದೊರೆಯಬಲ್ಲುದು ಹೇಳಿ?

ನಿಮ್ಮ ಸಿನಿಮಾವನ್ನು ನಾನು ಕೂಡ ನೋಡಿದೆ. ರೋಗಕ್ಕೆ ಚಿಕಿತ್ಸೆ ನೀಡಬೇಕಾದ ವೈದ್ಯ ರೋಗವನ್ನೊಮ್ಮೆ ಕಣ್ಣಿಂದಲಾದರೂ ನೋಡುವುದು ಒಳ್ಳೆಯದಲ್ಲವೇ? ಥಿಯೇಟರ್‌ನಲ್ಲಿ ನಾನು ಸಿಡಿಮಿಡಿಗೊಂಡು ಎದ್ದಾಗಲೆಲ್ಲಾ ಪಕ್ಕದಲ್ಲಿ ಕೂತಿದ್ದ ಗೆಳೆಯ, ನನ್ನನ್ನು ಮತ್ತೆ ಆಸನಕ್ಕೆ ಒತ್ತಿ ಉಪಕರಿಸುತ್ತಿದ್ದ. ಚಿತ್ರ ಮುಗಿದು ಹೊರಬಂದಾಗ ಬೃಹತ್ ಗಾತ್ರದ ಕೆಲಿಡೋಸ್ಕೋಪ್‌ನಿಂದ ಹೊರಬಿದ್ದ ಅನುಭವವಾಯಿತು! ಥಿಯೇಟರ್ ಬಾಗಿಲಿನಲ್ಲಿ ನಿಂತು ಇಷ್ಟು ಹೊತ್ತು ಕಣ್ಣ ಮುಂದೆ ನಡೆದದ್ದೇನು ಎಂದು ನೆನಪಿಸಿಕೊಳ್ಳಲು ಹೋದರೆ ಹುಚ್ಚೇ ಹಿಡಿವ ಸ್ಥಿತಿ. ನೂರು ಥರದ ಬಣ್ಣಗಳು, ಚೀರಾಟಗಳು, ನಾಲ್ಕು ತುಣುಕು ಒಣಕಲು ಫಿಲಾಸಫಿ, ಪ್ರೇಮ -ಕಾಮದ ಬೊಗಳೆಗಳು ಎಲ್ಲವನ್ನೂ ಒಂದು ಮಿಕ್ಸರ್ ಗ್ರೈಂಡರ್‌ನಲ್ಲಿ ತಿರುವಿ ಕಣ್ಣ ಮುಂದೆ ಇಟ್ಟಂತಿತ್ತು! ಇರಲಿ ಎಲ್ಲವನ್ನು ಸಹಿಸಿದ್ದಾಯಿತು. ಆದರೆ ಉಪೇಂದ್ರರೇ, ನಟಿ ಪ್ರೇಮಾ ಜೊತೆ ನೀವು ಕುಚು ಕುಚು ಕುಚು ಎಂಬ ಸದ್ದು ಹೊರಡಿಸುತ್ತಿದ್ದಿರಲ್ಲಾ, ಅದು ಯಾವ ಮೃಗದ ಭಾಷೆ? ಅದೇನಿದ್ದರೂ ಕಾಡುಮೃಗದಂತೆ ಕಾಣುವ ನಿಮಗೆ ಆ ಭಾಷೆ ಚೆನ್ನಾಗಿಯೇ ಒಪ್ಪುತ್ತದೆ ಬಿಡಿ. ಚಿತ್ರದಲ್ಲಿ ನೀವು ವ್ಯಾಖ್ಯಾನಿಸುವ ಪ್ರಕಾರ ಈ ಕೋಡಂಗಿತನಗಳನ್ನೆಲ್ಲಾ ಮಾಡುವ ಧೈರ್ಯ ಉಪೇಂದ್ರನಿಗೆ ಮಾತ್ರ ಇದೆ. ಉಳಿದವರಿಗೆ ಆಸೆ ಇದೆ, ಆದರೆ ಧೈರ್ಯವಿಲ್ಲ! ನೀವು ಹೇಗೂ ಧೈರ್ಯವಂತರಲ್ಲವೇ ಉಪೇಂದ್ರ, ಈ ಚಿತ್ರವನ್ನು ಒಮ್ಮೆ ನಿಮ್ಮ ಖಾಸಾ ತಾಯಿ, ತಂಗಿ, ಪ್ರೇಯಸಿಯರ ಜೊತೆ ಕೂತು ನೋಡಿ ಬಿಡಿ. ನಿಮಗೊಂದು ಆತ್ಮಸಾಕ್ಷಿ ಇದ್ದೂ ಕೂಡ ಆಗ ಅದು ವಿಲಿವಿಲಿ ಒದ್ದಾಡಲಿಲ್ಲ ಎಂದಾದರೆ, ಇಗೋ ಈ ಚರ್ಚೆಯನ್ನು ಇಲ್ಲಿಗೇ ಕೈಬಿಟ್ಟೆ.

ಚಿತ್ರದಲ್ಲಿ ನಿಮ್ಮ ಹೆಸರು ನಾನು! ಚಿತ್ರದುದ್ದಕ್ಕೂ ನಾನು ನಾನು ಎಂದು ಒರಲುತ್ತಿದ್ದ ಉಪೇಂದ್ರ ನೀನು ನಿಜಕ್ಕೂ ಭೂಪನು! ತನ್ನ ಹಾವಭಾವಗಳ ಬಗ್ಗೆ ಇನ್ನೊಬ್ಬನಿಗೆ ಏನನ್ನಿಸುತ್ತದೆ ಎನ್ನುವುದನ್ನೂ ಲೆಕ್ಕಿಸದೆ ಕುಣಿಯುವವನು ಬಫೂನು ಅಲ್ಲದೆ ಇನ್ನೇನು? ನಿನ್ನ ಚಿತ್ರದಲ್ಲಿ ರತಿ, ಕೀರ್ತಿ, ಸ್ವಾತಿ ಎಂಬ ಮೂರು ಸ್ತ್ರೀಪಾತ್ರಗಳು ಬೇರೆ! ಚಿತ್ರ ಮುಗಿಯುವ ಹೊತ್ತಿಗೆ ಆ ಮೂರು ಪಾತ್ರಗಳು ಮನುಷ್ಯರೇ ಅಲ್ಲವಂತೆ! ಮನುಷ್ಯನ ಬದುಕಿನಲ್ಲಿ ಬರುವ ಮೂರು ಋತುಕಾಲಗಳು ಅವು?! ತಾವ್ಯಾರು ಸಿನಿಮಾ ರಂಗದ ಜಿಡ್ಡು ಕೃಷ್ಣ ಮೂರ್ತಿ ಎಂದು ತಿಳಿದುಕೊಂಡಿರಾ ಉಪೇಂದ್ರ ಸಾಬ್? ಫಿಲಾಸಫಿ ಸಿನಿಮಾದ ಭಾಷೆಗೆ ಒಗ್ಗುವಂತಹದಲ್ಲ ಮಾರಾಯ್ರೇ. ಅಂತಹದರಲ್ಲಿ ನಿಮಗೆ ಫಿಲಾಸಫಿಯೂ ಗೊತ್ತಿಲ್ಲ, ಸಿನಿಮಾ ತೆಗೆಯಲು ಕೂಡಾ ಗೊತ್ತಿಲ್ಲ. ಗೊತ್ತಿರುವುದು ಬರೇ ಕುಚೇಷ್ಟೆಗಳು ಮಾತ್ರ. ನಿಮ್ಮ ಕುಚೇಷ್ಟೆಗಳಿಗಾಗಿ ಒಂದು ಸಮೂಹದ ಅಭಿರುಚಿಯೇ ಭ್ರಷ್ಟಗೊಳ್ಳಬೇಕೇ? ಹೇಳಿ ಮಿ.ಉಪೇಂದ್ರ.



ವರ್ಷದ ಹಿಂದೆ ನಿಮ್ಮ 'ಎ' ಎಂಬ ಚಿತ್ರ ಬಂದಿತ್ತು. ಅದಕ್ಕೆ ಬುದ್ಧಿವಂತರಿಗೆ ಮಾತ್ರ ಎಂಬ ಲೇಬಲ್ಲು ಬೇರೆ! ಅಂದಮೇಲೆ ಹುಟ್ಟಿನಿಂದಲೇ ಬುದ್ಧಿವಂತಿಕೆಯನ್ನು ಗುತ್ತಿಗೆಪಡೆದ ನಾವದನ್ನು ನೋಡದಿರಲು ಹೇಗೆ ಸಾಧ್ಯ? ಚಿತ್ರವನ್ನು ನೋಡಿದಾಗಲಷ್ಟೇ ನಾವೆಷ್ಟು ದಡ್ಡರು ಎಂದು ಸಾಬೀತಾಯಿತು. ಮುಂದೆ ನಮ್ಮಂತಹ ದಡ್ಡರಿಗೋಸ್ಕರವಾದರೂ ಒಂದು ಸಿನಿಮಾ ತೆಗೆಯಿರಿ ಸ್ವಾಮಿ ಎಂದು ವಿನಂತಿಸಿಕೊಂಡಿದ್ದೆವು. ನಮ್ಮ ಆ ವಿನಂತಿಗೆ ಕಿವಿಗೊಟ್ಟು ನೀವು ಈ ಬಾರಿ ತೆಗೆದ ಚಿತ್ರವೇ ಇದು ಉಪೇಂದ್ರ? ಜಾಹೀರಾತುಗಳಲ್ಲಿ ನಿಮ್ಮ 'ಉಪೇಂದ್ರ'ಕ್ಕೆ 2ಡಿ ಚಿತ್ರ ಎಂಬ ಘೋಷಣೆಯೂ ಬೇರೆ ಇದೆಯಲ್ಲ! ನಾವು ನುಗ್ಗಿದ್ದು ಚಿತ್ರಮಂದಿರಕ್ಕೆ, ಹೊರಬಿದ್ದದ್ದು ಹುಚ್ಚಾಸ್ಪತ್ರೆಯಿಂದ!! 2ಡಿ ಎಂದರೆ ಅರ್ಥ ಅದೇನಾ?

ಕಲೆಯ ಸ್ಪಂದನಗಳನ್ನೂ ಸಂವೇದಿಸಲಾರದ ನಿಮ್ಮಂತಹ ಸೋಗಲಾಡಿಗಳಿಗೆ ಘೋಷಣೆಗಳು ಒಂದು ಬೇರೆ ಕೇಡು. ಘೋಷಣೆಗಳ ಮರೆಯಲ್ಲಿ ನಿಮ್ಮ ನಾಚಿಕೆಗೆಟ್ಟ ಮುಖಗಳನ್ನು ಅವಿತಿರಿಸಬಹುದು ಎನ್ನುವುದಲ್ಲವೇ ನಿಮ್ಮ ಉಪಾಯ? ಬಂಡವಾಳವಿಲ್ಲದವನಿಗೆ ಕೊನೆಗೆ ಘೋಷಣೆಗಳೆ ಗತಿ, ತಿಳಿಯಿರಿ.

ಸಿನಿಮಾ ಭ್ರಮೆಯ ಮಾಧ್ಯಮ ನಿಜ. ಆದರೆ ಅದು ಪ್ರತಿ ಸೃಷ್ಟಿಯ ಮಟ್ಟವನ್ನು ಮುಟ್ಟಿದರೆ ಮಾತ್ರ ಕಲೆ ಎಂದೆನಿಸಿಕೊಳ್ಳುತ್ತದೆ. ವಾಸ್ತವದ ನಖಗಳು ಪ್ರೇಕ್ಷಕನ ಮನಸ್ಸನ್ನು ಪರಚದೇ ಹೋದರೆ ಸಿನಿಮಾ ಕಲೆಯ ಅಸ್ತಿತ್ವವೇ ಅರ್ಥಶೂನ್ಯ! ನಮ್ಮ ಪಕ್ಕದಲ್ಲೇ ಒಂದು ಪುಟ್ಟ ರಾಜ್ಯವಿದೆ. ಹೆಸರು ಕೇರಳ. ಅಲ್ಲೂ ಕೂಡ ಸಿನಿಮಾಗಳನ್ನೂ ತೆಗೆಯುತ್ತಾರೆ. ಅಲ್ಲಿನ ಭರತನ್ ಎಂಬ ನಿರ್ದೇಶಕನ 'ವೈಶಾಲಿ' ಎಂಬ ಚಿತ್ರವನ್ನು ನೋಡಿದ ನಾನು ಇಡೀ ಒಂದು ರಾತ್ರಿ ನಿದ್ರಿಸಲಿಲ್ಲ. ಪುರೋಹಿತಶಾಹಿಯ ಕುತಂತ್ರಗಳಿಗೆ ಬಲಿಯಾದ ಒಬ್ಬ ದಲಿತ ಹೆಣ್ಣು ಮಗಳ ಕತೆಯದು. ಆ ಚಿತ್ರದಲ್ಲೂ ಫ್ಯಾಂಟಸಿಗಳಿದ್ದವು. ಋಷ್ಯಶೃಂಗ ಮುನಿಯ ಹೋಮಕ್ಕೆ ಆಕಾಶದಿಂದ ಮಳೆಯೇ ಸುರಿದುಬಿಡುತ್ತದೆ. ಆತನ ಮಂತ್ರದ ಶಕ್ತಿಗೆ ಬೃಹತ್ ಬಂಡೆಗಳೆ ಉರುಳುರುಳಿ ಬೀಳುತ್ತವೆ. ಆದರೆ ಆ ಚಿತ್ರ ಅಂತಿಮವಾಗಿ ಸೂಚಿಸಿದ ಸೂಚನೆ ಮಾತ್ರ ಕಲೆಯ ಕರ್ತವ್ಯದ ಭಾಗವಾಗಿತ್ತು.

ಭ್ರಮೆ ಮತ್ತು ವಾಸ್ತವದ ನಡುವಿನ ಗೆರೆಯನ್ನು ಕಳೆದುಕೊಂಡ ನಿಮಗೆ ಇದನ್ನೆಲ್ಲಾ ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ನಮಗೆ ಗೊತ್ತು. ಆದರೆ ಸಿನಿಮಾದ ಹೆಸರಿನಲ್ಲಿ ನೀವು ಎಸಗುವ ವಿಕೃತಿಗಳು ಏನನ್ನೆಲ್ಲಾ ಕಳೆದುಹಾಕುತ್ತವೆ ನೋಡಿ. ನಿಮ್ಮ ಚಿತ್ರಗಳು ಜನರ ಅಭಿರುಚಿಯನ್ನು, ಕಲೆಯ ಆತ್ಮಗೌರವವನ್ನೂ ಕಳೆದು ಹಾಕಲಿದೆ. ಜನರನ್ನು ಕೋಡಂಗಿಗಳಂತೆ ವರ್ತಿಸಲು ಪ್ರೇರೇಪಿಸುವುದೇ ಒಂದು ಸಾಧನೆ ಎಂದು ನೀವು ತಿಳಿದುಕೊಂಡಂತಿದೆ. ನಾಗರಿಕ ಸಮಾಜದ ಕಳಂಕಗಳಂತಿರುವ ನಿಮ್ಮ ಆ ವಿಕೃತ ವೇಷಗಳನ್ನು ಚಿತ್ರದಲ್ಲಿ ಕಾಣಿಸುತ್ತಾ ಧೈರ್ಯವಿದ್ದರೆ ನೀನೂ ಮಾಡು ಎಂದು ಪ್ರೇಕ್ಷಕನಿಗೆ ಸವಾಲೆಸೆಯುವ ನೀವು ನಾಡಿನ ಅಭಿರುಚಿಯನ್ನು ಎತ್ತ ಕಡೆಗೆ ಒಯ್ಯಲಿದ್ದೀರಿ?

ಒಬ್ಬ ಮತಿವಿಕಲನ ಮನೋಭಿತ್ತಿಯಂತಿರುವ ನಿಮ್ಮ ಚಿತ್ರಗಳಿಗೆ ಜನ ಮುಗಿಬಿದ್ದು ಆನಂದಿಸುವುದನ್ನು ಕಂಡು ಇದನ್ನೆಲ್ಲಾ ನಿಮಗೆ ಬರೆಯದಿರಲು ಸಾಧ್ಯವೇ ಆಗಲಿಲ್ಲ. ಉಪೇಂದ್ರಜೀ ನಿಮಗೆ ಶಕ್ತಿಯಿದ್ದರೆ ಜನರಲ್ಲಿ ಒಳ್ಳೆಯ ಅಭಿರುಚಿಯನ್ನು ರೂಪಿಸಿ. ಒಳ್ಳೆಯ ಅಭಿರುಚಿಯಿಂದ ಮಾತ್ರ ಒಳ್ಳೆಯ ವ್ಯಕ್ತಿಗಳು ರೂಪುಗೊಳ್ಳುವುದು; ಒಳ್ಳೆಯ ವ್ಯಕ್ತಿಗಳಿಂದ ಒಳ್ಳೆಯ ಸಮಾಜ.


ನೀವೂ ಕೂಡಾ ದಕ್ಷಿಣ ಕನ್ನಡ ಜಿಲ್ಲೆಯವರೇ ಅದ ಕಾರಣ ನನಗೆ ನೀವು ಅನ್ಯರಲ್ಲ, ಅದಕ್ಕಾಗಿಯೇ ಈ ಪತ್ರ. ನಿಮಗಿದೆಲ್ಲಾ ಇನ್ನಾದರೂ ಅರ್ಥವಾಗುತ್ತದೆಯೆಂದು ನಂಬಲೇ ಉಪೇಂದ್ರ? ■

ಕೋಮುಗಲಭೆಗೆ ಸ್ಕೆಚ್?

ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ಅಂದರೆ ಆಗಸ್ಟ್ 14ರ ಬೆಳಗ್ಗೆ ರೇಸ್‌ಕೋರ್ಸ್ ರಸ್ತೆಯ ವೆಸ್ಟೆಂಡ್ ಹೊಟೇಲ್‌ನ ಮಿನಿಹಾಲ್‌ನಲ್ಲಿ ಬೆಂಗಳೂರಿನ ಬಹುತೇಕ ಪತ್ರಿಕೆಗಳ ಸುದ್ದಿ ಸಂಪಾದಕರುಗಳು, ನ್ಯೂಸ್ ಚಾನಲ್ಲುಗಳ ಮುಖ್ಯಸ್ಥರೇ ತುಂಬಿದ್ದರು. ಅದು ಅಮಿತ್ ಶಾ ಕರೆದಿದ್ದ 'ಎಡಿಟರ್ಸ್ ಮೀಟ್' ಅಂದರೆ ಪತ್ರಿಕಾ ಸಂಪಾದಕರುಗಳ ಸಭೆ. ಯಾರೋ ಹಾಕಿದ ಪ್ರಶ್ನೆ, 2018ರಲ್ಲಿ ಬಿಜೆಪಿಗೇ ಬಹುಮತ ಗ್ಯಾರಂಟಿ ಅಂತೀರಲ್ಲ, ಇಲ್ಲಿ ನೋಡಿದರೆ ಬಿಜೆಪಿ ವಿರುದ್ಧ ಇಡೀ ಲಿಂಗಾಯತ ಸಮೂಹವೇ ತಿರುಗಿಬಿದ್ದಿದೆ. ಡೀಕೆ ಮೇಲೆ ಐಟಿ ರೇಡಾಗಿದ್ದಕ್ಕೆ ಇಡೀ ಒಕ್ಕಲಿಗ ಜನಾಂಗಕ್ಕೆ ಸಿಟ್ಟಿದೆ. ಇನ್ನು ಹಿಂದಿ ಹೇರಿಕೆ, ಪ್ರತ್ಯೇಕ ಕನ್ನಡ ಧ್ವಜದ ವಿಷಯದಲ್ಲಿ ಕನ್ನಡಪರ ಹೋರಾಟಗಾರರು ಮತ್ತು ಕರ್ನಾಟಕದ ಹಿತಾಸಕ್ತಿ ಪರವಿರುವವರೆಲ್ಲ ಬಿಜೆಪಿ ಧೋರಣೆಯನ್ನು ಖಂಡಿಸುತ್ತಿದ್ದಾರೆ. ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಆರೋಪಿಸುವುದಕ್ಕೂ ಬಿಜೆಪಿಯವರ ಬಳಿ ಒಂದೇ ಒಂದು ಭ್ರಷ್ಟಾಚಾರದ ಪ್ರಕರಣವಿಲ್ಲ. ಯಾವ ವಿಷಯ ತೆಗೆದುಕೊಂಡರೂ ಪ್ರತಿಯೊಂದು ಬಿಜೆಪಿಗೆ ವಿರುದ್ಧವಾಗೇ ನಡೆಯುತ್ತಿರುವಾಗ ಅದ್ಯಾವ ಭರವಸೆ ಮೇಲೆ ಯಡಿಯೂರಪ್ಪ ಮುಂದಿನ ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಅಂತೀರಿ...?

ಬೇರೆಲ್ಲ ಪ್ರಶ್ನೆಗಳಿಗಿಂತ ಕೊಂಚ ಕಠಿಯಂತಿದ್ದ ಸುಲಭಕ್ಕೆ ಉತ್ತರ ಅಸಾಧ್ಯವೆಂಬಂತಿದ್ದ ಈ ಪ್ರಶ್ನೆ ಕೇಳಿಯೇ ಅಮಿತ್ ಶಾನ ಮುಖ ಕಪ್ಪಿಟ್ಟಿತ್ತು. ಏನೂ ತೋಚದೇ ಒಂದೆರಡು ಕ್ಷಣ ಮೌನ ತಾಳಿ ಶಾ ಎದುರಿದ್ದ ಲೋಟದ ನೀರು ಗುಟುಕರಿಸುತ್ತಾ ಏನೋ ಲೆಕ್ಕಾಚಾರದಲ್ಲಿದ್ದಂತೆ ನಿಧಾನಕ್ಕೆ ಉಸುರಿದ್ದು wait and see. ಅಂದರೆ ಕಾದು ನೋಡಿ...!

ಶಾ ಇಷ್ಟಂದಿದ್ದೇ ತಡ i mean.... ಅದು ಕೋಮುಗಲಭೆಗಳಾ ಅಥವಾ ಮತಯಂತ್ರಗಳ ಮೂಲಕವಾ...? ಎಂಬ ಪ್ರಶ್ನೆಯೊಂದು ಅದೆಲ್ಲಿಂದಲೋ ತೂರಿಬಂತು. ಕೂತಿದ್ದ ಮೀಡಿಯಾ ಮಹಾಶಯರೆಲ್ಲರೂ ಅದ್ಯಾರೆಂದು ತಿರುಗಿ ನೋಡುವ ಹೊತ್ತಿಗೆ ಪ್ರಶ್ನೆ ಎಸೆದಾಕೆ ಸದ್ದಿಲ್ಲದೇ ಕೂತಾಗಿತ್ತು. ಆ ಪ್ರಶ್ನೆ ಸ್ಪಷ್ಟವಾಗೇ ಅಮಿತ್ ಶಾ ಕಿವಿಗಪ್ಪಳಿಸಿತ್ತು. ಏನೂ ಕೇಳಿಸದಂತೆ, ಹಾಕಿದ ಪ್ರಶ್ನೆ ಗೊತ್ತೇ ಇಲ್ಲದಂತೆ ಮುಖ ಗಂಟಿಕ್ಕಿಕೊಂಡ ಶಾ ಪಕ್ಕದಲ್ಲಿದ್ದ ಯಡಿಯೂರಪ್ಪ ಕಂಡು ಅದೇನೋ ಪಿಸುಗುಟ್ಟಿದ ನೆಪಮಾಡಿಕೊಂಡು ಎದ್ದು ನಡೆದೇಬಿಟ್ಟರು. ಇಡೀ ಸಭಾಂಗಣವೇ ಆ ಕೊನೆಯ ಪ್ರಶ್ನೆಯದ್ದೇ ಗುಂಗಿನಲ್ಲಿ ಮುಳುಗಿದಂತೆ, ಇಡೀ ಪತ್ರಿಕಾಗೋಷ್ಠಿಯ ತಾರ್ಕಿಕ ಅಂತ್ಯವೇ ಅಮಿತ್ ಶಾ ಕೇಳಿಸಿಯೂ ಕೇಳದಂತೆ ನಟಿಸಿದ ಆ ಒಂದು ಪ್ರಶ್ನೆಯಲ್ಲಿ ಅಡಗಿದ್ದಂತೆ ಮುಗಿದುಹೋಗಿತ್ತು ವೆಸ್ಟೆಂಡ್ ಹೊಟೇಲ್‌ನ ಶಾ ಸಾಹೇಬರ ಎಡಿಟರ್... ಮೀಟ್!



ಮೂರು ದಿನಗಳ ಅಮಿತ್ ಶಾ ಕರ್ನಾಟಕ ಭೇಟಿಯೇನೋ ಅಂತ್ಯಗೊಂಡಿದೆ. ಸಂಘ ಪರಿವಾರದ ಪತ್ರಿಕೆಗಳಿಗಿಂತಲೂ ಅಸಹ್ಯವೆಂಬಂತೆ ಯಾವುದನ್ನೆಲ್ಲ ಜನಪರ, ಜನನಿಷ್ಠ ಪತ್ರಿಕೆಗಳೆಂದು ಕನ್ನಡಿಗರು ಭಾವಿಸಿದ್ದರೋ ಅವೇ ಶಾ ಭೇಟಿಯನ್ನು ತಮ್ಮ ಮುಖಪುಟದಲ್ಲಿ ಹಾಳು ಜಾಹಿರಾತಿಗೂ ಕಡೆಯಾಗಿ ಸುದ್ದಿ ಮಾಡಿದ್ದೇನು? ಎಲ್ಲಿ ಉಂಡ? ಎಲ್ಲಿ ತಿಂದ? ಎಲ್ಲಿ ಉಗಿದ? ಎಲ್ಲಿ ಹೇತ... ಇತ್ಯಾದಿ ಪಕ್ಷವೊಂದರ ರಾಷ್ಟ್ರೀಯ ಅಧ್ಯಕ್ಷನ ಕರ್ನಾಟಕ ಭೇಟಿಯ ಕಾರ್ಯಕ್ರಮಗಳ ವರದಿಗಿಂತಲೂ ಅದರ ಪೂರ್ವಭಾವಿ ಜಾಹಿರಾತಿನ ಕರಪತ್ರದಂತೆ ಕರ್ನಾ ಲೋಕಾಲ್ ಜನಪರ ಪತ್ರಿಕೆಯೂ ಭಟ್ಟಂಗಿತನಕ್ಕಿಳಿ ನಿಜಕ್ಕೂ ವಿಚಿತ್ರ ಮತ್ತು ದುರಂತ ಕೂಡ.

ಬಿಜೆಪಿ ಹತಾಶೆ

ವೆಸ್ಟೆಂಡ್‌ನಲ್ಲಿ ನಡೆದ ಪತ್ರಿಕೆ/ ಟೀವಿಗಳ ಮಾಲಿ ಮತ್ತು ಸಂಪಾದಕರ ಗೆಟ್‌ಟುಗೆದರ್‌ಗೂ ಅದ ಭಾಗವಹಿಸಿ ಕೃತಾರ್ಥರಾದವರಿಗೂ ಮತ್ತು ಕರ್ನಾ ಕಾಲಿಡುವುದಕ್ಕೂ ಮೊದಲೇ ಬಿಜೆಪಿಯ ಕರಪತ್ರ ರೂಪುಗೊಂಡ ಪತ್ರಿಕೆಗಳ ವರಸೆಗೂ ಏನೋ ನಿ ಸಂಬಂಧವಂತೂ ಇರಲೇಬೇಕು!

ಅದು ಅಮಿತ್ ಶಾನಂತ ಮಾರ್ವಾಡಿ ಧೂರ್ತನ ಸಾಧ್ಯವಾಗಬಹುದಾದ ವ್ಯವಹಾರ, ಅಂದರೆ ಡೀಲ್. ಆ 12ರ ಬೆಳಗ್ಗೆ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಕಾಲಿಟ್ಟಾಗಿನಿಂದ ನಡೆದ ಘಟನಾವಳಿಗಳು, ಗಾರ್ಡೇನಿಯಾ ಹೊಟೇಲಿನಲ್ಲಿ ನಡೆದ ಸಾಹಿತಿ ತಂತ್ರಜ್ಞರು, ಕಲಾವಿದರು, ವೈದ್ಯರುಗಳೊಂದಿಗಿನ ಮುಖಾಮುಖಿ, ರಾಜ್ಯಾದ್ಯಂತ ಚುನಾವಣೆಗೆಂದೇ ಆ ಕ್ಷೇತ್ರಗಳಿಗೆ ನೇಮಕಗೊಂಡ ವಿಸ್ತಾರಕರೊಡನೆ ಸಮಾಲೋ ರಾಜ್ಯ ಅಧ್ಯಕ್ಷ ಮತ್ತು ಪದಾಧಿಕಾರಿಗಳಿಂದ ಹಿಡಿ ಹೋಬಳಿ ಮಟ್ಟದ ಪದಾಧಿಕಾರಿಗಳನ್ನೂ ಕರೆದು ಸ್ಕೂಲಿನ ಮೇಷ್ಟ್ರುತರ ಪಾಠ ಮಾಡಿದ ರೀತಿ, ಸಿಕ್ಕಸಿ ಬೇಕಾಬಿಟ್ಟಿ ಪತ್ರಿಕಾಗೋಷ್ಠಿಗಳು ಇತ್ಯಾದಿಗಳೇ ಮಾಧ್ಯಮಗಳ ಕಣ್ಣಿಗೆ ಏನೋ ಘನಂಧಾರಿಯೆಂ ಇನ್ನೇನು ಶಾ ಕಡೆದು ಗುಡ್ಡೇ ಹಾಕಿಯೇ ಬಿ ವ್ಯಕ್ತವಾಗಿರಬಹುದು.

ಸಾಮಾನ್ಯವಾಗಿ ಪಕ್ಷವೊಂದರ ರಾಷ್ಟ್ರ ಅಧ್ಯಕ್ಷನಾದವನು ಹೆಚ್ಚೆಂದರೆ ರಾಜ್ಯ ಘಟಕದ ಅಧ್ಯಕ್ಷ ಕರೆದು ಮಾತಾಡುವುದುಂಟು. ಆ ಪಕ್ಷದ ಕೇ ಮಂತ್ರಿಗಳು, ಸಂಸದರೊಂದಿಗೆ ಸಮಾಲೋಚಿಸಿದರೆ ಹೆಚ್ಚು. ರಾಜ್ಯ ಘಟಕದ ಉಸ್ತುವಾರಿಗೆಂದೇ ಮುರಳಿ ರಾವ್‌ರನ್ನು ಉಸ್ತುವಾರಿಯಾಗಿ ನೇಮಿಸಿದ್ದೂ ಆಗಿದೆ. ಸಂಘಟನಾ ಪ್ರಧಾನ ಕಾರ್ಯದರ್ಶಿಯೆಂದು ಹ ಆರ್‌ಎಸ್‌ಎಸ್ ಕಟ್ಟರ್‌ಗಳಾದ ಅರುಣ್‌ಕುಮಾರ್ ಮೇಲುಸ್ತುವಾರಿಗೆಂದು ರವಿಕುಮಾರ್‌ರನ್ನೂ ನೇಮಿಸಿದ

ಆದರೆ ಒಬ್ಬ ರಾಷ್ಟ್ರೀಯ ಅಧ್ಯಕ್ಷನೇ ಬಂದು ಹೋ ಕ್ಷೇತ್ರವಾರು, ಮೋರ್ಚಾವಾರು ಮಟ್ಟದ ಪದಾಧಿಕಾರಿ ಕರೆದು ಕವಾಯತು ನಡೆಸುವಂಥ ದುರ್ಗತಿ ಅ ಶಾನದ್ದು. ಕಳೆದ ಮೂರು ದಿನಗಳ ಶಾನ ಕರ್ನಾ ತರಹೇವಾರಿ ಪ್ರಹಸನಗಳನ್ನು ನೋಡಿದ ಯಾರಿಗಾ ಬಿಜೆಪಿಯ ಹತಾಶೆ ಅರ್ಥವಾಗಲೇಬೇಕು. ರಾಷ್ಟ್ರ ಅಧ್ಯಕ್ಷನೊಬ್ಬ ಕರ್ನಾಟಕಕ್ಕೆ ಬಂದು ಯಃಕಶ್ಚಿತ್ ಘಟಕದ ಮೋರ್ಚಾವೊಂದರ ಪದಾಧಿಕಾ ಮಟ್ಟಕ್ಕಿಳಿಯುತ್ತಾನೆಂದರೆ ಅದು ಕೇವಲ ಅಮಿತ್ ಹತಾಶೆಯಷ್ಟೇ ಅಲ್ಲ, ಪ್ರಧಾನಿ ಮೋದಿಯ ಹತಾಶೆ ಕೂಡ. ಅಷ್ಟಕ್ಕೂ ಅಮಿತ್ ಶಾ ಕರ್ನಾಟಕಕ್ಕೆ ಬ ಪುಡಿ ಪುಕ್ಕಾ ಪದಾಧಿಕಾರಿಗಳನ್ನು ಸಭೆ ಅಣಿಗೊಳಿಸಬೇಕಾದ ದರ್ದೇನೂ ಬಿಜೆಪಿಗಿರ ಕಾಂಗ್ರೆಸ್‌ನ ಕರ್ನಾಟಕದ ಉಸ್ತುವಾರಿ ವೇಣುಗೋಪ ಕೂಡ ಈತನಕ ರಾಜ್ಯ ಮಟ್ಟದ ಪದಾಧಿಕಾರಿ ಬಿಟ್ಟರೆ ಸಂದಿಗೊಂದಿಗಳ ಕಾರ್ಯಕರ್ತರ ಮಟ್ಟಕ್ಕಿಳಿ ಆದರೆ ಅಮಿತ್ ಶಾ ಬೆಂಗಳೂರಿಗೆ ಬಂದಿದ್ದರ ಹ ಬೇರೆಯಿತ್ತು. ಅದು ಆದ ಹಾನಿಗೆ ಪ್ಯಾಚಪ್, ಅ ಹರಕಲು ದುಪ್ಪಟಿಗೆ ತ್ಯಾಪೇ ಹಾಕುವುದು. ಅದಕ್ಕೆ ತಕ್ಷ ಕಾರಣವಾಗಿ ಕಾಣುವುದು ಆದಿಚುಂಚನ ಮಠಾಧೀಶರಾದ ನಿರ್ಮಲಾನಂದನಾಥರನ್ನು ಒಕ್ಕಲಿಗರನ್ನು ಸಂತೈಸಿಸುವುದಾದರೆ ಅದನ್ನು ಮರೆಮಾ ಪಕ್ಷಕ್ಕೆ ಆಕ್ಸಿಜನ್ ತುಂಬಿಹೋದಂತೆ ನಟಿಸುವುದು.

ತಿರುಗಿಬಿದ್ದ ಒಕ್ಕಲಿಗರು

ಏಕೆಂದರೆ ಅಮಿತ್ ಶಾ ರಾಜ್ಯಕ್ಕೆ ಭೇಟಿ ನೀ ಯಾವುದೇ ತುರ್ತಾಗಲಿ, ಅನಿವಾರ್ಯ ಸನ್ನಿವೇಶವ ಬಿಜೆಪಿಗಿರಲಿಲ್ಲ. ಅಷ್ಟೊಂದು ಮಂದಿ ಕೇಂದ್ರ ಮಂತ್ರಿ ಸಂಸದರು, ರಾಜ್ಯ ಘಟಕದ ಅಧ್ಯಕ್ಷ ಎಲ್ಲರೂ ಅಮಿತ್ ಶಾ ಒಂದಲ್ಲ ಮೂರು ದಿನಗಳ ಬೆಂಗಳೂರಿನಲ್ಲಿ ಠಿಕಾಣಿ ಹೂಡಬೇ ದಿವಾಳಿಸ್ಥಿತಿಯಂತೂ ಬಿಜೆಪಿಯದ್ದಲ್ಲ (?) ಆದರೆ ಅ ಮೊದಲ ವಾರದಲ್ಲಿ ಮಂತ್ರಿ ಡೀಕೆ ಮೇಲೆ ರೇಡಾಯಿತ್ತಲ್ಲ; ಅದು ಈ ಹಿಂದೆ ಮೋದಿ-ಶಾ ಜ ಮಾಡಿಸಿದ್ದ ಬೇರೆಲ್ಲ ದಾಳಿಗಳಂತಾಗಿರಲಿಲ್ಲ.

ಗುಜರಾತ್‌ನ ನಲವತ್ತಕ್ಕೂ ಅಧಿಕ ಮಂದಿ ಕಾ ಶಾಸಕರನ್ನು ಬಿಡದಿಯ ಈಗಲ್ಟನ್ ರೆಸಾರ್ಟಿನಲ್ಲಿ ಬ ಬಿಜೆಪಿಯ ಕಪಿಮುಷ್ಠಿಯಿಂದ ಬಚಾವ್ ಮಾಡುವ ಮ ಗುಜರಾತ್‌ನಿಂದ ಅಹ್ಮದ್ ಪಟೇಲರನ್ನು ರಾಜ್ಯ ಗೆಲ್ಲಿಸಿದ್ದರ ರೂವಾರಿಯಾಗಿ ಹೊಮ್ಮಿದ್ದು ಡೀಕೆ. ಹಂತದಲ್ಲಿ ಗುಜರಾತ್ ಕಾಂಗ್ರೆಸ್ ಶಾಸಕರು ಬೆಂಗಳ ಬಂದು ರಾಜಕೀಯ ಆಶ್ರಯ ಪಡೆದದ್ದೇ ರಾಷ್ಟ್ರಮಟ್ಟ ಬಿಜೆಪಿಗೆ ಮುಖಭಂಗವಾಗಿ ಪರಿಣಮಿಸಿತು. ಅದಕ್ಕೆ ವ

ಸ್ವಾಮಿಯ ಬಾಯಿಂದ ಸುಳ್ಳು ಹೇಳಿಸಿದ ಬಿಜೆಪಿಗಳು

ಅಮಿತ್ ಶಾ ಮಾಡಿದ ಅಪಮಾನದ ವಿರುದ್ಧ ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದನಾಥರು ನೀಡಿದ ಸ್ಪಷ್ಟನೆಯೇ ವಿಚಿತ್ರವಾಗಿದೆ. ಅವರು ಬರುವ ಸಂದರ್ಭಕ್ಕೆ ಸರಿಯಾಗಿ ಅಮಿತ್ ಶಾ ತನ್ನ ಪಕ್ಕ ಕೂತಿದ್ದ ರಾಜಸ್ತಾನದ ಪರಮಾತ್ಮಾನಂದ ಸರಸ್ವತಿ ಜೊತೆ ಮಾತಾಡುತ್ತಿದ್ದರಂತೆ. ಹೀಗಾಗಿ ನಿರ್ಮಲಾನಂದನಾಥರು ಬಂದು ಕೂತಿದ್ದನ್ನು ಶಾ ನೋಡಲು ಸಾಧ್ಯವಾಗಲಿಲ್ಲವಂತೆ. ಆ ನಂತರ ಕಾಲಿಳಿಸಿ ಗೌರವ ಸೂಚಿಸಿದ್ದರಿಂದ ಭಕ್ತಾದಿಗಳ್ಯಾರೂ ಅದನ್ನು ಅಗೌರವವೆಂದು ಭಾವಿಸಬಾರದಂತೆ...!

ನಿರ್ಮಲಾನಂದನಾಥರು ನಿಜಕ್ಕೂ ಮಗುವಿನ ಮನಸ್ಸಿನವರೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಆದರೆ ಈ ಒಂದು ವಿಷಯದಲ್ಲಿ ಸುಳ್ಳು ಹೇಳುವಂತ ಪಜೀತಿಗೆ ಏಕೆ ಬಿದ್ದರೋ ಕಾಲಭೈರವನೇ ಬಲ್ಲ. ನಿರ್ಮಲಾನಂದನಾಥರು ಹಾಗೆ ಹೇಳಿಕೆ ಕೊಟ್ಟ ಮಾತ್ರಕ್ಕೆ ಅದನ್ನು ನಂಬುವಷ್ಟು ದಡ್ಡರಂತೂ ಒಕ್ಕಲಿಗರಲ್ಲ. ಆದಿಚುಂಚನಗಿರಿಯ ಕ್ಷೇತ್ರದ ಪರಿಚಯ ಮತ್ತು ಅಲ್ಲಿನ ಪೀಠಾಧಿಪತಿಯ ನಿವಾಸವನ್ನು ಬಲ್ಲ ಯಾರಿಗಾದರೂ ಅಮಿತ್ ಶಾ ಪರವಾಗಿ ಸ್ವಾಮೀಜಿ ನೀಡಿದ ಸ್ಪಷ್ಟನೆಯ ಬಗ್ಗೆ ನಂಬಿಕೆ ಹುಟ್ಟಲು ಸಾಧ್ಯವೇ ಇಲ್ಲ. ಆದಿಚುಂಚನಗಿರಿ ಗರ್ಭಗುಡಿಯ ಪಕ್ಕದಲ್ಲೇ ಇರುವ ಸ್ವಾಮಿ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆಂದೇ ವಿಶಿಷ್ಟ ಸಭಾಂಗಣವಿದೆ. ಅದೇ ಸಭಾಂಗಣಕ್ಕೆ ಹೊಂದಿಕೊಂಡಂತಿರುವುದು ಶ್ರೀಗಳ ಖಾಸಗಿ ಛೇಂಬರ್. ಅಮಿತ್ ಶಾ ಕಾಲಮೇಲೆ ಕಾಲುಹಾಕಿ ಕೂತಿರುವುದು ಅದೇ ಖಾಸಗಿ ಛೇಂಬರ್‌ನಲ್ಲಿ.

ಅದು ಹೆಚ್ಚೆಂದರೆ 10 ಅಡಿ ಅಗಲ ಮತ್ತು 15 ಅಡಿ ಉದ್ದದ ಖಾಸಗಿ ಕೊಠಡಿ. ಸಾಮಾನ್ಯವಾಗಿ ಜನ ವಿರಳವಾಗಿದ್ದಾಗ ಮತ್ತು ವಿಶೇಷ ಗಣ್ಯರು ಬಂದಾಗಲೆಲ್ಲ ನಿರ್ಮಲಾನಂದನಾಥರು ಅದೇ ಖಾಸಗಿ ಕೋಣೆಯಲ್ಲಿ ಕೂತು ಚರ್ಚಿಸುತ್ತಾರೆ. ಈ ಖಾಸಗಿ ಕೋಣೆಗೆ ಇರುವುದು ಒಂದೇ ಬಾಗಿಲು. ಅದು ಫೋಟೋದಲ್ಲಿ ಅಮಿತ್ ಶಾ ಕೂತಂತೆ ಆತನ ಎಡಭಾಗಕ್ಕೆ ಬರುತ್ತದೆ. ಹಾಗೊಮ್ಮೆ ನಿರ್ಮಲಾನಂದನಾಥರು ಹೊರಗಿನಿಂದ ಬಂದಿದ್ದರೂ ಅಮಿತ್ ಶಾನ ಎದುರೇ ನಡೆದುಕೊಂಡು ಹೋಗಿ ತಮ್ಮ ಪೀಠವನ್ನಲಂಕರಿಸಬೇಕು. ಅದು ಬಿಟ್ಟರೆ ಅದೇ ಕೋಣೆ ಹೊಂದಿಕೊಂಡಂತೆ ಪುಟ್ಟದೊಂದು ಆ್ಯಂಟಿ ಛೇಂಬರ್ ಇದೆ. ಅದು ಅಮಿತ್ ಶಾ ಕೂತ ದಿಕ್ಕಿಗೆ ನೇರವಾಗಿ ಎದೆಭಾಗದ ಎದುರಿಗೇ ಇದೆ. ಹಾಗೊಮ್ಮೆ ಆ್ಯಂಟಿ ಛೇಂಬರಿನಿಂದ ಶ್ರೀಗಳು ಬಂದಿದ್ದರೂ ಅದು ಅಮಿತ್ ಶಾನ ಮೂಗಿನ ನೇರಕ್ಕೇ ಐದು ಅಡಿಯಷ್ಟು ನಡೆದುಕೊಂಡು ಬರಬೇಕು.



ಶಾ ಅಗೌರವ ತೋರಿಲ್ಲ

[illegible]

ಈ ಪೈಕಿ ಹೊರಗಿನಿಂದ ಬಂದಿದ್ದರೂ ಎದುರಿನಿಂದ ದಾಟಿ ಹೋಗಬೇಕು. ಆ್ಯಂಟಿ ಛೇಂಬರಿನಿಂದ ಬಂದಿದ್ದರೆ ಮುಖದ ಎದುರಿನಿಂದಲೇ ಬರಬೇಕು. ಇವೆರಡರಲ್ಲಿ ಎಲ್ಲಿಂದ ಬಂದಿದ್ದರೂ ಅಮಿತ್ ಶಾಗೆ ಮಾತ್ರವಲ್ಲದೆ ಅಕ್ಕಪಕ್ಕ ಕೂತಿರುವವರಿಗೂ ಗೊತ್ತಾಗುತ್ತದೆ. ಶಾ ಪಕ್ಕ ಕೂತ ಸ್ವಾಮೀಜಿಯಾದರೂ ನೋಡಿ ಎದ್ದು ನಿಂತು ಗೌರವಿಸಿರಲೇಬೇಕು. ಶಾನ ಹಿಂದೆ ಅಕ್ಕಪಕ್ಕ ಕೂತವರನ್ನು ನೋಡಿದರೆ ನಿರ್ಮಲಾನಂದನಾಥರು ಬಂದು ಕೂತು ಎಷ್ಟೋ ಹೊತ್ತಾಗಿದೆ. ಸ್ವಾಮೀಜಿಯ ಮುಂದೆ ಕನಿಷ್ಠ ಗೌರವವನ್ನೂ ತೋರದೆ ಅಮಿತ್ ಶಾ ಕಾಲಮೇಲೆ ಕಾಲುಹಾಕಿ ಕೂತು ದರ್ಪ ಮೆರೆದಿದ್ದಾನೆ. ದೊಡ್ಡ ಗುಣದ ನಿರ್ಮಲಾನಂದನಾಥರು ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ ಹೋದರೂ ಅವರ ಮುಖದಲ್ಲಿ ಆದ ಅವಮಾನ ಸ್ಪಷ್ಟವಾಗಿ ಗೋಚರಿಸುತ್ತದೆ. ಅಮಿತ್ ಶಾ ಹಿಂದಿದ್ದ ಬಿಜೆಪಿ ಕಾರ್ಯಕರ್ತನೊಬ್ಬ ಎದುರಿದ್ದ ತನ್ನ ಗೆಳೆಯನ ಮೂಲಕ ತೆಗೆಸಿಕೊಂಡ ಫೋಟೋ ಹೇಗೋ ಸಾಮಾಜಿಕ ಜಾಲತಾಣಗಳಲ್ಲಿ ಬಯಲಾಗಿದೆ.


ಯಾವತ್ತು ಶಾ ವಿರುದ್ಧ ಸಾರ್ವಜನಿಕ ಆಕ್ರೋಶ ಭುಗಿಲೆದ್ದಿತೋ ಖುದ್ದು ಯಡ್ಡಿಯೇ ಅಶೋಕ್‌ಗೆ ಫೋನ್ ಮಾಡಿ ಸ್ವಾಮೀಜಿಗೆ ಹೇಳಿಸಿ ಅಂಥಾದ್ದೇನೂ ನಡೆದೇ ಇಲ್ಲವೆಂಬಂತೆ ಸ್ಪಷ್ಟನೆ ಕೊಡಿಸಿದ್ದಾರೆ. ಬಿಜೆಪಿ ನಾಯಕರ ಹಂಗಿಗೆ ಬಿದ್ದ ನಿರ್ಮಲಾನಂದನಾಥರು ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಸ್ಪಷ್ಟನೆ ನೀಡಿದ್ದಾರೆ. ಅವರ ಪ್ರಕಾರವೇ ಅವರು ಬಂದು ಕೂತಿದ್ದನ್ನು ಅಮಿತ್ ಶಾ ನೋಡಿರಲಿಲ್ಲ ಎನ್ನುವುದಾದರೆ ಅಲ್ಲಿದ್ದ ಬೇರೆ ಎಲ್ಲರೂ ಹೇಗೆ ತಾನೇ ಕೂತಿರುತ್ತಿದ್ದರು? ಅಕ್ಕಪಕ್ಕ ಕೂತಿದ್ದವರು ಎದ್ದು ನಿಂತು ಪ್ರಣಾಮ ಸಲ್ಲಿಸಿದ್ದೂ ಶಾ ಗಮನಕ್ಕೆ ಬರಲಿಲ್ಲವೆ? ಎದುರಿನಿಂದಲೇ ನಡೆದುಬಂದರೂ ಅದು ಶಾನ ಗಮನಕ್ಕೆ ಬರಲಿಲ್ಲವೆ? ಎದುರಿನಿಂದಲೇ ನಡೆದುಬಂದರೂ ಅದು ಶಾನಿಗೆ ಕಾಣಿಸಲಿಲ್ಲ ಎಂದರೆ ಒಂದೋ ಅಂತ ಪಾಪಿಯ ಕಣ್ಣಿಗೆ ಪೂಜ್ಯರು ಬಂದದ್ದು ಕಾಣಿಸದೇ ಹೋಗಿರಬೇಕು ಅಥವಾ ಈ ಎರಡು ಬಾಗಿಲುಗಳಿಂದ ನಿರ್ಮಲಾನಂದನಾಥರು ಬರಲಿಲ್ಲವೆಂದರೆ ಅವರ ಹಿಂಭಾಗದ್ದೋ ಪಕ್ಕದ್ದೋ ಗೋಡೆಯಿಂದ ಮಾಯವಾಗಿ ಬಂದು ಯಾರ ಕಣ್ಣಿಗೂ ಕಾಣದೇ ಕೇವಲ ಕ್ಯಾಮರಾದ ಕಣ್ಣಿಗಷ್ಟೇ ಬಿದ್ದ ಮಾಯಾವಿಯಂತೆ ನಿರ್ಮಲಾನಂದನಾಥರು ಲೀಲೆ ಮೆರೆದಿರಬೇಕು!

ಇವೆರಡರಲ್ಲಿ ಯಾವುದು ಸತ್ಯ? ನಿರ್ಮಲಾನಂದನಾಥರೇ ಸ್ಪಷ್ಟಪಡಿಸಬೇಕು...

...ರಣವಾಗಿದ್ದು ಗುಜರಾತ್ ಕಾಂಗ್ರೆಸ್ ಶಾಸಕರು ...ಗಳೂರಿನಲ್ಲಿ ಬಚ್ಚಿಟ್ಟುಕೊಂಡ ಸಂದರ್ಭಕ್ಕೆ ಸರಿಯಾಗಿ ...ಕೆ ಮೇಲೆ ನಡೆದ ಐಟಿ ದಾಳಿ.

ಅದು ರಾಷ್ಟ್ರವ್ಯಾಪಿ ಬೇರೆಯದೇ ಚರ್ಚೆಯೊಂದಕ್ಕೆ ...ರಣವಾಯಿತು. ಮೋದಿ-ಶಾ ಜೋಡಿ ಸಿಬಿಐ, ಐಟಿ ...ತ್ತು ಇಡಿಗಳನ್ನು ಪ್ರಜಾತಂತ್ರದ ದಮನಕ್ಕೆ ಆಯುಧವಾಗಿ ...ಸುತ್ತವೆಯೆಂಬುದು!

ಇದು ರಾಷ್ಟ್ರವ್ಯಾಪಿ ಚರ್ಚೆಯಾದರೆ ಕರ್ನಾಟಕದ ಮಟ್ಟಿಗೆ ...ಕೆ ಮೇಲಿನ ಐಟಿ ದಾಳಿ ವಿಶೇಷವಾಗಿ ಮೈಸೂರು ...ರ್ನಾಟಕದ ಒಕ್ಕಲಿಗರನ್ನು ರೊಚ್ಚಿಗೇಳಿಸಿತು. ಕಾಂಗ್ರೆಸ್ ...ಟ್ಟಿಗೆ ಕೃಷ್ಣರ ನಂತರ ಒಕ್ಕಲಿಗರ ಪ್ರಭಾವಿ ನಾಯಕನಾಗಿ ...ರಹೊಮ್ಮಿದ್ದ ಡೀಕೆಗೆ ಕೆಪಿಸಿಸಿ ಅಧ್ಯಕ್ಷಗಾದಿ ತಪ್ಪಿದ್ದೇ ... ದಾಳಿಯ ಭೀತಿಯಿಂದ ಎಂಬ ಭಾವನೆ ಮೊದಲೇ ...ಕ್ಕಲಿಗರಲ್ಲಿ ಮನೆಮಾಡಿತ್ತಲ್ಲ; ಅದಕ್ಕೆ ತಕ್ಕಂತೆಯೇ ಐಟಿ ...ಳಿಯೂ ನಡೆದುಹೋಯಿತು. ಅಂಥಾ ಗಣಿರೆಡ್ಡಿಗಳ ...ದ 980 ಕೋಟಿ ರೂಪಾಯಿಗಳ ಸೊತ್ತನ್ನೇ ಇಡಿಯ ...ಲಕ ವಾಪಸ್ಸು ಮಾಡಿರುವಾಗ ತಕ್ಷಣದ ಯಾವುದೇ ...ರಣವಿಲ್ಲದೆ ಡೀಕೆ ಮೇಲೆ ಐಟಿ ದಾಳಿ ನಡೆದದ್ದು ...ಕೀಯ ಪ್ರೇರಿತ' ಅನ್ನಿಸದೇ ಬೇರೇನೂ ಅನ್ನಿಸಲು ...ಧ್ಯವಿರಲಿಲ್ಲ. ಇದು ಸಹಜವಾಗೇ ಒಕ್ಕಲಿಗರ ಸಂಘವನ್ನು ...ಸಿತು. ಒಕ್ಕಲಿಗರ ಸಂಘದ ಅಧ್ಯಕ್ಷ ಬೆಟ್ಟೇಗೌಡ ಮತ್ತು ...ಧಿಕಾರಿ ಪೂಜಾರಿಪಾಳ್ಯ ಕೃಷ್ಣಮೂರ್ತಿ ಸೇರಿಕೊಂಡು ...ಕೆ ಮೇಲಿನ ದೌರ್ಜನ್ಯವೆಂದೇ ಪತ್ರಿಕಾಗೋಷ್ಠಿ ನಡೆಸಿದರು. ...ಮುಖಧಾರಿ ಯೋಧರು ಮನೆಗೆ ನುಗ್ಗಿದ್ದು, ಅವರ ... ಮಕ್ಕಳು ಭಯಭೀತರಾಗಿ ಬಾಲ್ಕನಿಯಿಂದ ಇಣುಕುತ್ತಿದ್ದ ...ಟೋಗಳು ಬಿಜೆಪಿ ದೌರ್ಜನ್ಯದ ವಿರುದ್ಧ ಬೇರೆಯದೇ ...ದೇಶ ಮತ್ತು ಸಂಕೇತಗಳನ್ನು ಹೊರಡಿಸಿದವು. ಅದೇ ...ತ್ತಿಗೆ ಸರಿಯಾಗಿ ಬರ್ವರ್ರಾ ಪ್ರವಾಸದಲ್ಲಿದ್ದ ...ರ್ಮಲಾನಂದನಾಥರು ಕೇಂದ್ರ ಸಚಿವ ಅನಂತ್‌ಕುಮಾರ್‌ಗೆ ಫೋನಾಯಿಸಿ ರೇಗಿದರೆಂದೂ, ಯೋಗಿ ಆದಿತ್ಯನಾಥ್‌ಗೇ ಹೇಳಿ ರೇಡು ನಿಲ್ಲಿಸದೇ ಹೋದರೆ ಒಕ್ಕಲಿಗರು ಮೋದಿ ವಿರುದ್ಧ ಬೀದಿಗಿಳಿಯುತ್ತಾರೆಂದು ಎಚ್ಚರಿಸಿದರೆಂದೂ ಟೀವಿಗಳಲ್ಲಿ ಸುದ್ದಿಯಾಯಿತು.


ಆದಿಚುಂಚನಗಿರಿ ಕ್ಷೇತ್ರ

ಕಾಲಮೇಲೆ ಕಾಲಹಾಕಿ...!

ಬೇಣೆ ಕೀಳಲು ಹೋಗಿ ಬಾಲ ಸಿಕ್ಕಿಸಿಕೊಂಡಂತೆ ಮರುದಿನವೇ ರೇಡು ನಿಂತಿತಾದರೂ ಡೀಕೆಯನ್ನು ಬಂಧಿಸುವ ಶಾ ಉದ್ದೇಶವೇ ಮುರಿದುಬಿದ್ದಂತಾಯ್ತು. ರೇಡ್ ಮುಗಿದ ಮರುದಿನಕ್ಕೇ ಡೀಕೆ ಮನೆಗೆ ಖುದ್ದಾಗಿ ನಿರ್ಮಲನಾಥ ಸ್ವಾಮೀಜಿ ಬಂದು ಸಾಂತ್ವನ ಹೇಳಿದ್ದು ಡೀಕೆಯ ಇಮೇಜನ್ನೇ ಬದಲಿಸಿಬಿಟ್ಟಿತು: ಯಾವ ಡೀಕೆಯನ್ನು ಐಟಿ ರೇಡ್ ನೆಪದಲ್ಲಿ ಬಂಧಿಸಿ ಖಳನನ್ನಾಗಿಸುವ ಮೂಲಕ ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡ ಮುಖಭಂಗ ಮಾಡಲು ಶಾ ಹಳ್ಳ ತೋಡಿದ್ದನೋ ಅದೇ ಹಳ್ಳಕ್ಕೆ ಬಿಜೆಪಿ ಬೀಳುವಂತಾಗಿತ್ತು.

ಇಂಥಾದ್ದೊಂದು ಹಿನ್ನಡೆಯನ್ನು ಬಿಜೆಪಿಯಾಗಲಿ ಶಾ ಆಗಲಿ ಲೆಕ್ಕ ಹಾಕಿರಲಿಲ್ಲ. ಕರ್ನಾಟಕದ ಮಟ್ಟಿಗೆ ಬಿಜೆಪಿ ಏನೇ ಮಾಡಲು ಹೋದರೂ ಅದು ತಿರುಗುಬಾಣವಾಗಿ ಮುಳುವಾಗುತ್ತಿದ್ದ ಪಜೀತಿಗೆ ಬಿಜೆಪಿ ಬಿದ್ದಂತಾಗಿತ್ತು. ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಧರ್ಮಕ್ಕಾಗಿ ಲಿಂಗಾಯತರು ಬಿಜೆಪಿ ವಿರುದ್ಧ ತಿರುಗಿಬಿದ್ದ ಹಿನ್ನಡೆಯ ಜೊತೆಜೊತೆಗೇ ಡೀಕೆ ಮೇಲೆ ನಡೆದ ದಾಳಿಯ ವಿರುದ್ಧ ದಕ್ಷಿಣ ಕರ್ನಾಟಕದ ಒಕ್ಕಲಿಗರೂ ರೊಚ್ಚಿಗೆದ್ದರೆಂದರೆ ಅದು ಸರ್ವನಾಶವೇ. ಇದಕ್ಕೊಂದು ತ್ಯಾಪೆ ಹಾಕದೆ ಹೋದರೆ ಇನ್ನಷ್ಟು ಅನಾಹುತ ಶತಸ್ಸಿದ್ಧ ಎಂಬ ಇಂಟಲಿಜೆನ್ಸ್ ಮಾಹಿತಿಯೂ ಮೋದಿ ಪ್ರಭುತ್ವಕ್ಕೆ ರವಾನೆಯಾಗಿತ್ತು. ಇದಕ್ಕೆ ದುರಸ್ತಿ ತಂತ್ರವಾಗಿ ರಾಜ್ಯ ಒಕ್ಕಲಿಗರ ಶ್ರದ್ಧಾಕೇಂದ್ರವಾದ ಆದಿಚುಂಚನಗಿರಿಗೇ ಎಡತಾಕಬೇಕಾದ ಅನಿವಾರ್ಯಕ್ಕೆ ಅಮಿತ್ ಶಾ ಬಿದ್ದುಬಿಟ್ಟ. ಬೇರೆ ವಿಧಿಯೇ ಇಲ್ಲವೆಂಬಂತೆ ಮಾರ್ಚ್ 13ಕ್ಕೆ ಆದಿಚುಂಚನಗಿರಿಗೆ ಬಂದು ನಿರ್ಮಲನಾಥರ ಕಾಲಿಗೆ ಬೀಳುವುದೊಂದೇ ಆತನಿಗಿದ್ದ ದಾರಿ.


ಬೆಟ್ಟೇಗೌಡ


ಪೂಜಾರಿಪಾಳ್ಯ ಕೃಷ್ಣಮೂರ್ತಿ


ಬಹುಶಃ ಎಲ್ಲವೂ ಲೆಕ್ಕಾಚಾರದ ಪ್ರಕಾರವೇ ಆಗಿದ್ದರೆ ಶಾ ಆದಿಚುಂಚನಗಿರಿ ಭೇಟಿ ಒಂದು ಗಂಪಿನ ಒಕ್ಕಲಿಗರನ್ನಾದರೂ ಬಿಜೆಪಿ ಪರ ಮೆತ್ತಗಾಗಿಸುತ್ತಿತ್ತೇನೊ. ಆದರೆ ಆ ಒಂದು ಫೋಟೋ, ಅದ್ಯಾವ ಮಾಯೆಯಿಂದ ಹೊರಜಗತ್ತಿಗೆ ಬಿತ್ತೋ, ಬಿಜೆಪಿಯ ದೌರ್ಭಾಗ್ಯಕ್ಕೆ ಕೊನೆಯೇ ಇಲ್ಲದಂತಾಗಿ ಹೋಯಿತು. ಆಗಸ್ಟ್ 13ರಂದು ಆದಿಚುಂಚನಗಿರಿಗೆ ಬಂದಿದ್ದ ಅಮಿತ್ ಶಾ ನಿರ್ಮಲನಾಥರೆದುರು ಕಾಲ ಮೇಲೆ ಕಾಲು ಹಾಕಿ ಕೂತಿದ್ದು ಬಿಜೆಪಿ ಪಾಲಿಗೆ ಮುಳುವಾಯಿತು. ಅಂಥಾ ದೇವೇಗೌಡರೇ ಸ್ವಾಮೀಜಿಯ ಮುಂದೆ ಪೊಡಮಟ್ಟಿ ಕೂರುವಾಗ ಈ ಅಮಿತ್ ಶಾ ಕಾಲ ಮೇಲೆ ಕಾಲ ಹಾಕಿ ಆದಿಚುಂಚನಗಿರಿ ಶ್ರೀಗಳನ್ನು ಅವಮಾನಿಸಿದ್ದು ಒಕ್ಕಲಿಗರನ್ನಷ್ಟೇ ಅಲ್ಲ ಕನ್ನಡಿಗರನ್ನೂ ಕೆರಳಿಸಿತ್ತು.

ಮಾರನೇ ದಿನ ಸಾಮಾಜಿಕ ಜಾಲತಾಣಗಳಲ್ಲಿ ಅಮಿತ್ ಶಾ ದುರಹಂಕಾರದ ವಿರುದ್ಧ ವ್ಯಕ್ತವಾದ ಆಕ್ರೋಶವಿತ್ತಲ್ಲ, ಅದು ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲಗುಂಟ ನೀರು ಎಂಬ ಬಿಜೆಪಿಯ ಬೇಗುದಿಯನ್ನು ಮತ್ತೊಮ್ಮೆ ಸಾಬೀತು ಪಡಿಸಿತ್ತು. ಬೇರೆ ಬೇರೆ ಬ್ರಾಹ್ಮಣ ಸ್ವಾಮೀಜಿಗಳ ಪಾದದ ಬಳಿ ಕೂತು ಇದೇ ಅಮಿತ್ ಶಾ ಮತ್ತು ಮೋದಿ ಅತೀ ಭಕ್ತಿ ಮೆರೆದಿದ್ದ ಫೋಟೋಗಳನ್ನು ಹೆಕ್ಕಿ ತೆಗೆದ ಫೇಸ್‌ಬುಕ್ ಖಾತೆದಾರರು ಅದರ ಪಕ್ಕದಲ್ಲೇ ಕಾಲ ಮೇಲೆ ಕಾಲು ಹಾಕಿ ಕೂತು ನಿರ್ಮಲನಾಥರನ್ನು ಅವಮಾನಿಸಿದ ಶಾನ ಫೋಟೋ ಹಾಕಿದ್ದರು. ಅದನ್ನು ನೋಡಿದ ಯಾರೇ ಶೂದ್ರನಿಗೂ ಶಾ ವಿರುದ್ಧ ಪಿತ್ಥ ಕೆರಳದಿರಲು ಸಾಧ್ಯವೆ?

ಯಾವ ಆದಿಚುಂಚನಗಿರಿಗೆ ಬಂದು ನಿರ್ಮಲನಾಥರ ಕಾಲಿಗೆ ಬಿದ್ದು ಡೀಕೆ ಮನೆ ಮೇಲಿನ ದಾಳಿಗೆ ರೊಚ್ಚಿಗೆದ್ದ ಒಕ್ಕಲಿಗರನ್ನು ಸರಿಮಾಡಿಕೊಂಡರಾಯ್ತು ಎಂಬ ಅಮಿತ್ ಶಾನ ತಂತ್ರವೇ ಬಿಜೆಪಿ ಪಾಲಿಗೆ ಶಾಪವಾಗಿ, ಮುಳುವಾಗಿ ಪರಿಣಮಿಸುತ್ತದೆಯೆಂದರೆ ಯಾಕೋ ಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿಯ ಗ್ರಹಚಾರವೇ ಕೆಟ್ಟು ಕೆರ ಹಿಡಿಯುತ್ತಿದೆ. ಐಟಿ ರೇಡು ಮಾಡಿದರೇನು? ಆದಿ ಚುಂಚನಗಿರಿಗೇ ಬಂದರೇನು?


ಬಸವಣ್ಣನ ನೆಲದಲ್ಲಿ ಬಿಜೆಪಿಯ ವೈದಿಕ ತಂತ್ರಗಳಿಗಿನ್ನು ಉಳಿಗಾಲವಿದ್ದಂತಿಲ್ಲ.

■ ರಾ. ಸೋಮನಾಥ್



ಬಿಜೆಪಿಗೆ ತಿರುಗುಬಾಣವಾದ ಟ್ರೋಲ್ ಮಂತ್ರ

ಮೋದಿ ಸರ್ಕಾರ ಅಧಿಕಾರಕ್ಕೇರಿದ್ದರಲ್ಲಿ ಅದಾನಿ ...ಬಾನಿಗಳು ಕಾಸಿನ ಪಾತ್ರ ಎಷ್ಟಿದೆಯೋ, ಬಿಜೆಪಿಯ ... ಸೆಲ್ ಹಗಲುರಾತ್ರಿಯೆನ್ನದೆ ಯುಪಿಎ ಸರ್ಕಾರವನ್ನು ...ಹೇವಾರಿ ಟ್ರೋಲ್ ಮಾಡಿ ಮೋದಿಯನ್ನು ...ದೇಶವೀರನಂತೆ ಬೂಸ್ಟ್ ಮಾಡಿದ್ದರ ಪಾಲೂ ಅಷ್ಟೇ ... ಯುವಜನರ ಸೋಶಿಯಲ್ ನೆಟ್‌ವರ್ಕ್ ಸಮೂಹ ...ಯನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ ವಾಟ್ಸಪ್, ...ಟ್, ಫೇಸ್‌ಬುಕ್‌ಗಳಲ್ಲಿ ಫೋಟೊ ಬಳಸಿ ಸುಳ್ಳು ...ಹೇಳಿಂದೇ ನಮೋ ಬ್ರಿಗೇಡ್ ಅನ್ನು ಹುಟ್ಟುಹಾಕಿತ್ತು. ...ಕ್ಕೊಂದೇ ದೊಡ್ಡ ಭಕ್ತಗಣವೇ ಸೃಷ್ಟಿಯಾಗಿತ್ತು. ...ಮೋಹನ್ ಸಿಂಗ್ ಮತ್ತು ಹಾಲುಗಲ್ಲದ ರಾಹುಲ್ ...ಧಿಯನ್ನು ಅವರು ಆಟ್ಟಾಡಿಸಿ ಟಾರ್ಚರ್ ಕೊಟ್ಟ ... ಕಡಿಮೆಯೇನಲ್ಲ. ಇವತ್ತೂ ಆ ಬ್ರಿಗೇಡ್‌ನ ಭಕ್ತಗಣ ...ದಿಯ ಸಾಲುಸಾಲು ವೈಫಲ್ಯಗಳನ್ನು ಮರೆಮಾಚಲು ...ಡುತ್ತಲೇ ಇದ್ದಾರೆ. ಕೋಮುದ್ವೇಷದ ಕಿಚ್ಚನ್ನು ...ಲು ಇನ್ನಿಲ್ಲದಂತೆ ಶ್ರಮ ಹಾಕುತ್ತಿದ್ದಾರೆ. ಆದರೆ ...ಗ ಬಿಜೆಪಿಗಳ ಬಲಾಢ್ಯ ಅಸ್ತ್ರವಾಗಿದ್ದ ಟ್ರೋಲಿಂಗ್ ...ರುಗುಬಾಣದಂತೆ ಅವರನ್ನೇ ತಿವಿಯಲು ಶುರು ಮಾಡಿದೆ. ...ಯೂವಾಗ ಮೋದಿ ಮತ್ತವನ ಬೊಗಳೆದಾಸರ ...ಸಾಕ ಕೇವಲ ಟ್ರೋಲಿಂಗ್‌ನಲ್ಲಿ ಅಡಗಿದೆ ಅನ್ನೋದು ...ವಾಯ್ತೋ, ಆಗಿನಿಂದ ಕಾಂಗ್ರೆಸ್ ಸೇರಿದಂತೆ ವಿರೋಧ ...ಗಳು ಮತ್ತು ಮೋದಿಯ ಕೋಮು ಅಜೆಂಡಾವನ್ನು ... ಮಾಡಲು ಹಾತೊರೆಯುತ್ತಿದ್ದ ಒಂದಷ್ಟು ತಂತ್ರಜ್ಞ ...ಸಂತರು ಅದೇ ಟ್ರೋಲಿಂಗ್ ಬಳಸಿ ಬಿಜೆಪಿಯ ...ವನ್ನು ಬಯಲಿಗೆಳೆಯುತ್ತಾ ಬಂದಿದ್ದಾರೆ. ಮೋದಿಯ ...ಗಳು, ಆತನ ಟೊಳ್ಳು ಯೋಜನೆಗಳು, ಆತನ ...ತಿಮ್ಮು ಮಾಡುವ ಭಾಷಣಗಳು- ಹೀಗೆ ಪ್ರತಿಯೊಂದೂ ಕ್ಷಣಾರ್ಧದಲ್ಲಿ ಕಾರ್ಟೂನ್ ರೂಪದಲ್ಲೋ, ಫೋಟೊ ಎಡಿಟಿಂಗ್ ರೂಪದಲ್ಲೋ ಮೊಬೈಲ್‌ಗಳಲ್ಲಿ ಹರಿದಾಡಿ ಮೋದಿಯ ಕೃತಕ ಅಲೆಯ ಉಬ್ಬರವನ್ನು ಸಪಾಟು ಮಾಡುತ್ತಿವೆ.



ಸದ್ಯದಲ್ಲೇ ಎಲೆಕ್ಷನ್ ಇರುವ ಕರ್ನಾಟಕದಲ್ಲಂತೂ ಈ ಟ್ರೋಲ್‌ಗಳು ಬಿಜೆಪಿಗಳನ್ನು ಅದ್ಯಾವಪರಿ ಅಪಹಾಸ್ಯ ಮಾಡುತ್ತಿವೆಯೆಂದರೆ ಅವರೆಲ್ಲ ಮಾತು ಕಳೆದುಕೊಂಡು ಅಮಿತ್ ಶಾನ ಹಿಂದೆ ಅವಿತುಕೊಳ್ಳುವಂತೆ ಮಾಡಿವೆ. ಈ ಕೆಲಸಕ್ಕೆಂದೇ ಬಿಜೆಪಿ ಜೋಕರ್ಸ್ ಆಫ್ ಕರ್ನಾಟಕ ಎಂಬ ಫೇಸ್‌ಬುಕ್ ಅಕೌಂಟೇ ಓಪನ್ನಾಗಿ ದಾಳಿ ಮಾಡುತ್ತಿದೆ. ಬಿಜೆಪಿಗೆ ಅದರದೇ ಹಾದಿಯಲ್ಲಿ ತಿರುಮಂತ್ರ ಹಾಕಲು ರಾಜ್ಯ ಕಾಂಗ್ರೆಸ್ ಕೂಡಾ ಇದಕ್ಕೆಂದೇ ಒಂದು ವಿಶೇಷ ಟೀಮು ರಚಿಸಿ ಅದರ ಉಸ್ತುವಾರಿಯನ್ನು ಸಿಎಂ ಸಿದ್ದರಾಮಯ್ಯನವರ ಮಗ ಯತೀಂದ್ರ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಪತ್ನಿ ಟಬು ಅವರ ಹೆಗಲಿಗೇರಿಸಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಅದಕ್ಕೆ ತಕ್ಕಂತೆ ಮಹದಾಯಿ ಹೋರಾಟದಲ್ಲಿ ಬಿಜೆಪಿಗಳ ಮೌನ, ಯಡ್ಡಿಯ ದಲಿತ ಭೋಜನ ಎಂಬ ಹೈಡ್ರಾಮಾದ ಹಕೀಕತ್ತು, ಕನ್ನಡ ಧ್ವಜದ ಪ್ರಾದೇಶಿಕತೆ, ಮೋದಿಯ ಯೂಟರ್ನ್ ಪಾಲಿಸಿ ಹೀಗೆ ಒಂದಷ್ಟು ಗಂಭೀರ ವಿಷಯಗಳ ಜೊತೆಗೆ ಸಿದ್ದರಾಮಯ್ಯನವರ ಪಾಸಿಟಿವ್ ಹಾಗೂ ಯಡ್ಡಿಯ ನೆಗೆಟಿವ್ ಹೋಲಿಕೆಯ ಫೋಟೊಗಳು ಹರಿದಾಡುತ್ತಿವೆ.

ಮೊನ್ನೆ ಡಿಕೆಶಿ ಮನೆ ಮೇಲೆ ಮಾಡಿಸಿದ ರೇಡ್ ಅವಾಂತರದ ಅಡ್ವರ್ಸ್ ಎಫೆಕ್ಟ್ ತಗ್ಗಿಸಿಕೊಳ್ಳಲೆಂದು ಅಮಿತ್ ಶಾ ಆದಿಚುಂಚನಗಿರಿಯ ಮಠಕ್ಕೆ ಹೋಗಿ ನಿರ್ಮಲಾನಂದರ ಮುಂದೆ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತು ಅವಾಂತರ ಮಾಡಿಕೊಂಡದ್ದು ಕೂಡಾ ಟ್ರೋಲ್ ಬಿರುಗಾಳಿಗೆ ಸಿಲುಕಿ ಅತಂತ್ರ ಬಿಜೆಪಿಯನ್ನು ಮತ್ತಷ್ಟು ಅಲುಗಾಡಿಸಿದೆ. ಒಟ್ಟಿನಲ್ಲಿ, ಜನರನ್ನು ತಮ್ಮತ್ತ ಸೆಳೆಯುವಂತಹ ಯಾವ ಸೈದ್ಧಾಂತಿಕ, ಸಾಮಾಜಿಕ ಮುನ್ನೋಟಗಳೂ ಇಲ್ಲದ ಬಿಜೆಪಿ ಯಾವ ಬೊಗಳೆತನದ ಟ್ರೋಲ್ ಮೊರೆ ಹೋಗಿತ್ತೋ ಅದೇ ಟ್ರೋಲ್ ಇವತ್ತು ಕೇಸರಿ ಸುಳ್ಳುಗಾರರನ್ನು ಇನ್ನಿಲ್ಲದಂತೆ ಸತಾಯಿಸಲು ಶುರು ಮಾಡಿದೆ. ಯಡ್ಡಿ, ಈಶು, ಶೆಟ್ಟರ್, ಅನಂತ್ಕುಮಾರ್ ವಗೈರಾಗಳಂತಹ ಸ್ಟೇಟ್ ಬಿಜೆಪಿಗಳು ಏನನ್ನು ಮಾಡಬೇಕು, ಯಾವುದನ್ನು ಮಾತಾಡಬೇಕು ಅಂತ ಹತ್ತತ್ತು ಸಲ ಯೋಚಿಸುವಂತೆ ಮಾಡಿರೋದು ಟ್ರೋಲಿಂಗ್ ಟೀಂನವರ ಹೆಗ್ಗಳಿಕೆಯೇ ಸರಿ.

■ ಶರ



ಗೋರಖ್‌ಪುರ ಕಂದಮ್ಮಗಳ ನೆನಪಿನಲ್ಲಿ.....


ಹೂಗಳ ಶವಯಾತ್ರೆ

ನಾನು ಆಗಾಗ
ಶವಯಾತ್ರೆಗಳಲ್ಲಿ
ಹೂಗಳನ್ನು ನೋಡಿದ್ದೆ
ನಿನ್ನೆ ಗೋರಖ್‌ಪುರದಲ್ಲಿ
ಎಳೆಯ ಹೂಗಳ
ಶವಯಾತ್ರೆ ನೋಡಿದೆ.

■ ಗುಲ್ಜಾರ್



ಶ್.... ಕೂಸು ಮಲಗಿದೆ, ಸದ್ದಾಡಬೇ...



ಎಳೆ ಎಸಳ ಕೆನ್ನೆಗಳಿಗೆ
ಮತ್ತೆ ಮತ್ತೆ ಮುತ್ತಿಟ್ಟು ಕಾವು ಕೊಡುತ್ತಿದ್ದಾಳೆ
ಹಾಲಹಸೆ ಆರಿಲ್ಲದ ತುಟಿಗಳಿಗೆ
ತುಟ್ಟಿ ಹೊತ್ತಿ ಉಸಿರು ತುಂಬುತ್ತಿದ್ದಾಳೆ

ಎಡಗೈ ಬಲಗೈಗಳು ಬಿಡುವಿಲ್ಲದೆ
ಬೀಸುತ್ತಾ ನೊಣ, ಸೊಳ್ಳೆಗಳ
ನೂಕುತ್ತಿದ್ದಾಳೆ
ಈ ಜೀವಕಣ ಮಿಸುಕಾಡಿದರೆ ಸಾಕು
ಮರುಕ್ಷಣವೇ ನನ್ನ ಜೀವ ನಿಂತರೂ ನಿಲ್ಲಲಿ
ಶ್....
ಕೂಸು ಮಲಗಿದೆ
ಸದ್ದಾಡಬೇಡಿ...

ದೇವರುಗಳನ್ನೆಲ್ಲಾ ಕೂಗಿ ಕರೆದಿದ್ದಾಳೆ
ದಿಕ್ಕುದಿಕ್ಕಿಗೂ ಮೊರೆಯಿಟ್ಟು
ಅಲ್ಯಾರೋ ಪವಾಡ ಪುರುಷನಿದ್ದಾನಂತೆ
ಕೂಗಳತೆ ದೂರದಲ್ಲಿ ಸರಯೂ ನದಿಯ ದಡದಲ್ಲಿ
ಮರುಭೂಮಿಯ ಖರ್ಜೂರದ ಮರದಲ್ಲಿ
ಜೆರುಸಲೆಂನ ಕಡಿದಾದ ಬೆಟ್ಟದಲ್ಲಿ
ಹುಡುಕ ಹೋದವರು
ಬರಿಗೈಲಿ ಬಂದಿದ್ದಾರೆ
ಥೂ....
ಆ ದೇವಲೋಕಗಳೆಲ್ಲಾ
ಬರಡಾಗಿ, ಮಡುವಾಗಿ
ಮಕ್ಕಳಿಲ್ಲದಂತಾಗಲಿ

ಅವನು ರಾಜನಂತೆ
ಅವನ ದರ್ಬಾರು ನನ್ನೊಡಲ
ಉರಿಬೆಂಕಿಯಲ್ಲಿ
ಸುಟ್ಟು ಬೂದಿಯಾಗಲಿ
ಚಣ ಗಾಳಿಯೂ ಕೊಡದ
ನಿನ್ನ ಪಾಳು ಸಾಮ್ರಾಜ್ಯ
ಅವಳ ಶಾಪಕ್ಕೆ ಕಲ್ಲು ಸಿಡಿದು
ಕಣ್ಣೀರಿಟ್ಟಿದೆ
ಶ್....
ಕೂಸು ಮಲಗಿದೆ
ಸದ್ದಾಡಬೇಡಿ.

ಒಡ್ಡೋಲಗದ ದ್ವಾರಿಯಲ್ಲಿ
ಅವಳ ಕರುಳಚೀಲ ಚೀತ್ಕರಿಸಿ
ಅಲೆದಾಡುತ್ತಿದೆ
ದೀರ್ಘ ನಿದ್ದೆಯ ಕೂಸ ಪಯಣದ ಮಣದು
ಮಡುಗಟ್ಟಿ
ಸತ್ತ ಆತ್ಮಗಳ ದರ್ಬಾರಿನಲ್ಲಿ
ಈಗ ಹೆಣಗಳದ್ದೆ ಸಾಲು ಸಾಲು
ಮೆರವಣಿಗೆ.

ಶ್...
ಕೂಸು ಮಲಗಿದೆ
ಸದ್ದಾಡಬೇಡಿ
ಒಂದನಿ ಕಣ್ಣೀರಿಟ್ಟು
ಕೈಮುಗಿಯಿರಿ.

■ ಎನ್.ರವಿಕುಮಾರ್, ಶಿವ...

ಹೆತ್ತ ಕರುಳ ಶಾಪ...

ಕೈಕಾಲು ಕಟ್ಟಿ ಬಾಯಿ ಹೊಲಿದು
ಉಸಿರ ಗಾಳಿಯ ತಡೆದು
ಖುಷಿಯ ಆಚರಿಸುತ್ತಿದ್ದಾರೆ
ಇಂದು ಈ ನೆಲದ ದಿನವಂತೆ
ಎದ್ದೇಳು ಮಗು..
ಮೂರು ಬಣ್ಣದ ಬಟ್ಟೆ
ಧೂಳ ಹೊದ್ದು ಹಾರುತಿದೆ
ನೂರಾರು ರೂಪದಲ್ಲಿ

ಕಂಬದ ಸುತ್ತ ಸತ್ತ ಬಿಂಬಗಳು
ಕಹಿ ಉಂಡ ಮನೆ ಮುಂದೆ
ಸಿಹಿ ಹಂಚುತ್ತಿದ್ದಾರೆ
ಅಳಬೇಡ ಅವ್ವ...
ಇಂದು ನೆಲದ ದಿನವಂತೆ
ಇನ್ನೆಲ್ಲಿ ಬರಬೇಕು ನಿನ್ನ
ಕಂದನ ದಿನ..?



ಒಣಬಾಯಿ ಬಾನುಲಿಗೆ
ಹಣದ ಕೀಲಿ ಕೈ
ಒಡಲ ನೋವು ಮನದ ಮಾತಾಗಿ
ಹೊರ ಬರದು ಅವ್ವ
ರಣತಂತ್ರದ ದೊರೆ
ಗೆಲ್ಲಲೇಬೇಕೆಂದು
ಪಣ ತೊಟ್ಟಿದ್ದಾನೆ
ಹೆಣದ ಲೆಕ್ಕ ಮುಗಿದಿಲ್ಲ ಇನ್ನೂ..!

ಪ್ರಮಾಣದ ಫರ್ಮಾನು ಹೊರಟಿದೆ
ಮುಕ್ತ ಮಾಡಲೆಂದು!
ಈಗ ನಿನ್ನ ಸರದಿ ಅವ್ವ
ಕೂಗಿ ಬಿಡು ಒಮ್ಮೆ
ಹೆತ್ತ ಕರುಳ ಶಾಪ...
ತಟ್ಟದೇ ಇರದೆಂದು

■ ವರದ


ನಾನು, ನಿಮ್ಮ ಹಂತಕ

ಓ ಕಂದಮ್ಮಗಳೇ
ಸಾಧ್ಯವಾದರೆ
ನನ್ನನ್ನು ಕ್ಷಮಿಸಿಬಿಡಿ;
ಕನಸು ಅರಳುವ ಮುನ್ನ
ನಿಮ್ಮ ಕೊರಳು ಹಿಸುಕಿದ
ಪಾಪಿ, ನಾನು;
ಜೀವ ನಂದುವ ಘಳಿಗೆಯಲಿ
ಪಟಪಟನೆ ಬಡಿದಾಡಿದ
ಆ ನಿಮ್ಮ ಪುಟ್ಟ ಪಾದಗಳು
ನನ್ನ ಎದೆಯ
ಎಚ್ಚರಿಸಲಿಲ್ಲ;
ಶ್ರೇಷ್ಠತೆಯ ಅಹಮ್ಮು,
ಜೀವದ್ವೇಷದ ಬೆಂಕಿ,
ರಣೋತ್ಸಾಹದ ಮದವೇರಿ
ಜಡ್ಡುಗಟ್ಟಿದ ನನ್ನ ಕಠೋರ
ಎದೆಗೆ ನಿಮ್ಮ ಮೃದು
ಪಾದಗಳ ಹೊಯ್ದಾಟ
ತಾಕಲೇ ಇಲ್ಲ;
ಹಾಲು, ಅನ್ನ, ನೀರು
ಆಜಾದಿ.....



ಏನೇನೂ ಅಲ್ಲ,
ನೀವು ಕೇಳಿದ್ದು
ಗುಲಗಂಜಿಯಷ್ಟು ಜೀವಗಾಳಿ;
ಕಿಂಚಿತ್ತೂ ಪ್ರತಿಭಟಿಸದೆ
ಬದುಕುವ ಹಕ್ಕಿಗಾಗಿ
ಅಡ್ಡಗಟ್ಟಿ ಆಗ್ರಹಿಸದೆ
ತಣ್ಣಗೆ ಅಸುನೀಗಿದ
ಆ ನಿಮ್ಮ ಕನಸುಗಳ
ಹಂತಕ ನಾನು;
ನಿಮ್ಮ ನಿರ್ಲಿಪ್ತ ನೋಟಗಳ
ಇರಿತವೇ ಸಾಕು,
ದಂಡನೆಗೂ ಯೋಗ್ಯನಲ್ಲದ
ನನ್ನನ್ನು
ಸಾಧ್ಯವಾದರೆ ಕ್ಷಮಿಸಿಬಿಡಿ
ವಿಶ್ವ ಗುರುವಿನೊಡಲಿನ
ಭಾರತೀಯ ನಾನು!!!!

■ ಗಿರೀಶ್ ತಾಳಿಕಟ್ಟೆ



ಹೇ ಬುದ್ಧ ಕ್ಷಮಿಸು...

ಇದೊಂದೇ ಒಂದು ಸಲ
ಸಾವಿಲ್ಲದ ಮನೆಯ ವಿಳಾಸ ತಿಳಿಸು,
ಹಿಡಿಯಷ್ಟು ಸಾಸಿವೆ ಬೇಕಿದೆ
ಈ ಬಡಪಾಯಿ ತಾಯಂದಿರಿಗೆ
ಆ ಎಳೆಯ ಮಕ್ಕಳ
ಉಸಿರನ್ನು ವಾಪಸ್ಸು
ಕೊಡಬೇಕಿದೆ...

■ ವಿಕಾಸ್ ಮೌ...

...ಸಮಕಾಲೀನ ಸವಾಲುಗಳು

02 ◀◀

...ಚಾರವನ್ನೂ ಬೆಸೆದವರು ವಿವೇಕಾನಂದ. ಭಕ್ತಿಪಂಥ ...ತ್ತು ರಾಮಕೃಷ್ಣ ಪರಮಹಂಸರಂತಹವರು ಪ್ರತಿಪಾದಿಸಿದ್ದ ...ಕೇತಗರ್ಭಿತವಾದ, ಉದಾರವಾದಿ ನೆಲೆಗಳಲ್ಲಿದ್ದ ಧರ್ಮದ ...ತಾದ ಚಿಂತನೆಗಳನ್ನು ಅಲ್ಲಿಂದ ಬೇರ್ಪಡಿಸಿದ್ದ ...ವೇಕಾನಂದರು ಹಿಂದೂಯಿಸಂ ಅನ್ನು ಧಾರ್ಮಿಕ ...ನ್ಮೋಹಕತೆಯ ತತ್ವಗಳಿಗೆ, ಜನಸಾಮಾನ್ಯರ ರಾಜಕಾರಣಕ್ಕೆ ...ರಳಿಸಿದರು. ರಾಜಕೀಯ ಹಿಂದೂಯಿಸಂಗೆ ...ಮೊದಲ ಬುನಾದಿಯನ್ನು ಹಾಕಿದ್ದು ವಿವೇಕಾನಂದರು ...ಮ ಚಿಂತಕರು ವಿಶ್ಲೇಷಿಸುತ್ತಾರೆ. ಕಲೋನಿಯಲ್ ...ತ್ತದ ಸಂದರ್ಭದ 19ನೇ ಶತಮಾನದಲ್ಲಿ ಭಕ್ತಿಪಂಥದ ...ವಳಿಯಿಂದ ಪ್ರೇರೇಪಿತಗೊಂಡಿದ್ದ ರಾಮಕೃಷ್ಣ ...ಮಹಂಸರು ಧರ್ಮವನ್ನು ಮಾನವೀಯ ಜವಾಬ್ದಾರಿಯ ...ಲಕ, ರಹಸ್ಯವೆನಿಸುವ ಆಧ್ಯಾತ್ಮದ ಯೋಗದ ಮೂಲಕ ...ಧಿಸುತ್ತ ಮಧ್ಯಮವರ್ಗಗಳನ್ನು ಬೆರಗಾಗಿಸಿದ್ದರು. ...ತಿರ್ಮಯ ಶರ್ಮ ಅವರು "ಆದರೆ ರಾಮಕೃಷ್ಣ ...ಮಹಂಸರ ಸಮಾನತಾ ಭಾವದ, ರಹಸ್ಯಾತ್ಮಕ ...ತ್ಮಕತೆಯಿಂದ ಧರ್ಮವನ್ನು ಸಂಪೂರ್ಣವಾಗಿ ...ರತಂದ ವಿವೇಕಾನಂದರು ಧರ್ಮದ ನಂಬಿಕೆಯನ್ನು ...ಕ ಮತ್ತು ದೈಹಿಕ ಶಕ್ತಿಯ ಅಭಿವ್ಯಕ್ತಿಯಾಗಿ ರೂಪಿಸಿದರು ...ತ್ತು ಧರ್ಮ ಮತ್ತು ನಂಬಿಕೆಗಳ ಪರಂಪರೆಯ ...ತನೆಗಳನ್ನು ಹುಟ್ಟು ಹಾಕಿದರು ಹಾಗೂ ...ಕ್ಷಿಯಾದರು. ಕೇವಲ ಕಾರಣಗಳ ಮಿತಿಯೊಳಗೆ ...ರ್ಮವನ್ನು ಅರಿತುಕೊಳ್ಳಬೇಕೆಂದು ಪ್ರತಿಪಾದಿಸಿದ ...ವೇಕಾನಂದ ಹೀಗೆ ಮಾಡುವುದರ ಮೂಲಕ ಸತ್ಯವನ್ನು ...ಧ ಮಜಲುಗಳಲ್ಲಿ ಅನಾವರಣಗೊಳಿಸಬಹುದೆಂದು, ... ಮತ್ತು ಮಮತೆಯನ್ನು ದೇವರನ್ನು ನೋಡುವ ...ಧಾರಗಳಾದ ಸಾಮರ್ಥ್ಯಗಳು ಎಂದೂ ಚಿಂತಿಸಿದರು" ...ದು ವಿವರಿಸುತ್ತಾರೆ. ಇದರ ಫಲವಾಗಿ ಭಕ್ತಿಪಂಥವು ...ತರವಾಗಿ ನಿರಾಕರಿಸುತ್ತಾ ಬಂದಿದ್ದ ವರ್ಣಾಶ್ರಮದ ...ತನ ಚಿಂತನೆಗಳ ಸ್ವಧರ್ಮ ಪರಿಕಲ್ಪನೆಯು ...ಬಾಗಿಲಿನಿಂದ ಪ್ರವೇಶ ಪಡೆದುಕೊಂಡಿತು. ಪೌರುಷತ್ವ ...ಶಾಲಿ ಸಾಮರ್ಥ್ಯತೆಗಳು ಧರ್ಮದ ಪುನರುಜ್ಜೀವನಕ್ಕೆ ...ನಾದಿಗಳಾಗಿ ಪ್ರತಿಪಾದನೆಗೊಂಡವು. ಮಾನವೀಯತೆಯ ...ವಾಗಿದ್ದ ವಿವೇಕಾನಂದರ ಈ ರಾಜಕೀಯ ...ದೂಯಿಸಂ ಮುಂದೆ ವಿವಿಧ ರೀತಿಯಲ್ಲಿ ...ಲಾವಣೆಗೊಳ್ಳುತ್ತ ಕಾಲುಶತಮಾನದ ನಂತರ ...ಧಿಯವರ 'ಹಿಂದ್ ಸ್ವರಾಜ್' ಆಗಿ ಹೊರಹೊಮ್ಮಿತು ...ತ್ತು ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರೀಯತೆಯ ...ಪ ಪಡೆದುಕೊಂಡಿತು.

...ಭಕ್ತಿಪಂಥ ಮತ್ತು ರಾಮಕೃಷ್ಣ ಪರಮಹಂಸರ ಚಿಂತನೆಗಳ ... ಆಧ್ಯಾತ್ಮಕತೆಯ ಸಂಕೇತಗರ್ಭಿತ ಉದಾರವಾದಿ ...ನೆಗಳು ಮೇಲಿನಂತೆ ಹೈಜಾಕ್‌ಗೊಂಡಿದ್ದನ್ನು ಕಣ್ಣಾರೆ ...ದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಧಾರ್ಮಿಕ ...ತ್ಮಿಕತೆಯು ಮುಂದೊಂದು ದಿನ ವಿಕಾರ ಸ್ವರೂಪಕ್ಕೆ ತಿರುಗುತ್ತದೆ ಎಂದು ಎಚ್ಚರಿಸಿದ್ದರು. ಈ ಮಾದರಿಯ ಹಿಂದೂ ಧಾರ್ಮಿಕತೆಯ ಆಧ್ಯಾತ್ಮಕತೆಯನ್ನು ಅಂಬೇಡ್ಕರರು ಅನೈತಿಕವಾದ, ವಿಕಾರವಾದ ಮೃಗಸದೃಶ್ಯ ಶಕ್ತಿಗೆ ಹೋಲಿಸಿ ಮುಂದೊಂದು ದಿನ ಇದು ರೂಢಿಗತಗೊಳ್ಳುವ ಹೇರುವಿಕೆಯ ಕಾನೂನಾಗಿ ಮಾರ್ಪಡುತ್ತದೆ ಎಂದು 1920ರಲ್ಲಿಯೇ ಎಚ್ಚರಿಸಿದ್ದರು.

ಇಂದು 21ನೇ ಶತಮಾನದಲ್ಲಿ ಈ ಆಧ್ಯಾತ್ಮ ಧಾರ್ಮಿಕತೆಯು ಸಂಪೂರ್ಣವಾಗಿ ವಿಕಾರಗೊಂಡು, ಕ್ರೌರ್ಯದ ಪ್ರದರ್ಶನಕ್ಕೆ ಆಡೊಂಬೊಲವಾಗಿ, ಮಾನವ ವಿರೋಧಿ ತತ್ವಗಳಾಗಿ ಪರಿವರ್ತನೆಗೊಂಡು ದಿನದಿನಕ್ಕೆ ವಿರೂಪಗೊಳ್ಳುತ್ತಿದೆ ಮತ್ತು ಜಟಿಲಗೊಳ್ಳುತ್ತಿದೆ. ಜಾತೀಯತೆಯನ್ನು ವಿರೋಧಿಸಿದ ವಿವೇಕಾನಂದರನ್ನು ತನ್ನ ಮತೀಯವಾದಿ, ಜಾತಿಪದ್ಧತಿಯ, ಪ್ರತ್ಯೇಕತೆಯ ಹಿಂದೂ ಧರ್ಮಕ್ಕೆ 'ಅಪ್ರಾಪ್ರಿಯೇಟ್' ಮಾಡಿಕೊಂಡ ಸಂಘ ಪರಿವಾರ ಈ ಮತಾಂಧತೆಯನ್ನು ವಿರೋಧಿಸುವ ನಾಗರಿಕರ ಮೇಲೆ ದೈಹಿಕ ಮತ್ತು ಮಾನಸಿಕ ಹಲ್ಲೆಗಳನ್ನು ನಡೆಸುತ್ತಿದೆ. ಈ ಸಂಘ ಪರಿವಾರದ ಲುಂಪೆನ್ ಗುಂಪು ಮತ್ತು ಅವರನ್ನು ಕುರುಡಾಗಿ ಬೆಂಬಲಿಸುವ ಧಾರ್ಮಿಕ ಮತಾಂಧರು ಈ ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸುವ ಜನಪರ ಚಿಂತಕರು, ಲೇಖಕರ ಮೇಲೆ ವ್ಯಕ್ತಪಡಿಸುತ್ತಿರುವ ಅಸಹನೆಗಳು ಕ್ರೌರ್ಯದ ನೆಲೆಯಲ್ಲಿ ನಡೆಸುತ್ತಿರುವ ಮಾನಸಿಕ ಹಲ್ಲೆಗಳು ಅಂಬೇಡ್ಕರ್ ಅವರ ಮೇಲಿನ ಎಚ್ಚರಿಕೆಯ ಮಾತುಗಳಿಗೆ ಸಾಕ್ಷಿಯಾಗಿವೆ.

"ಪ್ರಜ್ಞಾವಂತರು ಸಂಸ್ಕೃತಿ ಮತ್ತು ಧರ್ಮಗಳ ಪ್ರಶ್ನೆಗಳನ್ನು ಕಡೆಗಣಿಸಿದ್ದರಿಂದ ಅವು ಉಡಾಳರ ಕೈಯಲ್ಲಿ ತ್ರಿಶೂಲಗಳಾದವು, ಅಗ್ನಿಭಕ್ಷಕ ರಾಜಕಾರಣಿಗಳ ಕೈಯಲ್ಲಿ ಮಾರಕಾಸ್ತ್ರಗಳಾದವು" ಎಂದು ಡಿ.ಆರ್.ನಾಗರಾಜ್ ಮಾರ್ಮಿಕವಾಗಿ ಹೇಳುತ್ತಾರೆ.

ಮತ್ತೊಂದೆಡೆ ಇಂದು ಈ ಬಲಪಂಥೀಯ ಮತೀಯವಾದದ ಸಮರ್ಥಕರು ಇದನ್ನು ವಿರೋಧಿಸುವವರನ್ನು ನೇರವಾಗಿಯೇ ಎಡಪಂಥೀಯರು, ಮಾರ್ಕ್ಸವಾದಿಗಳು ಎಂದು ಜರೆದು ಇಡೀ ಸಂವಾದದ ದಿಕ್ಕನ್ನೇ ಹಾದಿ ತಪ್ಪಿಸುತ್ತಿರುವುದಕ್ಕೆ ಕಳೆದ ವರ್ಷ ಜೆಎನ್‌ಯು ಪ್ರಕರಣದಿಂದ ಇಂದಿನ ದೆಹಲಿಯ ರಾಮಜಾಸ್ ಕಾಲೇಜ್‌ನ ಗೂಂಡಾಗಿರಿಗಳು ಸಾಕ್ಷಿಯಾಗಿವೆ. ಈ ಎಡಪಂಥೀಯ ಎನ್ನುವ ಇಂದಿನ ಬಹುಸಂಖ್ಯಾತವಾದದ ಪ್ರತಿಪಾದಕರ ವಿಲನ್ ಅನ್ನು ಮತ್ತೊಮ್ಮೆ ಆಮೂಲಾಗ್ರವಾಗಿ ವಿಶ್ಲೇಷಿಸುವ ತುರ್ತು ಅಗತ್ಯ ನಮ್ಮ ಮುಂದಿದೆ.

ಬಲಪಂಥೀಯರು ಬಿಡಿ ಒಂದು ಸಾಮಾನ್ಯವಾಗಿ ಮಾರ್ಕ್ಸವಾದದ ಕುರಿತಾಗಿ ಪ್ರಮುಖ ಟೀಕೆಯನ್ನು ಪ್ರಸ್ತಾಪಿಸುತ್ತಾ ಟೆರಿ ಈಗಲ್ಟನ್ "ಮಾರ್ಕ್ಸಿಸಂ ಒಂದು ನಿರ್ದಿಷ್ಟ ದೃಷ್ಟಿಕೋನಕ್ಕೆ ಮಾತ್ರ ಬದ್ಧವಾಗಿರುತ್ತದೆ. ಅದು ಹೆಣ್ಣು ಮತ್ತು ಗಂಡನ್ನು ಇತಿಹಾಸದ ಒಂದು ಕೈಗೊಂಬೆಯನ್ನಾಗಿ ಮಾತ್ರ ಪರಿಭಾವಿಸುತ್ತದೆ ಮತ್ತು ಹೀಗೆ ಪರಿಭಾವಿಸುವ ಮೂಲಕ ಅವರ ಸ್ವಾತಂತ್ರ್ಯದ, ವೈಯಕ್ತಿಕ ನೆಲೆಗಳ ಬದುಕನ್ನು ನಿರಾಕರಿಸುತ್ತದೆ. ಮಾನವ ಸಂತತಿಯು ಪ್ರತಿರೋಧಿಸಲಾರದಷ್ಟು ಕಟುವಾದ, ಕನಿಕರವಿಲ್ಲದ, ಅಪಾರವಾದ ಶಕ್ತಿಯನ್ನುಳ್ಳ ಒಂದು ಬಗೆಯ ಉಗ್ರವಾದ ಕಟ್ಟುನಿಟ್ಟುಗಳನ್ನೊಳಗೊಂಡ ಇತಿಹಾಸದ ಕಾನೂನುಗಳನ್ನು ಮಾರ್ಕ್ಸ ನಂಬುತ್ತಾನೆ. ಆತನ ಪ್ರಕಾರ ಫ್ಯೂಡಲಿಸಂ ವ್ಯವಸ್ಥೆಯು ಬಂಡವಾಳಶಾಹಿಯ ಹುಟ್ಟಿಗೆ ಕಾರಣವಾಗುತ್ತದೆ, ಬಂಡವಾಳಶಾಹಿಯು ಮುಂದೆ ಸಮಾಜವಾದಕ್ಕೆ ದಾರಿ ಮಾಡಿಕೊಡುತ್ತದೆ. ಇತಿಹಾಸ ಕುರಿತಾದ ಮಾರ್ಕ್ಸನ ಸಿದ್ಧಾಂತವು ವಿಧಿನಿಯಮ ನಂಬುಗೆಯ ಸೆಕ್ಯುಲರ್ ಅವತರಣಿಕೆಯಷ್ಟೆ. ಇದು ಮಾರ್ಕ್ಸವಾದಿ ರಾಜ್ಯಗಳಂತೆಯೇ ಮನುಷ್ಯನ ಘನತೆ ಮತ್ತು ಸ್ವಾತಂತ್ರ್ಯಕ್ಕೆ ಸದಾ ವಿರೋಧವಾಗಿರುತ್ತದೆ" ಎಂದು ಬರೆಯುತ್ತಾನೆ.

ಮುಂದುವರೆದು ಟೆರಿ "ಮಾರ್ಕ್ಸವಾದವು ಕ್ರಾಂತಿಕಾರಿ ಸಿದ್ಧಾಂತವಂತೂ ಅಲ್ಲ, ಮಾರ್ಕ್ಸ ಸಮಾಜವಾದದ, ಕಮ್ಯುನಿಸಂನ ಹರಿಕಾರನಂತೂ ಅಲ್ಲವೇ ಅಲ್ಲ, ಮಾರ್ಕ್ಸ ಉದಾರವಾದಿಯಾಗಿದ್ದ, ಪ್ರಾರಂಭದ ದಿನಗಳಲ್ಲಿ ಯುರೋಪ್‌ನ ರಾಷ್ಟ್ರಗಳಲ್ಲಿನ ದುಡಿಯುವ ವರ್ಗಗಳ ಚಳವಳಿಗಳಾಗಲೇ ಸಮಾಜವಾದಿ ಚಿಂತನೆಗಳಿಗೆ ಒಗ್ಗಿಕೊಳ್ಳಲಾರಂಭಿಸಿದ್ದವು. ತಾನು ಸಮಾಜವಾದದ ಸಿದ್ಧಾಂತವನ್ನು ಬಿತ್ತಿದವನೆಂಬುದನ್ನು ಸ್ವತಃ ಮಾರ್ಕ್ಸನೇ ನಿರಾಕರಿಸುತ್ತಾನೆ. ಆದರೆ ಮಾರ್ಕ್ಸ ಈ ಸಮಾಜವಾದ ಸಿದ್ಧಾಂತವನ್ನು ಮರು ರೂಪಿಸಿದ್ದಂತೂ ನಿಜ. ಮಾರ್ಕ್ಸವಾದವು ಬಂಡವಾಳಶಾಹಿಯ ಬಲುದೊಡ್ಡ ಟೀಕಾಕಾರ ಮತ್ತು ಬಂಡವಾಳಶಾಹಿಯ ಒಪ್ಪಿತ ಸಂಸ್ಕೃತಿಗೆ ಈ ಮಾರ್ಕ್ಸವಾದವು ವಿರೋಧ ನೆಲೆಯ ಮತ್ತೊಂದು ಪ್ರತಿಸಂಸ್ಕೃತಿಯಾಗಿಯೇ ರೂಪಿತಗೊಂಡಿದೆ. ಎಲ್ಲಿಯವರೆಗೆ ಬಂಡವಾಳಶಾಹಿಯ ಸಂಸ್ಕೃತಿ ಇರುತ್ತದೆಯೋ ಅಲ್ಲಿಯವರೆಗೆ ಮಾರ್ಕ್ಸವಾದವೂ ಪ್ರಚಲಿತವಾಗಿರುತ್ತದೆ ಎನ್ನುದರಲ್ಲಿ ಸಂಶಯವೇ ಇಲ್ಲ, ಮಾರ್ಕ್ಸನ ವಿಮುಖನೀತಿಗಳು ಹೆಗೆಲ್‌ನಿಂದ ಪ್ರಭಾವಗೊಂಡಿದ್ದವು.

ಸಹಕಾರ ತತ್ವದಡಿ ನಿರ್ಮಿತಗೊಳ್ಳುವ ಸಮಾಜವು ಶೋಷಣೆಯಿಂದ ಮುಕ್ತಗೊಂಡು ಸ್ವಾವಲಂಬನೆಯನ್ನು ಸಾಧಿಸಲು ಕ್ರಾಂತಿಕಾರಿ ಮಾರ್ಗವನ್ನು ಆರಿಸಿಕೊಳ್ಳುತ್ತದೆ ಎಂದು ಮಾರ್ಕ್ಸ ಪ್ರತಿಪಾದಿಸಿದ್ದ, ಒಕ್ಕೂಟ ವ್ಯವಸ್ಥೆಯಲ್ಲಿ ಆರ್ಥಿಕ ಪರಿಸ್ಥಿತಿಯೇ ಜೀವನದ ನಿರ್ಧಾರಕ ಅಂಶವಾಗಿರುತ್ತದೆ ಮತ್ತು ಇದಕ್ಕೆ ಪೂರಕವಾಗಿ ಇತಿಹಾಸದುದ್ದಕ್ಕೂ ಉತ್ಪಾದನ ಪದ್ಧತಿಗಳು ಬದಲಾವಣೆಗೊಳ್ಳಲ್ಪಡುತ್ತಿರುತ್ತವೆ ಎಂಬುದು ಮಾರ್ಕ್ಸನ ಎರಡು ಪ್ರಮುಖ ಚಿಂತನೆಗಳು ಸಹ ಆತ ಆವಿಷ್ಕಾರ ಮಾಡಿದ್ದಲ್ಲ, ಅದು ಅನಾದಿಕಾಲದಿಂದಲೂ ಚಾಲ್ತಿಯಲ್ಲಿದ್ದವು.

ಹಾಗಿದ್ದರೆ ಮಾರ್ಕ್ಸಿಸಂನ ವೈಶಿಷ್ಟತೆ ಇರುವುದು ವರ್ಗಕ್ಕಿಂತಲೂ ವರ್ಗ ಹೋರಾಟ ಮುಖ್ಯ ಎನ್ನುವ ನೀತಿಯಲ್ಲೇ? ಆದರೆ ಬಹುಶಃ ಇದು ಕೂಡ ಹಳೆಯದು. ಉದಾಹರಣೆಗೆ ಒಲಿವರ್ ಗೋಲ್ಡ್‌ಸ್ಮಿತ್‌ನ 'ಪಾಳುಬಿದ್ದ ಹಳ್ಳಿ'ಯ ಕವನದ ಸಾಲುಗಳಲ್ಲಿ, ಜಾನ್ ಮಿಲ್ಟನ್‌ನ 'ಕಾಮೂಸ್' ಪದ್ಯದಲ್ಲಿ, ಶೇಕ್ಸಪಿಯರ್‌ನ 'ಕಿಂಗ್‌ಲಿಯರ್' ನಾಟಕದಲ್ಲಿ ವರ್ಗ ಹೋರಾಟದ ಮಾತುಗಳು ಕಾಣಿಸಿಕೊಳ್ಳುತ್ತವೆ. 'ಬಡವರ ರಕ್ತವನ್ನು ಬಸಿದು ಸೌಧವನ್ನು ಕಟ್ಟಿದ ಜಮೀನ್ದಾರನ ಆಸ್ತಿಯೇ ಸಾಮಾಜಿಕ ಸಂಘರ್ಷದ ಕೇಂದ್ರವಾಗುತ್ತದೆ' ಎಂದು ವಾಲ್ಟೇರ್ ಹೇಳುತ್ತಾನೆ. ಆದರೆ ಪ್ರಮುಖವಾದ ವ್ಯತ್ಯಾಸವೆಂದರೆ ಸಾವಯವವಾದ ಸಾಮೂಹಿಕ ಒಗ್ಗಟ್ಟಿನಲ್ಲಿ ಮಾನವ ನಾಗರಿಕತೆಯು ರೂಪುಗೊಳ್ಳುತ್ತದೆ ಎಂದು ಅನೇಕ ಸಾಮಾಜಿಕ ಚಿಂತಕರು ಪರಿಭಾವಿಸಿದರೆ ಮಾರ್ಕ್ಸ ಸಾಮೂಹಿಕ ಗುಂಪಿನ ಭಿನ್ನತೆಯಲ್ಲಿ ನಾಗರಿಕತೆಯು ರೂಪುಗೊಳ್ಳುತ್ತದೆ ಎಂದು ಪ್ರತಿಪಾದಿಸುತ್ತಾನೆ. ಬಂಡವಾಳಗಾರನು ದುಡಿಯುವ ವರ್ಗಗಳ ದಿನಗೂಲಿಯನ್ನು ಕನಿಷ್ಠ ಮಟ್ಟದಲ್ಲಿ ಮುಂದುವರೆಸಿ ತನ್ನ ವ್ಯಾಪಾರದ ಹಿತಾಸಕ್ತಿಗಳನ್ನು ಮೇಲ್ಮಟ್ಟಕ್ಕೇರಿಸಿಕೊಳ್ಳಲು ಹವಣಿಸುತ್ತಾನೆ ಎನ್ನುವುದು ಮಾರ್ಕ್ಸನ ವಾದ" ಎಂದು ಬರೆಯುತ್ತಾನೆ.

ಆದರೆ ಇಂದಿನ ನವಉದಾರೀಕರಣದ ಕಾಲಘಟ್ಟದಲ್ಲಿ ಕೇಂದ್ರದಲ್ಲಿ ಫ್ಯಾಸಿಸ್ಟ್ ಬಿಜೆಪಿ ಪಕ್ಷವು ಸಂಪೂರ್ಣ ಬಹುಮತದೊಂದಿಗೆ ಅಧಿಕಾರದಲ್ಲಿರುವಂತಹ ಸಂದರ್ಭದಲ್ಲಿ, ಧಾರ್ಮಿಕ ಮತಾಂಧತೆ ಅಟ್ಟಹಾಸದ, ಇಡೀ ಸರ್ಕಾರಿ ಉದ್ದಿಮೆಗಳನ್ನು ಮುಂದಿನ ವರ್ಷಗಳಲ್ಲಿ ಕ್ರಮೇಣ ಖಾಸಗೀಕರಣಗೊಳಿಸುವ ಬೃಹತ್ ಯೋಜನೆಯ ಅನುಷ್ಠಾನದಲ್ಲಿರುವ ಮೋದಿಯ ರಾಜ್ಯಭಾರದಲ್ಲಿ ನಮ್ಮಲ್ಲಿನ ಎಡಪಂಥೀಯ ಪಕ್ಷಗಳು ಮತ್ತಷ್ಟು ತೀವ್ರತೆಯಿಂದ, ಈಗಿನ ಸವಕಲು ಮಾರ್ಗವನ್ನು ಕೈಬಿಟ್ಟು ವಿಭಿನ್ನ ಚಿಂತನೆಗಳಿಂದ ನಿರಂತರ ಹೋರಾಟಗಳನ್ನು ಕಟ್ಟುವ, ಮುಂದಿನ ದಶಕಕ್ಕೆ ಜನಪರ ರಾಜಕೀಯ ತಳಹದಿಯನ್ನು ರೂಪಿಸುವಂತಹ ವಿವಿಧ ಮಾಡೆಲ್‌ಗಳನ್ನು ಇಷ್ಟರಲ್ಲಾಗಲೇ ಕಟ್ಟಬೇಕಿತ್ತು, ತಮ್ಮ ಮಡಿವಂತಿಕೆಯನ್ನು ಬಿಟ್ಟು ಸಮಾನಮನಸ್ಕರೊಂದಿಗೆ ಒಳಗೊಳ್ಳುವ ಪ್ರಕ್ರಿಯೆಯನ್ನು ಈಗಾಗಲೇ ಶುರುಮಾಡಬೇಕಿತ್ತು. ಆದರೆ ಇದಾವುದೂ ಕಾಣುತ್ತಿಲ್ಲ, ಚುನಾವಣಾ ಸೋಲುಗಳಿಂದ ಸಂಪೂರ್ಣ ನಿಶ್ಶಕ್ತಿಗೊಂಡಂತೆ ಕಾಣುತ್ತಿರುವ ಇಲ್ಲಿನ ಎಡಪಕ್ಷಗಳು ಮರುಚೇತನ ಪಡೆದುಕೊಳ್ಳುವ ಯಾವ ಲಕ್ಷಣಗಳೂ ಸದ್ಯಕ್ಕಂತೂ ಕಾಣುತ್ತಿಲ್ಲ, ಈ ಹಿನ್ನಡೆಗಳೇ ನಮ್ಮಲ್ಲಿ ಪದೇಪದೇ ಎಡಪಕ್ಷಗಳ ಕುರಿತಾದ ಭ್ರಮನಿರಸನವನ್ನು ಮೂಡಿಸುತ್ತವೆ. ಈ ಎಡಪಂಥೀಯ ಪಕ್ಷಗಳ ಬಿಕ್ಕಟ್ಟು ಆಂತರಿಕವಾಗಿರುವುದು ಎಷ್ಟು ನಿಜವೋ ಈ ನವಉದಾರೀಕರಣದ ಕಾಲದಲ್ಲಿ ಬಳಸಬೇಕಾದ ಸಮಕಾಲೀನ ನುಡಿಕಟ್ಟುಗಳಿಗಾಗಿ ಇವರು ಇನ್ನೂ ತಡಕಾಡುತ್ತಿರುವುದು ಕೂಡ ನಮ್ಮ ಕಣ್ಣ ಮುಂದಿದೆ.

'Theses on Feuerbach'ನಲ್ಲಿ ತರುಣ ಮಾರ್ಕ್ಸ "ಮನುಷ್ಯರು ವ್ಯವಸ್ಥೆಯ, ಸಂದರ್ಭಗಳ, ಪಾಲನೆ ಮತ್ತು ಪೋಷಣೆಯ ಉತ್ಪನ್ನಗಳು ಹಾಗೂ ಅದರ ಶಿಶುಗಳು ಎನ್ನುವ ಜಡವಾದ ಭೌತಿಕವಾದದ ತತ್ವಗಳು ಈಗ ಕೊಂಚ ಬದಲಾಗಿ ಮನುಷ್ಯರು ಬೇರೊಂದು ವ್ಯವಸ್ಥೆಯ, ಬದಲಾವಣೆಗೊಂಡ ಪೋಷಣೆಯ ನೀತಿಗಳ ಉತ್ಪನ್ನಗಳು ಎಂದು ಹೇಳುತ್ತಿದ್ದಾರೆ. ಆದರೆ ಇವರು ಮರೆತಿರುವುದೇನೆಂದರೆ ಈಗ ಮನುಷ್ಯರು ಈ ವ್ಯವಸ್ಥೆಯನ್ನು, ಸಂದರ್ಭಗಳನ್ನು ಬದಲಾಯಿಸುತ್ತಾರೆ, ಮತ್ತು ಶಿಕ್ಷಕನಿಗೆ ಶಿಕ್ಷಣ ಕೊಡುವುದು ಅವಶ್ಯಕವಾಗಿದೆ" (ಮಾರ್ಕ್ಸ ಮತ್ತು ಎಂಗೆಲ್ಸ್, 1978: 144) ಎಂದು ಹೇಳುತ್ತಾನೆ.

ಇದು ಬಹಳ ಮುಖ್ಯ.

■ ಬಿ.ಶ್ರೀಪಾದ ಭಟ್

ನೋಟು ರದ್ದತಿ: ಯಾರಿಗೆ ಲಾಭ ಯಾರಿಗೆ ನಷ್ಟ



■ ಸುರೇಶ್ ಭಟ್ ಬಾಕ್ರಬೈಲ್

ಮಾಧ್ಯಮಗಳನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡು ತನ್ನ ಸರ್ಕಾರ ದಕ್ಷ, ಬಲಿಷ್ಠ ಭ್ರಷ್ಟಾಚಾರಮುಕ್ತ ಎಂಬ ಭ್ರಮೆಯೊಂದನ್ನು ಜನರ ಮಧ್ಯೆ ಬಿತ್ತಿರುವ ಮೋದಿ ಈಗ ಅದನ್ನು ಉಳಿಸಿಕೊಳ್ಳುವುದರಲ್ಲಿ ಬ್ಯುಸಿಯಾಗಿದ್ದಾನೆ. ಆರ್ಥಿಕ ಕ್ಷೇತ್ರದಲ್ಲಿ ಒಂದಾದ ಮೇಲೊಂದರಂತೆ ವೈಫಲ್ಯಗಳಾಗುತ್ತಿದ್ದಂತೆ ಮೋದಿ ಸರ್ಕಾರ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಳನ್ನು ರೂಪಿಸುತ್ತಿದೆ. ಹೀಗಾಗಿಯೆ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲವೊಂದು ಚಟುವಟಿಕೆಗಳು ಭಾರಿ ಚುರುಕು ಪಡೆದುಕೊಂಡಿವೆ. ಒಂದುಕಡೆ ದಲಿತ, ಅಲ್ಪಸಂಖ್ಯಾತರ ದಮನ ನಡೆಯುತ್ತಿದ್ದರೆ ಇನ್ನೊಂದು ಕಡೆ ಬಿಜೆಪಿಯೇತರ ರಾಜ್ಯಗಳನ್ನು ಕಬ್ಜಾ ಮಾಡಿಕೊಳ್ಳಲು ನಾನಾ ಅನೈತಿಕ ಕಸರತ್ತುಗಳು ಜಾರಿಯಲ್ಲಿವೆ. ಕಳೆದ ವರ್ಷದ ನವೆಂಬರ್ 8ರಂದು ಮೋದಿ ಇದ್ದಕ್ಕಿದ್ದಂತೆ 'ಭ್ರಷ್ಟಾಚಾರ ಮುಕ್ತಿ'ಗೆ ಎನ್ನಲಾದ ನೋಟು ರದ್ದತಿಯನ್ನು ಘೋಷಿಸಿದಾಗ ಇದಕ್ಕೂ ಸಂಘ ಪರಿವಾರದ ಘೋಷಿತ ಗುರಿಯಾದ 'ಕಾಂಗ್ರೆಸ್ ಮುಕ್ತ' (ಅರ್ಥಾತ್ 'ಪ್ರತಿಪಕ್ಷ ಮುಕ್ತ') ಹಿಂದೂ ರಾಷ್ಟ್ರ ಸ್ಥಾಪನೆಗೂ ಸಂಬಂಧವಿರುವ ಕುರಿತು ಅನುಮಾನಗಳು ವ್ಯಕ್ತವಾಗಿದ್ದವು. ನೋಟು ರದ್ದತಿಯ ನಂತರದ ವಿದ್ಯಮಾನಗಳನ್ನು, ಅದರಲ್ಲೂ ವಿಶೇಷವಾಗಿ ಕೇವಲ ಪ್ರತಿಪಕ್ಷಗಳ ನಾಯಕರುಗಳನ್ನು ಗುರಿಯಾಗಿಸಿದ ಐಟಿ ದಾಳಿಗಳನ್ನು ನೋಡಿದರೆ ಆ ಅನುಮಾನಗಳು ದೃಢವಾಗುವಂತಿವೆ. ಅಂದಹಾಗೆ ನೋಟು ರದ್ದತಿಯನ್ನು ಆರ್‌ಬಿಐ ಗವರ್ನರ್ ಬದಲು ಖುದ್ದು ಮೋದಿ ಘೋಷಿಸಿರುವುದು ತನ್ನ ತಥಾಕಥಿತ 'ಭ್ರಷ್ಟಾಚಾರ ವಿರೋಧಿ' ಇಮೇಜನ್ನು ಬೆಳೆಸುವ ಉದ್ದೇಶದಿಂದ ಎಂದು ಬೇರೆ ಹೇಳಬೇಕಾಗಿಲ್ಲ. ನೋಟು ರದ್ದತಿ ಮತ್ತು ಇತ್ತೀಚಿನ ಜಿಎಸ್‌ಟಿ ಯೋಜನೆಗಳು ಯಶಸ್ವಿಯಾಗಿರುವುದಷ್ಟೆ ಅಲ್ಲ, ಜನರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ ಎಂದು ಮೋದಿ, ಆತನ ವಿತ್ತಮಂತ್ರಿ ಮತ್ತಾತನ ತುತ್ತೂರಿ ಮಾಧ್ಯಮಗಳು ಅವ್ಯಾಹತ ಪ್ರಚಾರ ಮಾಡುತ್ತಿದ್ದಾರೆ. ಅವರ ಈ ದಣಿವಿಲ್ಲದ ಹೇಳಿಕೆಗಳು 'ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಕೊನೆಗೆ ಜನ ಅದನ್ನು ನಂಬುತ್ತಾರೆ' ಮತ್ತು 'ಸಮ್ಮತಿ ಉತ್ಪಾದನೆ' ಎಂಬ ತತ್ವಗಳಿಗೆ ಅನುಗುಣವಾಗಿ ಇವೆ. ಆದರೆ ಇಂದು ಆರ್ಥಿಕ ಕ್ಷೇತ್ರದ ಹಲವಾರು ಸೂಚಕಗಳು ನೋಟು ರದ್ದತಿಯ ವೈಫಲ್ಯವನ್ನು ಸಾರಿ ಹೇಳುತ್ತಿವೆ. ನೋಟು ರದ್ದತಿ ಮತ್ತು ಜಿಎಸ್‌ಟಿಗಳ ದುಷ್ಪರಿಣಾಮವನ್ನು ಅನುಭವಿಸುತ್ತಿರುವ ಸಾಮಾನ್ಯ ಜನತೆಗೂ ಮೋದಿ, ಜೇಟ್ಲಿ ಮಾತುಗಳ ಪೊಳ್ಳುತನದ ಅರಿವಾಗತೊಡಗಿರುವುದಕ್ಕೆ ಸಾಕ್ಷಿಯಾಗಿದೆ ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ 'ಗ್ರಾಹಕ ವಿಶ್ವಾಸ ಸಮೀಕ್ಷೆ' (Consumers Confidence Survey).


ಗ್ರಾಹಕ ವಿಶ್ವಾಸ ಸಮೀಕ್ಷೆ ಏನು ಹೇಳುತ್ತದೆ?

ಭಾರತೀಯ ರಿಸರ್ವ್ ಬ್ಯಾಂಕು ದೇಶದ ಆರ್ಥಿಕಸ್ಥಿತಿ ಕುರಿತು ಆಗಾಗ ಜನಾಭಿಪ್ರಾಯವನ್ನು ಸಂಗ್ರಹಿಸುತ್ತಿರುತ್ತದೆ. ಇದನ್ನು 'ಗ್ರಾಹಕ ವಿಶ್ವಾಸ ಸಮೀಕ್ಷೆ' ಎಂದು ಕರೆಯಲಾಗುತ್ತದೆ. ಉತ್ತರಗಳನ್ನು ಆಧರಿಸಿ 'ಪ್ರಸಕ್ತ ಸ್ಥಿತಿ ಸೂಚಕ'ವನ್ನು (Current Situation Index; ಸಿಎಸ್‌ಐ) ತಯಾರಿಸಲಾಗುತ್ತದೆ. ಸಿಎಸ್‌ಐ 100ಕ್ಕೆ ಮೇಲಿದ್ದರೆ ಜನರಲ್ಲಿ ಆಶಾವಾದ ಇರುವುದನ್ನೂ, 100ಕ್ಕೆ ಕೆಳಗಿದ್ದರೆ ಜನರಲ್ಲಿ ನಿರಾಶೆಯ ಭಾವನೆಯನ್ನೂ ಸೂಚಿಸುತ್ತದೆ. ಮೋದಿ ಸರ್ಕಾರ ಬಂದ ಹೊಸದರಲ್ಲಿ 2014ರ ಸೆಪ್ಟೆಂಬರ್‌ನಲ್ಲಿ ಸೂಚ್ಯಂಕ 108 ಇದ್ದುದು ನಿರೀಕ್ಷಿತವೆ ಆಗಿತ್ತು, ಆದರೆ ಕಳೆದ ಮೂರು ವರ್ಷಗಳಲ್ಲಿ ಇದೇ ಸೂಚ್ಯಂಕ 96.8ಕ್ಕೆ ಕುಸಿದಿದೆ. ಇತ್ತೀಚಿನ ಸಮೀಕ್ಷೆ ಪ್ರಕಾರ ಬಹುತೇಕ ಭಾರತೀಯರ ಅಭಿಪ್ರಾಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಮೊದಲಿಗಿಂತ ತುಂಬಾ ಹದಗೆಟ್ಟಿದೆ. ಇತ್ತೀಚಿನ ಸಮೀಕ್ಷೆಯನ್ನು ಆರು ಮಹಾನಗರಗಳಲ್ಲಿ ನಡೆಸಲಾಗಿತ್ತು, ಉದ್ಯೋಗ, ಆದಾಯ, ಉಪಭೋಗ, ಬೆಲೆಗಳೆ ಮೊದಲಾದ ಆರ್ಥಿಕತೆಯ ಸೂಚಕಗಳ ಬಗ್ಗೆ ಬೆಂಗಳೂರು, ಚೆನ್ನೈ, ಹೈದರಾಬಾದ್, ಕೋಲ್ಕತ್ತ ಮುಂಬಯಿ ಮತ್ತು ನವದೆಹಲಿಗಳಲ್ಲಿ ಜನರ ಅನುಭವಗಳನ್ನು ದಾಖಲಿಸಲಾಗಿತ್ತು. ಸಮೀಕ್ಷೆ ಪರೋಕ್ಷವಾಗಿ ಸೂಚಿಸುತ್ತಿರುವುದೇನೆಂದರೆ ಮತದಾರರು ಎಚ್ಚೆತ್ತುಕೊಳ್ಳುತ್ತಿದ್ದಾರೆ; ಭ್ರಮಾಲೋಕದಿಂದ ಹೊರಬಂದು ವಾಸ್ತವವನ್ನು ಅರಿತುಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ.

ಬಚ್ಚಿಟ್ಟ ಕಪ್ಪುಹಣವೆಲ್ಲ ಸಿಕ್ಕಿತೆ?

ನೋಟು ರದ್ದತಿ ಬಚ್ಚಿಟ್ಟ ಕಪ್ಪುಹಣವನ್ನೆಲ್ಲ ಬಯಲಿಗೆಳೆಯಲಿದೆ ಎಂಬುದು ಮೋದಿ ಸರ್ಕಾರದ ಪ್ರಮುಖ ಘೋಷಣೆಗಳಲ್ಲೊಂದಾಗಿತ್ತು, ಆದರೆ ಈಗ ಬಾಯ್ಬಿಟ್ಟರೆ ಖಂಡಿತ ಮುಜುಗರಕ್ಕೆ ಒಳಗಾಗುವ ಪರಿಸ್ಥಿತಿ ಇದೆ. ಇಂದು, ಅಂದರೆ ರೂ. 500 ಮತ್ತು ರೂ. 1000 ಮುಖಬೆಲೆಯ ನೋಟುಗಳನ್ನು ರದ್ದುಪಡಿಸಿದ 9 ತಿಂಗಳ ನಂತರ, ಒಟ್ಟು ಚಲಾವಣೆಯಲ್ಲಿದ್ದ ರೂ 15.44 ಲಕ್ಷ ಕೋಟಿ ಮೌಲ್ಯದ ಆ ನೋಟುಗಳಲ್ಲಿ ಎಷ್ಟು ಮರಳಿಬಂದಿದೆ ಎಂಬುದು ಇದುವರೆಗೂ ಗೊತ್ತಾಗಿಲ್ಲ ಎನ್ನುತ್ತಿದೆ ಮೋದಿ ಸರ್ಕಾರ! ವಿತ್ತಮಂತ್ರಿ ಇತ್ತೀಚೆಗೆ ಸಂಸತ್ತಿಗೆ ತಿಳಿಸಿರುವಂತೆ ರಿಸರ್ವ್ ಬ್ಯಾಂಕು ಈಗ ಹಳೆ ನೋಟುಗಳ ಪ್ರಮಾಣವನ್ನು ಸಮಂಜಸಗೊಳಿಸುತ್ತಿದೆಯಂತೆ. ಅಂದರೆ ಮತ್ತೊಮ್ಮೆ ಲೆಕ್ಕ ಮಾಡಲಾಗುತ್ತಿದೆಯಂತೆ. ಇರುವ ಗಣತಿಯಂತ್ರಗಳು ಸಾಕಾಗದಿರುವುದರಿಂದ ಇದೀಗ ಹೊಸಾ ಗಣತಿಯಂತ್ರಗಳ ಖರೀದಿಗೆ ಟೆಂಡರ್ ಕರೆಯಲಾಗಿದೆಯಂತೆ!

ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಜನವರಿ 2017ರ ತನಕ ಶೇಕಡಾ 90ಕ್ಕೂ ಹೆಚ್ಚು ಹಳೆನೋಟುಗಳು



ಬ್ಯಾಂಕುಗಳಿಗೆ ಮರಳಿ ಬಂದಿವೆ. ಆದರೆ ಭಾರತೀಯ ರಿಸರ್ವ್ ಬ್ಯಾಂಕಿನ ಅಂಕಿಅಂಶಗಳನ್ನು ಪರಿಶೀಲಿಸಿದಾಗ ಶೇಕಡಾ 98.8ರಷ್ಟು ಹಳೆ ನೋಟುಗಳು ಮರಳಿಬಂದಿರುವುದಾಗಿ ತಿಳಿದುಬರುತ್ತದೆ. ಇದರರ್ಥ ಇನ್ನುಳಿದಿರುವುದು ಕೇವಲ ಶೇಕಡಾ 1.2 ಅಥವಾ ಹೆಚ್ಚೆಂದರೆ ಶೇಕಡಾ 10ರಷ್ಟು ಹಳೆ ನೋಟುಗಳು. ಹೀಗಿರುವಾಗ ಹೊಸ ಯಂತ್ರಗಳ ಅಗತ್ಯ ಈಗೇಕೆ ಹುಟ್ಟಿಕೊಂಡಿತು? ಯಂತ್ರಗಳ ಅಭಾವವಿರುವುದು ಇವರಿಗೆ ಈಗ, 9 ತಿಂಗಳ ನಂತರವಷ್ಟೆ ತಿಳಿಯಿತೆ? ಹಾಗಾದರೆ ಇಲ್ಲಿಯವರೆಗೆ ಇವರು ಏನು ಮಾಡುತ್ತಿದ್ದರು? ಎಂದು ಮುಂತಾದ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಇಲ್ಲಿ ಇನ್ನೂ ಒಂದು ಕುತೂಹಲಕಾರಿ ಅಂಶ ಏನೆಂದರೆ ಕಳೆದ ನವಂಬರ್‌ನಲ್ಲೆ ವರದಿಯಾಗಿರುವಂತೆ ವಾಪಾಸು ಬಂದ ಹಳೆ ನೋಟುಗಳನ್ನೆಲ್ಲ ಹರಿದು ಚೂರುಮಾಡಿ ಚಿಕ್ಕ ಇಟ್ಟಿಗೆಗಳಾಗಿ ಪರಿವರ್ತಿಸುವ ಗುತ್ತಿಗೆಯನ್ನು ಕೇರಳದ ಕಂಪೆನಿಯೊಂದಕ್ಕೆ ನೀಡಲಾಗಿತ್ತು, ಇದು ನಿಜವೆ ಆಗಿದ್ದಲ್ಲಿ ಇನ್ನಷ್ಟು ಪ್ರಶ್ನೆಗಳು ಏಳುತ್ತವೆ. ಇಟ್ಟಿಗೆಗಳಾಗಿ ಪರಿವರ್ತಿಸುವ ಕಾರ್ಯವನ್ನು ನಿಲ್ಲಿಸಲಾಗಿದೆಯೆ? ಹೌದಾದರೆ ಯಾವತ್ತಿನಿಂದ? ಈಗ ಯಾವುದನ್ನು ಸಮಂಜಸಗೊಳಿಸ ಲಾಗುತ್ತಿದೆ? ಉಳಿದಿರುವ ನೋಟುಗಳನ್ನು ಮತ್ತೆ ಲೆಕ್ಕ ಹಾಕುವುದರಿಂದ ಏನು ಉಪಯೋಗ?

ಅಧಿಕೃತ ಅಂಕಿಅಂಶಗಳ ಪ್ರಕಾರ ಜನವರಿ 13ರ ತನಕ ಮರಳಿ ಬರದ ಹಳೆ ನೋಟುಗಳ ಮೌಲ್ಯ ರೂ. 18000 ಕೋಟಿಯಷ್ಟಿತ್ತು, ಇದು ಸಹಕಾರಿ ಬ್ಯಾಂಕುಗಳು ಮತ್ತು ಸಾರ್ವಜನಿಕರ (ಕೆಲವು ನಿರ್ದಿಷ್ಟ ವರ್ಗಗಳ ಜನರಿಗೆ ಜನವರಿ 1ರಿಂದ ಮಾರ್ಚ್ 31ರ ತನಕ ಹಳೆ ನೋಟುಗಳನ್ನು ಮರಳಿಸುವ ಅವಕಾಶ ಒದಗಿಸಲಾಗಿತ್ತು) ಬಳಿ ಉಳಿದಿರುವ ಹಳೆ ನೋಟುಗಳ ಮೊತ್ತ, ಸಹಕಾರಿ ಬ್ಯಾಂಕುಗಳಿಗೆ ಈಗ ಹಳೆ ನೋಟುಗಳನ್ನು ಮರಳಿಸಲು ಅನುಮತಿ ನೀಡಲಾಗಿದೆ. ಆದರೆ ಅದರ ಮೌಲ್ಯ ರೂ. 8000 ಕೋಟಿ ಮೀರುವುದಿಲ್ಲ, ಹೀಗಾಗಿ ಸಾರ್ವಜನಿಕರ ಬಳಿ ಇರುವ ಹಳೆ ನೋಟುಗಳ ಬೆಲೆ ರೂ. 10,000 ಕೋಟಿ ಮೀರಲಾರದು. ಇದರರ್ಥ ಒಂದೇ. ಬಹುತೇಕ ಕಪ್ಪುಹಣ ಬ್ಯಾಂಕುಗಳಿಗೆ ಮರಳಿದ್ದು ಅದನ್ನು ಹೊಸ ನೋಟುಗಳಿಗೆ (ಬಿಳಿ ಹಣ) ಬದಲಾಯಿಸಿ ಆಗಿರಬೇಕು!

ಖೋಟಾ ನೋಟುಗಳು

ಡಿಸೆಂಬರ್ 12ರ ತನಕ ನಿಯಮಿತವಾಗಿ ಹಳೆ ಮತ್ತು ಹೊಸ ನೋಟುಗಳ ಮಾಹಿತಿ ನೀಡುತ್ತಿದ್ದ ಆರ್‌ಬಿಐ ಆ ಬಳಿಕ ಅದನ್ನು ನಿಲ್ಲಿಸಿದೆ. ಕೊನೆ ದಿನಾಂಕವಾದ ಮಾರ್ಚ್ 31ರ ತನಕ ಮುಂದುವರಿಸದಿರುವುದಕ್ಕೆ ಸಮಂಜಸ ಕಾರಣಗಳನ್ನು ನೀಡಲಾಗಿಲ್ಲ, ಇದನ್ನು ನೋಡುವಾಗ ಸಹಜವಾಗಿಯೆ ಚಲಾವಣೆಯಲ್ಲಿ ಇದ್ದುದಕ್ಕಿಂತಲೂ ಹೆಚ್ಚು ನೋಟುಗಳು ಮರಳಿ ಬಂದಿವೆಯೆ ಎಂಬ ಸಣ್ಣದೊಂದು ಅನುಮಾನ ಮೂಡುತ್ತದೆ. ಒಂದುವೇಳೆ ಇದು ನಿಜವಿದ್ದಲ್ಲಿ ಬ್ಯಾಂಕುಗಳು ಖೋಟಾ ನೋಟುಗಳನ್ನು ಸ್ವೀಕರಿಸಿರಬೇಕು ಎಂದಾಗುತ್ತದೆ. ಇದಕ್ಕೆ ಕೆಲಸದ ಒತ್ತಡ ಕಾರಣವಿರಬಹುದು. ಒಳಸಂಚಿನ ಸಾಧ್ಯತೆಗಳನ್ನೂ ತಳ್ಳಿಹಾಕಲಾಗುವುದಿಲ್ಲ, ಯಾವ ಬ್ಯಾಂಕುಗಳಲ್ಲಿ ಹೀಗಾಗಿದೆ ಎಂದು ಪತ್ತೆಹಚ್ಚಲು ತುಂಬಾ ಕಷ್ಟವಿದೆ. ಸರ್ಕಾರದ ಅಂಕಿಅಂಶಗಳ ಪ್ರಕಾರ ರೂ. 400 ಕೋಟಿ ಬೆಲೆಯ ಖೋಟಾನೋಟುಗಳು ಚಲಾವಣೆಯಲ್ಲಿ ಇದ್ದವು. ಸಿಕ್ಕಿಬೀಳದ ಖೋಟಾನೋಟುಗಳ ಪ್ರಮಾಣವನ್ನು ಇದಕ್ಕೆ ಸೇರಿಸಿದಾಗ ಮೊತ್ತ ರೂ. 10,000 ಕೋಟಿ ಮೀರಬಹುದು. ಇದೆಲ್ಲವೂ ಬ್ಯಾಂಕುಗಳಿಗೆ ಮರಳಿಬಂದಿದೆ ಎಂದಾದರೆ ಅಚ್ಚು ಹಾಕಿರುವುದಕ್ಕಿಂತ ಹೆಚ್ಚು ನೋಟುಗಳು ಮರಳಿಬಂದಂತಾಯಿತು. ಇದೊಂದು ಭಾರಿ ಗಂಭೀರ ವಿಷಯ. ಈ ಅನುಮಾನವನ್ನು ಇನ್ನಷ್ಟು ಹೆಚ್ಚಿಸುವ ಸಂಗತಿ ಎಂದರೆ ಸರ್ಕಾರ ಹಳೆ ನೋಟುಗಳ ಬದಲಾವಣೆಗೆ ಇನ್ನೊಂದು ಅವಕಾಶ ನೀಡಲು ನಿರಾಕರಿಸಿರುವುದು. ಹಾಗೆ ಮಾಡುವುದರಿಂದ ಕಪ್ಪುಹಣ ಬಯಲಿಗೆಳೆಯುವ ಇಡೀ ಯೋಜನೆ ವಿಫಲವಾಗಲಿದೆ ಎಂಬುದು ಮೋದಿ ಸರ್ಕಾರದ ವಾದ. ವಯಸ್ಸಾದವರು, ಅಶಕ್ತರು ಮುಂತಾದವರು ಕಷ್ಟಪಟ್ಟು ದುಡಿದು ಕೂಡಿಟ್ಟ ಬರೀ ಸುಮಾರು ರೂ. 1000 ಕೋಟಿಯಷ್ಟಿರಬಹುದಾದ ಈ ಹಳೆ ನೋಟುಗಳು ಮರಳಿಬಂದರೆ ಯೋಜನೆ ಅದು ಹೇಗೆ ವಿಫಲವಾಗಲಿದೆ? ಚಲಾವಣೆಯಲ್ಲಿದ್ದ ಹೆಚ್ಚಿನ ಹಳೆ ನೋಟುಗಳು ಅಥವಾ ಚಲಾವಣೆಯಲ್ಲಿ ಇದ್ದುದಕ್ಕಿಂತಲೂ ಹೆಚ್ಚು ನೋಟುಗಳು ಮರಳಿಬಂದಿವೆಯಾದರೆ ಮೋದಿ ಸರ್ಕಾರದ ನೋಟು ರದ್ದತಿ ಯೋಜನೆ ಸಂಪೂರ್ಣ ವಿಫಲವಾಗಿದೆ ಎಂದರ್ಥ. ರೂ. 5-7 ಲಕ್ಷ ಕೋಟಿ ಕಪ್ಪುಹಣ ಸಿಗಲಿದೆ ಎಂದು ಕೊಚ್ಚಿಕೊಂಡವರಿಗೆ ಇದಕ್ಕಿಂತ ದೊಡ್ಡ ಮುಖಭಂಗ ಬೇರೆ ಇದೆಯೆ? ಹೀಗಿರುವಾಗ ನೋಟು ಗಣತಿ ಮುಗಿಯುವುದಾದರೂ ಹೇಗೆ!!!!

ಅತ್ತ ದರಿ ಇತ್ತ ಪುಲಿ

ಚಲಾವಣೆಯಲ್ಲಿದ್ದ ಎಲ್ಲಾ ಹಳೆ ನೋಟುಗಳು ಮರಳಿ ಬರುವುದಿಲ್ಲ; ಮರಳಿ ಬರದ (ಕಪ್ಪು) ಹಣವೆಲ್ಲ ಹೆಚ್ಚುವರಿ ಲಾಭ ಎಂಬುದು ಮೋದಿ ಸರ್ಕಾರದ ಲೆಕ್ಕಾಚಾರವಾಗಿತ್ತೆಂದು ಕಾಣುತ್ತದೆ. ಈ 'ಭಾರಿ ಲಾಭ'ದ ಲೆಕ್ಕಾಚಾರದಲ್ಲಿ ಎಲ್ಲಾ ಹಳೆ ನೋಟುಗಳು ಅಥವಾ ಇರುವುದಕ್ಕಿಂತಲೂ ಹೆಚ್ಚು ನೋಟುಗಳು ಮರಳುವ ಸಾಧ್ಯತೆಯನ್ನು ಪರಿಗಣಿಸದಿರುವುದು ಸ್ಪಷ್ಟವಿದೆ. ಇಂದು ಆರ್‌ಬಿಐ ಬಳಿ ಜಮೆಯಾಗಿರುವ ಇಷ್ಟೊಂದು ದುಡ್ಡಿಗೆ ಅದೀಗ ಬಡ್ಡಿ ಪಾವತಿಸಬೇಕಾಗಿರುವುದರಿಂದ ವಾಸ್ತವದಲ್ಲಿ ಅದರ ಸಾಲಸೋಲಗಳು ಹೆಚ್ಚಿವೆ. ಇಂಥಾ ಪರಿಸ್ಥಿತಿಯಲ್ಲಿ ಮೋದಿ ಸರ್ಕಾರದ ಮುಂದಿರುವ ಎರಡೆ ಎರಡು ಆಯ್ಕೆಗಳೆಂದರೆ ಬಂಡವಾಳ ವೆಚ್ಚದಲ್ಲಿ ಕಡಿತ ಅಥವಾ ಆರ್ಥಿಕ ಕೊರತೆಯಲ್ಲಿ ಹೆಚ್ಚಳ. ಬಂಡವಾಳ ವೆಚ್ಚದಲ್ಲಿ ಕಡಿತ ಮಾಡಿದರೆ ಈಗಾಗಲೆ ಕುಂಟುತ್ತಿರುವ ಆರ್ಥಿಕತೆ ಮುಗ್ಗರಿಸಲಿದೆ. ಆರ್ಥಿಕ ಕೊರತೆ ಹೆಚ್ಚಿಸಿದರೆ ಬಜೆಟಿನ ಮುನ್ನಂದಾಜು ತಲೆಕೆಳಗ...

ರಿಸರ್ವ್ ಬ್ಯಾಂಕಿನ ಡಿವಿಡೆಂಡ್ ಅರ್ಧಕ್ಕರ್ಧ ಕಟ್

ನೋಟು ರದ್ದತಿಯನ್ನು ಅನೇಕ ಖ್ಯಾತ ಆರ್ಥಿ... ಟೀಕಿಸಿದ್ದರೆ ಕೆಲವು ಭಟ್ಟಂಗಿಗಳು ಮಾತ್ರ ... ರಿಸರ್ವ್ ಬ್ಯಾಂಕಿಗೆ ಭಾರಿ ಲಾಭವಾಗಲಿದೆ ... ಕೊಚ್ಚಿಕೊಂಡಿದ್ದರು. ಆದರೆ ಈ ಬಾರಿ ರಿಸರ್ವ್ ... ಡಿವಿಡೆಂಡ್ ಕಳೆದ ಸಾಲಿನ ಅರೆವಾಸಿ... ಇಲ್ಲದಿರುವುದು ನೋಟು ರದ್ದತಿಯ ವೈಫ... ಸೂಚಿಸುತ್ತದೆ. 2015-16ರ ಸಾಲಿನಲ್ಲಿ (ಜೂ... 2016ರ ತನಕ) ರಿಸರ್ವ್ ಬ್ಯಾಂಕು ಸರಕಾರ... 65,786 ಕೋಟಿ ಡಿವಿಡೆಂಡ್ ಪಾವತಿಸಿತ್ತು... ಪ್ರಸಕ್ತ ಸಾಲಿನಲ್ಲಿ (ಜೂನ್ 30, 2017ರ ತನಕ... ರೂ. 30,659 ಕೋಟಿಗಳಿಗೆ ಇಳಿದಿದೆ. ಈ ... ಕಾರಣ ಏನೆಂದು ಅದು ಹೇಳಿಲ್ಲ, ಗಮನಾ... 2014-15ರಲ್ಲಿ ರೂ. 65,896 ಕೋಟಿ ಪಾವತಿ... 2013-14ರಲ್ಲಿ ರೂ. 52,679 ಕೋಟಿ ಪಾವತಿ...

ಆರ್ಥಿಕ ಪರಿಸ್ಥಿತಿ

ನೋಟು ರದ್ದತಿಯ ಉದ್ದೇಶ ಆರ್ಥಿಕಸ್ಥಿ... ಸುಧಾರಿಸಿ ಅದನ್ನು ಮೇಲಕ್ಕೆತ್ತುವುದು ಎಂದು ... ಗವರ್ನರ್ ಹೇಳಿದ್ದ, ಆರ್‌ಬಿಐ ಸಲಹೆಯಂತೆ ... ರದ್ದತಿ ಮಾಡಲಾಯಿತೆಂದು ಮೋದಿ ಸರ್ಕಾರ ... ಆದರೆ ನೋಟು ರದ್ದತಿಯಿಂದ ಆರ್ಥಿಕತೆಯ ... ಕ್ಷೇತ್ರಕ್ಕೆ ಪ್ರಯೋಜನವಾಗಿರುವ ಬಗ್ಗೆ ಖಾತರಿ ಇಲ... ಇತ್ತೀಚಿನ ಅಧಿಕೃತ ಆರ್ಥಿಕ ಸಮೀಕ್ಷೆ ಹೇಳುತ್ತಿ...

ವಾಸ್ತವದಲ್ಲಿ ನೋಟು ರದ್ದತಿ ಪರಿಣಾ... ಔಪಚಾರಿಕ ಹಾಗೂ ಅನೌಪಚಾರಿಕ ಆರ್ಥಿಕತೆ... ಗಂಡಾಂತರಕ್ಕೆ ಸಿಲುಕಿವೆ; 9 ತಿಂಗಳ ಬಳಿಕವೂ ... ಸುಧಾರಿಸಿಲ್ಲ. ಆರ್ಥಿಕ ಬೆಳವಣಿಗೆ ಕುಂಠಿತ... ನಿರುದ್ಯೋಗ ವಿಪರೀತ ಮಟ್ಟಕ್ಕೆ ಬೆಳೆದಿದೆ... ಆದಾಯಗಳಲ್ಲಿ ಹೆಚ್ಚಳ ಆಗಿಲ್ಲ. 2016-17ರ ... ಒಟ್ಟು ಮೌಲ್ಯವರ್ಧನೆ (Gross Value A... ಕಳೆದ ಸಾಲಿಗಿಂತ ಶೇಕಡಾ 1.3ರಷ್ಟು ಕಡಿಮೆ... ಗಣಿಗಾರಿಕೆ, ವಿದ್ಯುತ್, ಮೂಲವ್ಯವಸ್ಥೆ, ... ಸಾಮಗ್ರಿಗಳು, ಗೃಹಬಳಕೆ ವಸ್ತುಗಳು ಮುಂತಾದ ... ಕ್ಷೇತ್ರಗಳಲ್ಲಿ ಸಾಧನೆ ಕಳಪೆಯಾಗಿದೆ. ಕೈಗಾರಿಕಾ ... ಕಳೆದ ವರ್ಷ ಏಪ್ರಿಲ್-ಜೂನ್ ಅವಧಿಯಲ್ಲಿ ... 7.1 ಇದ್ದರೆ ಈ ವರ್ಷ ಶೇಕಡಾ 2ಕ್ಕೆ ಇಳಿದಿದ... ನಾಲ್ಕು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ... ಜೂನ್ ತಿಂಗಳ ಕೈಗಾರಿಕಾ ಉತ್ಪಾದನೆಯಲ್ಲಿ ಕುಸಿ... ಎಂದು ಸರ್ಕಾರದ ಅಂಕಿಅಂಶಗಳೆ ಹೇಳುತ್ತಿವೆ. ... ಏಪ್ರಿಲ್‌ನಲ್ಲಿ ಕೈಗಾರಿಕಾ ಉತ್ಪಾದನೆಯ ಸೂಚ... ಶೇಕಡಾ 3.4 ಏರಿಕೆಯಾಗಿತ್ತು, ಬಳಿಕ ಮೇನಲ್ಲಿ ... 2.8ಕ್ಕೆ ಇಳಿದು ಜೂನ್‌ನಲ್ಲಿ ಶೇಕಡಾ -0.1ಕ್ಕೆ ... ಕಳೆದ ವರ್ಷ ಜೂನ್ ತಿಂಗಳಲ್ಲಿ ಸೂಚ್ಯಂಕ ... 8ರಷ್ಟಿದ್ದುದನ್ನು ಗಮನಿಸಬೇಕು. ಆರ್‌ಬಿಐ ತನ್ನ ... ದಲ್ಲಿ ಇದೇ ಮೊದಲ ಬಾರಿಗೆ ಜೂನ್ 30ಕ್ಕೆ ಅ... ವಾರದ ಆಯವ್ಯಯ ಪಟ್ಟಿಯನ್ನು ಬಿಡುಗಡೆ ಮ...

ಹೂಡಿಕೆ ಮತ್ತು ಉತ್ಪಾದನೆ

ಮೋದಿ ಸರ್ಕಾರದ ಆಡಳಿತದಡಿ ಹೂಡಿ... ಕಡಿಮೆಯಾಗಿದ್ದು ಕೈಗಾರಿಕಾ ಉತ್ಪಾದನೆಯೂ ... ವಾಗಿದೆ. ಮೋದಿಯ 'ಮೇಕ್ ಇನ್ ಇಂಡಿಯ', ... ಅಪ್ ಇಂಡಿಯ' ಇತ್ಯಾದಿ ಯೋಜನೆಗಳು ಮತ್ತು ... ವಿದೇಶೀ ಪ್ರವಾಸಗಳ ಹೊರತಾಗಿಯೂ ಹೂ... ಪ್ರಮಾಣ ಕೆಳಗಿಳಿಯುತ್ತಲೆ ಸಾಗಿದೆ. 2014ರಲ್ಲಿ ... ಮತ್ತು ಜಿಡಿಪಿ ನಡುವಿನ ನಿಷ್ಪತ್ತಿ 30.8 ಪ್ರತಿಶತ... 2016ರಲ್ಲಿ ಅದು 26.6 ಪ್ರತಿಶತಕ್ಕೆ ಕುಸಿದಿದೆ. ಹೂ... ಮಟ್ಟವನ್ನು ತೋರಿಸುವ ಮೂಲವಸ್ತುಗಳ ಉತ್ಪಾ... ಬೆಳವಣಿಗೆ ಕಳೆದ ವರ್ಷ ಶೇಕಡಾ 14.8ರಷ್ಟಿ... ವರ್ಷ ಶೇಕಡಾ 8ಕ್ಕೆ ಇಳಿದಿದೆ. ಬ್ಯಾಂಕುಗಳು ಕೈಗಾ... ನೀಡುವ ಸಾಲದ ಪ್ರಮಾಣದಲ್ಲಿಯೂ ಕುಸಿತ... ಸಂದಾಯವಾಗದ ಸಾಲಗಳ ಹೊರೆಯಿಂದ ತತ್ತ... ಬ್ಯಾಂಕುಗಳು ಈಗ ಸಾಲ ನೀಡುವ ವಿಷಯದಲ್ಲಿ ... ಎಚ್ಚರಿಕೆ ವಹಿಸುತ್ತಿವೆ. ಇದರಿಂದ ಸಣ್ಣ ಮತ್ತು ... ಮಟ್ಟದ ಕೈಗಾರಿಕೆಗಳ ಉತ್ಪಾದನೆಯ ಮೇಲೆ ... ದುಷ್ಪರಿಣಾಮಗಳಾಗಿವೆ.

ಅಧಿಕೃತ ದತ್ತಾಂಶಗಳೆ ಹೇಳುವಂತೆ 2016ರ... ಕೋಟಿ ಜನ ಉದ್ಯೋಗಸ್ಥರಾಗಿದ್ದರೆ 20... ಉದ್ಯೋಗಿಗಳ ಸಂಖ್ಯೆ 8.6 ಕೋಟಿಗೆ ಇಳಿದಿದೆ. 20... ಶೇಕಡಾ 47ರಷ್ಟು ಇದ್ದ ಕಾರ್ಮಿಕರ ಭಾಗವಹಿ... 2017ರಲ್ಲಿ ಶೇಕಡಾ 43.5ಕ್ಕೆ ಇಳಿದಿರುವುದರಿ... ಉಳಿದ ಶೇಕಡಾ 3.5ರಷ್ಟು ಮಂದಿಗೆ ಕೆಲಸ ...


▶▶

EPW
ಸಂ ಪಾ ದ ಕೀ ಯ

ಕೃಪೆ:Economic and Political Weekly
Aug 12, 2017. Vol.52. No. 32

■ ಅನು: ಶಿವಸುಂದರ್

ಎಪ್ಪತ್ತರ ತಿರುವಿನಲ್ಲಿ...



ಇಂದು ನಮ್ಮ ಸ್ವಾತಂತ್ರ್ಯವನ್ನು ಸಂಭ್ರಮಿಸಬೇಕೋ ಅಥವಾ ಕಳೆದುಕೊಂಡ ಅವಕಾಶಗಳ ಬಗ್ಗೆ ಶೋಕಿಸಬೇಕೋ?

1947ರ ಆಗಸ್ಟ್ 15ರ ಮಧ್ಯರಾತ್ರಿ ಹೊತ್ತಿಸಿದ ...ಮಸೆಯ ಬೆಳಕು ಇಂದು ಮಂದವಾಗಿದೆ. ನಮ್ಮ ಪ್ರಥಮ ...ಧಾನಮಂತ್ರಿಗಳಾದ ಜವಹರಲಾಲ್ ನೆಹರೂ ಅವರು ...ತಂತ್ರ್ಯವನ್ನು ಭವಿಷ್ಯದೊಂದಿಗೆ ನಮ್ಮ ಸಾಮೂಹಿಕ ...ಖಾಮುಖಿಯೆಂದು ಬಣ್ಣಿಸಿದ್ದರು; ಭಾರತದ ...ವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾದ ...ಆರ್. ಅಂಬೇಡ್ಕರ್ ಅವರು, ರಾಜಕೀಯ ...ಮಾನತೆಯನ್ನು ಮಾತ್ರ ಖಾತರಿಗೊಳಿಸಿದರೂ ತನ್ನ ...ಗರಿಕರಿಗೆ ಅತ್ಯಂತ ಮೂಲಭೂತವಾದ ಸಾಮಾಜಿಕ ...ತ್ತು ಆರ್ಥಿಕ ಹಕ್ಕುಗಳನ್ನು ನಿರಾಕರಿಸುವ ಜೀವಂತ ...ರುಧ್ಯಗಳ ಬಗ್ಗೆ ಯುವ ಗಣರಾಜ್ಯವನ್ನು ಅಂದೇ ...ಚ್ಚರಿಸಿದ್ದರು. ಸ್ವಾತಂತ್ರ್ಯ ಬಂದದಿನ ಮಹಾತ್ಮ ...ಂಧಿಯವರು ಕೋಮು ಗಲಭೆಗಳಿಂದ ಸಂತ್ರಸ್ತವಾಗಿದ್ದ ...ಖಾಲಿಯಲ್ಲಿ ಏಕಾಂಗಿಯಾಗಿ ನಡೆದಾಡುತ್ತಾ ಕಮ್ಯುನಿಸ್ಟರ ...ಷೆಯಲ್ಲಿಯೇ ಆಜಾದಿ ಜೂಟಾ ಹೈ (ಈ ಸ್ವಾತಂತ್ರ್ಯ ...ಜವಲ್ಲ) ಎಂದು ಪ್ರವಾದಿಯಂತೆ ನುಡಿದಿದ್ದರು.

ಈ ಸಂದಿಗ್ಧತೆ ಮತ್ತು ನಮ್ಮ ಸ್ವಾತಂತ್ರ್ಯವು ...ಜವಾದದ್ದೋ ಅಥವಾ ಭ್ರಮಾತ್ಮಕವಾದದ್ದೋ ಎಂಬ ...ರ್ಚೆಗಳು ಕಳೆದ 70 ವರ್ಷಗಳುದ್ದಕ್ಕೂ ಜೊತೆಜೊತೆಯಾಗಿ ...ಗುತ್ತಲೇ ಬಂದಿವೆ. ಹಾಗೆ ನೋಡಿದರೆ, ಸ್ವಾತಂತ್ರ್ಯದ ...ನೇ ವರ್ಷವನ್ನು ಸಂಭ್ರಮಿಸಲು ಸಹ ಸಾಕಷ್ಟು ...ಷಯಗಳಿವೆ. ನಾವು ಒಂದು ಪ್ರಜಾತಂತ್ರವಾಗಿಯೇ ...ಳಿದಿದ್ದೇವೆ ಮತ್ತು 70 ವರ್ಷಗಳ ಹಿಂದಿನ ಸ್ಥಿತಿಗೆ ...ೋಲಿಸಿದಲ್ಲಿ ಕೋಟ್ಯಾಂತರ ಜನರು ತಮ್ಮ ಬದುಕು ...ತ್ತು ಜೀವನೋಪಾಯಗಳ ಬಗೆಗೆ ನಿರ್ಧಾರ ...ಗೆದುಕೊಳ್ಳುವಲ್ಲಿ ಮೊದಲಿಗಿಂತಲೂ ಹೆಚ್ಚಿಗೆ ...ಬಲೀಕರಣಗೊಂಡಿದ್ದಾರೆ.

ಆದರೆ ಅಷ್ಟೇ ಮಟ್ಟಿಗೆ ದೇಶದ ನಿತ್ಯ ಜೀವನದ ...ರ್ಬರತೆ ದಾರುಣವಾಗುತ್ತಿದ್ದು ದಲಿತರು ದೇಶದ ...ಂಡಿಗಳನ್ನು ಸ್ವಚ್ಛಗೊಳಿಸುತ್ತಾ ಸಾಯುತ್ತಲೇ ಇದ್ದಾರೆ, ...ಹಿಳೆಯರ ಮೇಲೆ ದಾಳಿಗಳಾಗುತ್ತಲೇ ಇವೆ ಮತು ...ುಸ್ಲಿಮರನ್ನು ಹಾದಿಬೀದಿಗಳಲ್ಲಿ ಗುಂಪುಗೂಡಿ ...ಲೆಮಾಡಲಾಗುತ್ತಿದೆ. ಒಂದೆಡೆ ಚುನಾವಣಾ ಆಯೋಗ ...ತ್ತು ಅಂತರಿಕ್ಷ ಸಂಶೋಧನಾ ಸಂಸ್ಥೆ(ಇಸ್ರೋ)ಯಂಥ ...ತಿಷ್ಠಿತ ಸಂಸ್ಥೆಗಳನ್ನು ಹುಟ್ಟುಹಾಕಿದ್ದು ಮಾತ್ರವಲ್ಲದೆ ...ವುಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದೇವೆ. ...ತ್ತೊಂದೆಡೆ ನಮ್ಮ ಗಣರಾಜ್ಯದ ಆರೋಗ್ಯಕ್ಕೆ ...ೂಲಭೂತವಾಗಿ ಅಗತ್ಯವಾಗಿರುವಂಥ ಸಂಸ್ಥೆಗಳನ್ನು ...ರ್ಬಲಗೊಳಿಸುತ್ತಿದ್ದೇವೆ. ಒಂದೆಡೆ ಇತರ ...ಸಹತೋತ್ತರ ದೇಶಗಳು ಎದುರಿಸಿದಂಥ ಅತ್ಯಂತ ...ಾನಾಯ ಧಾರ್ಮಿಕ ಹಿಂಸೆ ಮತ್ತು ತಾರತಮ್ಯಗಳು ...ನ್ನು ದೇಶದಲ್ಲಿ ಸಂಭವಿಸದಂತೆ ಯಶಸ್ವಿಯಾಗಿ ...ತಡೆಗಟ್ಟಿರುವುದು ಮಾತ್ರವಲ್ಲದೆ ನಮ್ಮ ಧಾರ್ಮಿಕ ಬಹುತ್ವ ಮತ್ತು ಸಹಿಷ್ಣುತೆಗಳನ್ನು ಕಾಪಾಡಿಕೊಂಡು ಬಂದಿದ್ದೇವೆ; ಆದರೆ ಜಾತ್ಯತೀತತೆಯನ್ನು ನಾಶಮಾಡಲು ಕಟಿಬದ್ಧವಾಗಿರುವ ಮತ್ತು ಬಹುಸಂಖ್ಯಾತರ ಹಿಂಸಾಚಾರಕ್ಕೆ ಉತ್ತೇಜನ ಕೊಡುವ ಸರ್ಕಾರಗಳನ್ನೇ ಆಯ್ಕೆ ಮಾಡಿ ಅಧಿಕಾರ ಕೊಟ್ಟಿದ್ದೇವೆ.

ಹೀಗಾಗಿ ಇಂದು ನಾವು ನಮ್ಮ ಸ್ವಾತಂತ್ರ್ಯವನ್ನು ಸಂಭ್ರಮಿಸಬೇಕೋ ಅಥವಾ ಕಳೆದುಹೋದ ಅವಕಾಶಗಳನ್ನು ನೆನೆದು ಶೋಕಿಸಬೇಕೋ ಅಥವಾ ಪ್ರಸ್ತುತ ಸವಾಲುಗಳನ್ನು ಗಂಭೀರವಾಗಿ ಎದುರುಗೊಳ್ಳಬೇಕೋ? ವಸಾಹತುಶಾಹಿಯಿಂದ ನಾವು ಪಡೆದ ಸ್ವಾತಂತ್ರ್ಯವನ್ನೂ ಮತ್ತು ಆ ನಂತರದ ಈ ಅವಧಿಯನ್ನು ಹೇಗೆ ಮೌಲ್ಯೀಕರಿಸಬೇಕೆಂಬ ಸಂದಿಗ್ಧತೆ ಅಥವಾ ಕೆಲವರು ಕರೆಯುವಂತೆ ವೈರುಧ್ಯಗಳು, ಒಂದು ಸಕಾರಾತ್ಮಕ ಪರಿಣಾಮವನ್ನಂತೂ ಉಂಟುಮಾಡಿದೆ. ಇದು ವಿವಿಧ ಬಗೆಯ ಉಪಯುಕ್ತ ರಾಜಕೀಯ ವಾಗ್ವಾದಗಳನ್ನೂ ಮತ್ತು ವಿದ್ವತ್ಪೂರ್ಣ ಚರ್ಚೆಗಳನ್ನಂತೂ ಹುಟ್ಟುಹಾಕಿದೆ ಮತ್ತು ನಮ್ಮ ತಿಳಿವಳಿಕೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿದೆ.

ಈ ಪತ್ರಿಕೆಯೂ ಸಹ ಅಂಥ ಎಲ್ಲಾ ವಾಗ್ವಾದ ಮತ್ತು ಚರ್ಚೆಗಳಿಗೆ ಬಹಿರಂಗ ವೇದಿಕೆಯಾಗುತ್ತಲೇ ಬಂದಿದೆ. ಈ ವಿಷಯಗಳ ಬಗ್ಗೆ ಈ ಪತ್ರಿಕೆಗೆ ಬರೆಯುವ ಲೇಖಕರ ಬಳಗ ಹಲವು ಪಟ್ಟು ಹೆಚ್ಚಾಗಿದೆ. ಜೊತೆಗೆ ಅದು ನಮ್ಮ ಶೈಕ್ಷಣಿಕ ಲೋಕ, ಸರ್ಕಾರ ಮತ್ತು ಸಮಾಜದ ಎಲ್ಲಾ ವಿಭಾಗಗಳಿಂದಲೂ ಹರಿದುಬರುತ್ತಿದೆ. ಒಂದು ರೀತಿಯಲ್ಲಿ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಾರ್ವಜನಿಕ ನೀತಿಗಳ ಬಗೆಗಿನ ವಾಗ್ವಾದಗಳು ಹುಲುಸಾಗಿ ಬೆಳೆಯುತ್ತಿವೆ. ಹಾಗಿದ್ದೂ ವಿದ್ವತ್ ಲೋಕ ಮತ್ತು ಸಾರ್ವಜನಿಕ ನೀತಿಗಳ ನಡುವಿನ, ವಾಗ್ವಾದಗಳು ಮತ್ತು ರಾಜಕೀಯದ ನಡುವಿನ ಅಂತರ ಮಾತ್ರ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಸರ್ಕಾರದ ನೀತಿಗಳ ಸಾರ್ವಜನಿಕ ಚಿಂತನೆಗಳ ರೂಪಣೆಯಲ್ಲಿ ವಿದ್ವತ್ ಲೋಕಕ್ಕೆ ಇದ್ದ ಧ್ವನಿ ಕಡಿಮೆಯಾಗುತ್ತಿದೆ. ಮತ್ತೊಂದೆಡೆ ಸರ್ಕಾರ ಮತ್ತು ಸಾರ್ವಜನಿಕ ಜೀವನದಲ್ಲಿರುವವರಿಗೆ ವಿದ್ವತ್ ಲೋಕದ ಜೊತೆ ಯಾವ ಸಂಬಂಧವೂ ಇರುತ್ತಿಲ್ಲ.

ಸ್ವಾತಂತ್ರ್ಯದ ಪ್ರಾರಂಭಿಕ ದಶಕಗಳಲ್ಲಿ ಸಮಾಜ ವಿಜ್ಞಾನಿಗಳು ಬಗೆಹರಿಸಲು ತೊಡಗಿಕೊಂಡ ಪ್ರಶ್ನೆಗಳೆಲ್ಲಾ ರಾಷ್ಟ್ರ ನಿರ್ಮಾಣದ ತುರ್ತು ಆಗ್ರಹಗಳಿಂದಲೇ ಹುಟ್ಟುಕೊಂಡಿರುತ್ತಿದ್ದವು. ಆದ್ದರಿಂದಲೇ ಭಾರತದಲ್ಲಿ ಭೌತಿಕ ದಾರಿದ್ರ್ಯದ ಪರಿಸ್ಥಿತಿಯಲ್ಲೂ ಸಮಾಜ ವಿಜ್ಞಾನ ಮಾತ್ರ ಹುಲುಸಾಗಿ ಬೆಳೆಯಲು ಸಾಧ್ಯವಾದದ್ದು ಕಾಕತಾಳಿಯವೇನಲ್ಲ, ಆ ಕಾಲಘಟ್ಟದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳು ಜಾಗತಿಕ ಗುಣಮಟ್ಟದ ವಿದ್ವಾಂಸರನ್ನು ಮತ್ತು ಚಿಂತನೆಗಳನ್ನು ಹುಟ್ಟುಹಾಕುತ್ತಿದ್ದವು. ಹೀಗಾಗಿ ಹಲವು ಕುಂದುಕೊರತೆಗಳ ನಡುವೆಯೂ ಭಾರತದ ಆರ್ಥಿಕ ನೀತಿ, ಪ್ರಜಾತಂತ್ರ ಮತ್ತು ಜಾತ್ಯತೀತತೆಗಳಲ್ಲಿ ಜಾಗತಿಕ ಗುಣಪಾಠಗಳಿದ್ದದ್ದೂ ಸಹ ಕಾಕತಾಳಿಯವೇನಲ್ಲ. ಅಂಥ ಸಾಧನೆಗಳ ಪಟ್ಟಿಯೂ ಯಾವತ್ತೂ ಎಲ್ಲವನ್ನೂ ಒಳಗೊಂಡು ಸಮಗ್ರವಾಗಿರಲು ಸಾಧ್ಯವಿಲ್ಲ. ಆದರೂ ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ ಸಾಹಿತ್ಯ, ಅರ್ಥಶಾಸ್ತ್ರಗಳಲ್ಲಿ, ನಡೆಯುತ್ತಿದ್ದ ಜಾಗತಿಕ ವಾಗ್ವಾದಗಳಲ್ಲಿ ಭಾರತದ ಧ್ವನಿಯು ಗಂಭೀರವಾಗಿ ಆಲಿಸಲ್ಪಡುತ್ತಿತ್ತು. ಇಂಥಾ ಅಪರೂಪದ ಗೌರವಕ್ಕೆ ಪಾತ್ರವಾಗುತ್ತಿದ್ದ ಕೆಲವೇ ಮಾಜಿ ವಸಾಹತು ದೇಶಗಳಲ್ಲಿ ಭಾರತವೂ ಒಂದಾಗಿತ್ತು. ಸಂಕ್ಷಿಪ್ತಗೊಳಿಸಿ ಹೇಳಬೇಕೆಂದರೆ ತನ್ನೆಲ್ಲಾ ಕೊರತೆಗಳ ನಡುವೆಯೂ ಭಾರತವು ರಾಜಕೀಯ ವಾಗ್ವಾದಗಳನ್ನು ಮತ್ತು ಸಾರ್ವಜನಿಕ ನೀತಿಯನ್ನು ಪ್ರಭಾವಿಸಬಲ್ಲ ಸಾವಯವ ವಿದ್ವತ್ತನ್ನು ಸೃಷ್ಟಿಸಿತ್ತು.

ಸ್ವಾತಂತ್ರ್ಯಾನಂತರದಲ್ಲಿ ಅದರಲ್ಲೂ ವಿಶೇಷವಾಗಿ 1980ರ ನಂತರದಲ್ಲಿ ಭಾರತದ ಉನ್ನತ ಶಿಕ್ಷಣವು ಹಿಂದೆಂದೂ ಇಲ್ಲದಷ್ಟು ವಿಸ್ತರಣೆಗೊಂಡಿದೆ. ಹೆಚ್ಚುತ್ತಿರುವ ಸಾಕ್ಷರತೆ ಮತ್ತು ಸಾಮಾಜಿಕ ಅಂತಃ ಚಲನೆಗಳ ಭಾಗವಾಗಿ (ಈ ವಿದ್ಯಮಾನವನ್ನು ನಾವಿನ್ನೂ ಸಂಪೂರ್ಣವಾಗಿ ಅರ್ಥವೂ ಮಾಡಿಕೊಂಡಿಲ್ಲ, ಇದರ ಬಗ್ಗೆ ಹೆಚ್ಚಿನ ಸಂಶೋಧನೆಗಳೂ ನಡೆದಿಲ್ಲ) ಲಕ್ಷಾಂತರ ಹೊಸ ವಿದ್ಯಾರ್ಥಿಗಳು ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನೂ ಪ್ರವೇಶಿಸುತ್ತಿದ್ದಾರೆ. ಇದು ಕೇವಲ ವಿಜ್ಞಾನ, ತಂತ್ರಜ್ಞಾನ, ಇಂಜನಿಯರಿಂಗ್ ಮತ್ತು ಆಡಳಿತ ಅಧ್ಯಯನಗಳಲ್ಲಿ ಮಾತ್ರ ನಡೆಯುತ್ತಿರುವ ವಿದ್ಯಮಾನವಲ್ಲ, ಬದಲಿಗೆ ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳಲ್ಲೂ ಇದೇ ಬಗೆಯ ವಿಸ್ತರಣೆಯು ನಡೆಯುತ್ತಿದೆ. ಸರ್ಕಾರಿ ಧನಸಹಾಯವು ಪ್ರಮಾಣದಲ್ಲಿ ಹೆಚ್ಚುತ್ತಿದ್ದರೂ, ಪ್ರವೇಶಾತಿಯಲ್ಲಿ ಆಗುತ್ತಿರುವ ಹೆಚ್ಚಳಕ್ಕೆ ಹೋಲಿಸಿದಲ್ಲಿ ಏನೇನೂ ಸಾಲುತ್ತಿಲ್ಲ. ಖಾಸಗಿ ವ್ಯಾಪಾರಿ ವಿದ್ಯಾಸಂಸ್ಥೆಗಳಿಗೆ ಸಮಾಜ ವಿಜ್ಞಾನದ ಬಗ್ಗೆ ಯಾವುದೇ ಕಾಳಜಿಯಿಲ್ಲ. ಈ ಕಾಲಘಟ್ಟದಲ್ಲಿ ನಾಗರಿಕತ್ವ ಮತ್ತು ರಾಜಕಿಯ ಧ್ವನಿಯನ್ನು ಪಡೆದುಕೊಂಡ ಎರಡು ಪೀಳಿಗೆಗಳಿಗೆ ಸಾಮಾಜಿಕ ವಿಜ್ಞಾನ ಮತ್ತು ಮಾನವಿಕ ಶಿಕ್ಷಣವನ್ನು ಎಟುಕಿಸಿಕೊಳ್ಳಲಾಗಿಯೇ ಇರಲಿಲ್ಲ. ಆ ಕೊರತೆಯನ್ನು ದೂರದರ್ಶನಗಳು ಮತ್ತು ಇದೀಗ ವಾಟ್ಸಪ್‌ಗಳು ಪೂರೈಸುತ್ತಿವೆ. ಅಂಥಾ ಶಿಕ್ಷಣದಿಂದ ಎಂಥಾ ರಾಜಕೀಯ ಸೃಷ್ಟಿಯಾಗಬಲ್ಲದು ಎಂಬುದಕ್ಕೆ ಇದು ಒಂದು ಸಣ್ಣ ಮುನ್ಸೂಚನೆಯನ್ನು ಕೊಡಬಲ್ಲದು.

ಈ ರೀತಿ ಲಕ್ಷಾಂತರ ಯುವಜನತೆಯು ಸಮಾಜ ವಿಜ್ಞಾನ ಮತ್ತು ಮಾನವಿಕ ಶಿಕ್ಷಣಗಳಿಂದ ವಂಚಿತವಾಗಿದೆಯೆಂದರೆ ಅಷ್ಟರಮಟ್ಟಿಗೆ ವಿದ್ವತ್ ಲೋಕವು ಕೂಡಾ ಸೊರಗಿದೆ ಮತ್ತು ಅವಾಸ್ತವಿಕವಾಗಿದೆ ಎಂದೇ ಅರ್ಥ. ಇದು ಹಲವು ದುಷ್ಪರಿಣಾಮಗಳನ್ನು ಉಂಟುಮಾಡಿದೆ. ಇಂದು ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರಗಳಲ್ಲಿ ಸರಳ ಸಂಗತಿಗಳ ವಿವರಣೆಯಲ್ಲೂ ಸುಶಿಕ್ಷಿತರಿಗೂ ಅರ್ಥವಾಗದ ಪದಪುಂಜಗಳ ಅಬ್ಬರವೇ ಹೆಚ್ಚಾಗಿರುವುದಕ್ಕೂ ಇದೇ ಕಾರಣ. ಇದು ಸಂಶೋಧನೆಗಳನ್ನು ನಿತ್ಯಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗಿಂತ ವಿಕ್ಷಿಪ್ತ ಮತ್ತು ಕೂದಲು ಸೀಳುವಂಥ ಅತಾರ್ಕಿಕಗಳು ಮತ್ತು ಸಂಕೀರ್ಣತೆಗಳ ಕಡೆ ಸೆಳೆಯುತ್ತಿದೆ. ಇದರಿಂದಾಗಿ ಸಮಾಜ ವಿಜ್ಞಾನಿಗಳಿಗೆ ತಮ್ಮ ಸುತ್ತಮುತ್ತಲಿನ ಸಮಾಜವನ್ನು ಅರ್ಥಮಾಡಿಕೊಳ್ಳಲು ಎಷ್ಟು ಕಷ್ಟವಾಗುತ್ತಿದೆಯೋ ಅಷ್ಟೆ ಮಟ್ಟಿಗೆ ತಮ್ಮ ಉಳಿವಿಗೆ ಪ್ರಭುತ್ವದ ಮೇಲೆ ಆಧಾರಪಡುವಂತೆಯೂ ಮಾಡುತ್ತಿದೆ.

ಭಾರತದ ಸಮಾಜ ಮತ್ತು ರಾಜಕೀಯ ವಾಸ್ತವಗಳು ಎರಡು ಮೂರು ದಶಕಗಳ ಹಿಂದೆ ಹೇಗಿತ್ತೋ ಹಾಗಿಲ್ಲ, ಓದು-ಬರಹ ಮಾಡಬಲ್ಲವರ ಸಂಖ್ಯೆ, ಕೆಲಸ ಅರಸುತ್ತಾ ಮತ್ತು ಮನೋಲ್ಲಾಸಗಳಿಗಾಗಿ ಪ್ರವಾಸ ಮಾಡುವವರ ಸಂಖ್ಯೆ ಆಸ್ತಿಯನ್ನು ಹೊಂದಿರುವವರ ಸಂಖ್ಯೆಗಳಲ್ಲಿ ಆಗಿರುವ ಬದಲಾವಣೆಗಳು, ವೃತ್ತಿ ಮತ್ತು ಆದಾಯದ ರೀತಿಗಳಲ್ಲಿ ಬಂದಿರುವ ಬದಲಾವಣೆಗಳು, ಕುಟುಂಬದಲ್ಲಿ ಮತ್ತು ಗಂಡು -ಹೆಣ್ಣುಗಳ ಪಾತ್ರದಲ್ಲಿ ಬಂದಿರುವ ಬದಲಾವಣೆಗಳು ಮತ್ತು ರಾಜಕೀಯ ಭಾಗವಹಿಸುವಿಕೆಯಲ್ಲಿ ಬಂದಿರುವ ಬದಲಾವಣೆಗಳು ಅಗಾಧವಾಗಿವೆ; ಇವುಗಳ ಸ್ವರೂಪ ಸ್ವಾತಂತ್ರ್ಯ ಬಂದಾಗ ಇದ್ದ ರೀತಿಗೂ ಮಾತ್ರವಲ್ಲ, ಇಂದಿರಾ ಗಾಂಧಿ ಬಿಟ್ಟುಹೋದ ಭಾರತಕ್ಕಿಂತಲೂ ಭಿನ್ನವಾದ ಹಾಗೂ ಮೂಲಭೂತವಾದ ವ್ಯತ್ಯಾಸಗಳನ್ನು ಪಡೆದುಕೊಂಡಿವೆ.

ಈ ಹೊಸ ಭಾರತವನ್ನು ವಿವರಿಸಬಲ್ಲ ಹೊಸ ಸಿದ್ಧಾಂತಗಳೆಲ್ಲಿವೆ? ಹೊಸ ವಿಧಾನಗಳೆಲ್ಲಿವೆ? ಇಂದಿನ ಭಾರತವನ್ನು ಅರ್ಥಮಾಡಿಕೊಳ್ಳಲು ಮತ್ತು ವಿವರಿಸಲು ಸಹಾಯ ಮಾಡಬಲ್ಲ ಮಾದರಿಗಳು, ದೃಷ್ಟಿಕೋನಗಳು ಮತ್ತು ವರ್ಗೀಕರಣಗಳೆಲ್ಲಿ? ಅನಿರೀಕ್ಷಿತವಾದ ಚುನಾವಣಾ ಫಲಿತಾಂಶಗಳು ಮತ್ತು ನೋಟು ನಿಷೇಧ ಉಂಟು ಮಾಡಿದ ಊಹಿಸಲಸಾಧ್ಯವಾದ ಪರಿಣಾಮಗಳು ಹೊಸ ಭಾರತಕ್ಕೂ ಮತ್ತು ವಿದ್ವತ್ ಲೋಕಕ್ಕೂ ನಡುವೆ ಇರುವ ಬಿರುಕನ್ನು ತೋರಿಸಿಕೊಡುವ ಎರಡು ಹತ್ತಿರದ ಉದಾಹರಣೆಗಳು. ನಮ್ಮ ರಾಜಕೀಯ ಮತ್ತು ಸಾಮಾಜಿಕ ಪ್ರಪಂಚವನ್ನು ನಮಗೆ ವಿವರಿಸಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಕಾರಣಗಳಿವೆ.

ಸ್ವಾತಂತ್ರ್ಯದ 70 ವರ್ಷಗಳ ನಂತರ ನಾವು ಕಾಣುತ್ತಿರುವ ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಮಾತ್ರವಲ್ಲ ಈ ಪತ್ರಿಕೆಯನ್ನು ಓದುವ ನಮ್ಮಂಥವರೂ ಸಹ ಗುರುತಿಸಲಾಗದಷ್ಟು ಬದಲಾಗಿಬಿಟ್ಟಿದೆ. ಶೇಕ್ಸ್‌ಪಿಯರ್‌ನ ಮಾತುಗಳಲ್ಲಿ ಹೇಳುವುದಾದರೆ (ಮ್ಯಾಕ್ಬೆತ್ ನಾಟಕದ ಸಾಲುಗಳು)

ಎಪ್ಪತ್ತಾದರೂ ನನಗೆ , ನೆನಪಿದೆ ಎಲ್ಲವೂ ಸುಮಾರಿಗೆ
ಕಡಿಮೆ ಇರಲಿಲ್ಲ ಬೆಚ್ಚಿಬೀಳಿಸಿದ ಭಯದ ಗಳಿಗೆಗಳಿಗೆ
ಆದರೂ, ಮರೆತುಹೋಗಿವೆ ಎಲ್ಲವೂ ಈ
ಕಾಳರಾತ್ರಿಯ ದಿಗಿಲಿಗೆ.

ಸ್ವಾತಂತ್ರ್ಯದ ದಿನವು ನಮ್ಮ ನಮ್ಮ ಕರ್ತವ್ಯಗಳಿಗೆ ಮತ್ತೊಮ್ಮೆ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಳ್ಳುವ ಗಳಿಗೆಯೂ ಆಗಿರುತ್ತದೆ. ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಇಪಿಡಬ್ಲ್ಯೂ) ಮತ್ತದರ ಮೊದಲ ರೂಪವಾಗಿದ್ದ ಎಕಾನಾಮಿಕ್ ವೀಕ್ಲಿಗಳು ಭಾರತದ ಈ ಜಾಗೃತಿಯಲ್ಲಿ ಉದ್ದಕ್ಕೂ ಸಹಚರನಾಗಿ ಹೆಜ್ಜೆಹಾಕಿರುವುದರಲ್ಲಿ ಹೆಮ್ಮೆ ಪಡುತ್ತದೆ. ನಮ್ಮ ಅನ್ವೇಷಣೆಗಳು ರೂಪಾಂತರಗೊಳ್ಳಬೇಕಾಗಿರುವ ಈ ಹೊತ್ತಿನಲ್ಲಿ ಸಂವಾದ ಮತ್ತು ಚರ್ಚೆಗಳಿಗೆ ಹಾಗೂ ಧ್ವನಿ ಇರದ ಮತ್ತು ಧ್ವನಿ ಕೇಳದ ವರ್ಗಗಳಿಗೆ ಧ್ವನಿಯಾಗುವ ನಮ್ಮ ಬದ್ಧತೆಯನ್ನು ಮತ್ತೊಮ್ಮೆ ಖಾತರಿಗೊಳಿಸುತ್ತೇವೆ. ವಸಾಹತುಶಾಹಿಯ ಅನುಭವವೇ ಇಲ್ಲದ ಹೊಸ ಪೀಳಿಗೆಯ ಆಶಯಗಳನ್ನು ಮತ್ತು ಆಗ್ರಹಗಳನ್ನು ಹಿಡಿದಿಡಬಲ್ಲ ಹೊಸ ಧ್ವನಿಯೊಂದು ಹುಟ್ಟಬೇಕಾದ ಅಗತ್ಯವಿದೆ. ■

---

12 ⏮

...ಎಸ್‌ಟಿ ಜಾರಿಯಾದ ನಂತರ ಉಪಭೋಗದ ...onsumption) ಮೇಲೆ ತೆರಿಗೆ ಹೆಚ್ಚಾಗಿದೆ. ...ಣಾಮವಾಗಿ ಉಪಭೋಗ ಮತ್ತು ಅಂತಿಮವಾಗಿ ...ತ್ಪಾದನೆಯೂ ಕಡಿಮೆಯಾಗಲಿದೆ. ಇನ್ನು ಗೃಹ ನಿರ್ಮಾಣ ...ತ್ರದಲ್ಲಿ ಆದ ಬೆಲೆ ಇಳಿಕೆಗೆ ನೋಟು ರದ್ದತಿಯೆ ...ಕಾರಣವೆಂದು ಮೋದಿ ಸರ್ಕಾರ ಹೇಳಿಕೊಂಡಿತ್ತು, ಆದರೆ ...ಆ ಬೆಲೆಗಳು ಮತ್ತೆ ಏರುಗತಿಯಲ್ಲಿವೆ!

...ನೋಟು ರದ್ದತಿಯೂ ತೆರಿಗೆ ಸಂಗ್ರಹವೂ

ನೋಟು ರದ್ದತಿಯ ಪರಿಣಾಮವಾಗಿ ಆದಾಯ ತೆರಿಗೆ ...ಗ್ರಹದಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ಹೇಳಲಾಗುತ್ತಿದೆ. ...016-17ರಲ್ಲಿ ಆದಾಯ ತೆರಿಗೆ ಮತ್ತು ಜಿಡಿಪಿ ನಡುವಿನ ...ತ ಹೆಚ್ಚಾಗಿದೆ ನಿಜ. ಆದರೆ ಇದಕ್ಕೆ ಆ ಸಾಲಿನ ...ಆದಾಯ ತೆರಿಗೆ ಮನ್ನಾ ಸ್ಕೀಮುಗಳೆ ಕಾರಣ ಹೊರತು ...ನೋಟು ಅಲ್ಲ, ಈ ಸ್ಕೀಮುಗಳು ಇಲ್ಲದಿದ್ದರೆ ನಿಷ್ಪತ್ತಿ ಹೆಚ್ಚುಕಡಿಮೆ ಹಿಂದಿನ ವರ್ಷಗಳಷ್ಟೆ ಇರುತ್ತಿತ್ತು. ವಾಸ್ತವದಲ್ಲಿ ಆದಾಯ ತೆರಿಗೆ ಸಂಗ್ರಹದಲ್ಲಿ ಹೇಳಿಕೊಳ್ಳುವಷ್ಟು ಹೆಚ್ಚಳವೇನೂ ಆಗಿಲ್ಲ, ಎಲ್ಲೊ ಅಲ್ಪಸ್ವಲ್ಪ ಆಗಿದೆ ಅಷ್ಟೆ. ಇನ್ನು ಸಮಗ್ರ ನೇರ ತೆರಿಗೆ ಸಂಗ್ರಹವನ್ನು (ಆದಾಯ ತೆರಿಗೆ- ಕಾರ್ಪೋರೇಟ್ ತೆರಿಗೆ) ನೋಡಿದರೆ ಅದರ ಪ್ರಮಾಣ ಹೆಚ್ಚುಕಡಮೆ ಹಿಂದಿನ ವರ್ಷಗಳಲ್ಲಿ ಇದ್ದಷ್ಟೆ ಇದೆ. ಹಾಗೆ ನೋಡಿದರೆ 2013-14ರ ತನಕ ಅಂದರೆ ನೋಟು ರದ್ದತಿ ಇಲ್ಲದ ಕಾಲದಲ್ಲಿ ಸಮಗ್ರ ನೇರ ತೆರಿಗೆ ಸಂಗ್ರಹದ ಪ್ರಮಾಣ ಈಗಿರುವುದಕ್ಕಿಂತಲೂ ಅಧಿಕವಿತ್ತು

ಭಯೋತ್ಪಾದಕ ದಾಳಿಗಳು

ಮೋದಿ ಹೇಳಿಕೊಂಡಂತೆ ನೋಟು ರದ್ದತಿ ನಂತರದಲ್ಲಿ ಭಯೋತ್ಪಾದಕ ದಾಳಿಗಳ ಸಂಖ್ಯೆ ಕಡಿಮೆಯಾಗಬೇಕಿತ್ತು, ಆದರೆ ವಾಸ್ತವ ಬೇರೆಯೆ ಇದೆ. 2016ರಲ್ಲಿ ಜಮ್ಮುಕಾಶ್ಮೀರದಲ್ಲಿ ಒಟ್ಟು 322 ಭಯೋತ್ಪಾದಕ ದಾಳಿಗಳು ನಡೆದಿವೆ. 2016ರ ನವೆಂಬರ್ 8ರ ಬಳಿಕವೂ ಉಗ್ರರ ದಾಳಿಗಳು ಮುಂದುವರಿದಿವೆ. ಮೋದಿ ಸರ್ಕಾರ ಲೋಕಸಭೆಗೆ ತಿಳಿಸಿರುವಂತೆ ಈ ವರ್ಷದ ಜುಲೈ ತನಕ ಈಗಾಗಲೆ ಸುಮಾರು 194 ಭಯೋತ್ಪಾದಕ ದಾಳಿಗಳು ಸಂಭವಿಸಿವೆ. ಹಿಂದಿನ ದಾಖಲೆಗಳನ್ನು ನೋಡುವುದಾದರೆ 2015ರಲ್ಲಿ 208 ದಾಳಿಗಳಾಗಿದ್ದರೆ 2014ರಲ್ಲಿ 222 ಘಟನೆಗಳು ಸಂಭವಿಸಿದ್ದವು.

ಕೊನೆ ಹನಿ: ನೋಟು ರದ್ದತಿಯ ನಿರ್ಧಾರ ಒಂದು ದೊಡ್ಡ ತಪ್ಪು ಎಂಬುದಕ್ಕೆ, ಮತ್ತು ಮೇಲೆ ಉಲ್ಲೇಖಿಸಲಾಗಿರುವ ಎಲ್ಲಾ ವಿಷಯಗಳಿಗೆ ಪುರಾವೆಯಾಗಿ ಈಗ ಬಂದಿದೆ ಸಂಸತ್ತಿನ ಸಮಿತಿಯೊಂದರ ವರದಿ. ನೋಟು ರದ್ದತಿ ಕುರಿತ ಸಂಸತ್ತಿನ ಸಮಿತಿ ಇತ್ತೀಚೆಗಷ್ಟೆ ತನ್ನ ವರದಿಯನ್ನು ಸಲ್ಲಿಸಿದ್ದು ಅದರ ಪ್ರಕಾರ ನೋಟು ರದ್ದತಿ ಒಂದು ಪ್ರಮಾದವಾಗಿದ್ದು ಅದರ ಉದ್ದೇಶಗಳಲ್ಲಿ ಒಂದಾದರೂ ಈಡೇರಿಲ್ಲ! ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದೆ, ಇಲ್ಲವೆ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆ. ಆದರೆ ಅದನ್ನು ಯಾವುದೇ ಕಾರಣಕ್ಕೂ ಪ್ರಕಟಿಸಬಾರದೆಂದು ಮಾಧ್ಯಮಗಳಿಗೆ ತಾಕೀತು ಮಾಡಲಾಗಿರುವುದಾಗಿ ತಿಳಿದುಬಂದಿದೆ! ನೋಟು ರದ್ದತಿಯಿಂದ ಯಾರಿಗೆ, ಎಷ್ಟು, ಏನೆಲ್ಲ ಲಾಭವಾಯಿತೊ ಬಲ್ಲವರಾರು. ಆದರೆ ದೇಶಕ್ಕಂತೂ 180ಕ್ಕೂ ಅಧಿಕ ಪ್ರಾಣಗಳೊಂದಿಗೆ ವೆಚ್ಚಗಳ ಬಾಬತ್ತು ರೂ. 30000 ಕೋಟಿಗೂ ಅಧಿಕ ನಷ್ಟವಾಗಿದೆ.


■ (ಆಧಾರ: *1.8.2017*ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಅರುಣ್ ಕುಮಾರ್, *10.8.2017*ರ ನ್ಯೂಸ್‌ಕ್ಲಿಕ್‌ನಲ್ಲಿ ಬೊದಪತಿ ಸೃಜನ, *7.8.2017*ರ ವಿವೇಕ್ ಕೌಲ್ಸ್ ಡೈರಿಯಲ್ಲಿ ವಿವೇಕ್, *3.8.2017*ರ ತೆಹೆಲ್ಕಾದಲ್ಲಿ ಎಂ.ವೈ. ಸಿದ್ದೀಕ್‌ರ ಲೇಖನಗಳು; *10.8.2017*ರ ಪಿಟಿಐ, *11.8.2017*ರ ಕ್ಯಾಚ್ ನ್ಯೂಸ್ ಮತ್ತು *8.8.2017*ರ ಡೆಕ್ಕನ್ ಹೆರಾಲ್ಡ್ ವರದಿಗಳು)

ಯೋಗಿ ರಾಜ್ಯದಲ್ಲಿ ಬಡಮಕ್ಕಳಿಗೆ ಬೆಲೆ ಇಲ್ಲ

ಉತ್ತರ ಪ್ರದೇಶದ ಗೋರಖಪುರದಲ್ಲಿ ಒಂದೆಡೆ 63 ಮಕ್ಕಳು ಸತ್ತಿದ್ದರೆ ಇನ್ನೊಂದೆಡೆ ಅಲ್ಲಿ ಯೋಗಿ ಸರಕಾರ ಮದ್ರಸಾಗಳಲ್ಲಿ ವಂದೇಮಾತರಂ ಹಾಡುವ ಬಗ್ಗೆ ಸಭೆ ನಡೆಸುತ್ತಿದೆ. ಹಾಗಾದರೆ ಮದ್ರಸಾಗಳಲ್ಲಿ ವಂದೇ ಮಾತರಂ ಹಾಡಿದ ಕೂಡಲೇ ಈ ಸತ್ತ ಮಕ್ಕಳು ಜೀವಂತವಾಗಿ ಎದ್ದು ಕೂರುತ್ತವೆಯೇ? ರಾಮ ಮಂದಿರ ಕಟ್ಟಿದ ಮಾತ್ರಕ್ಕೆ, ಗೋವು ಪೂಜೆ ಮಾಡಿದ ಮಾತ್ರಕ್ಕೆ ಉತ್ತರ ಪ್ರದೇಶದಲ್ಲಿ ಜನರ ಜೀವನಮಟ್ಟ ಉತ್ತಮಗೊಳ್ಳುತ್ತದೆಯೇ?

ಉತ್ತರ ಪ್ರದೇಶ ಸುಧಾರಿಸಬೇಕಾದರೆ ಒಂದೇ ಮಾರ್ಗ. ಅದು ಆ ರಾಜ್ಯವನ್ನು ನಾಲ್ಕು ರಾಜ್ಯವಾಗಿ ವಿಭಜಿಸುವುದು. ಯೂಪಿಯ ಒಟ್ಟು ಜನಸಂಖ್ಯೆ ಈಗಾಗಲೇ 22 ಕೋಟಿ ದಾಟಿದೆ. ಇಷ್ಟು ಬೃಹತ್ ಜನಸಂಖ್ಯೆ ಒಂದೇ ರಾಜ್ಯ ಸರಕಾರದಡಿ ಇದ್ದರೆ ಸುರಳಿತ ಆಡಳಿತ ಸಾಧ್ಯವೇ ಇಲ್ಲ. ಮೇಲಾಗಿ ಆ ರಾಜ್ಯ ಬಡತನ, ಅನಕ್ಷರತೆ, ಮೌಢ್ಯ ಕಂದಾಚಾರ ಉಟ್ಟು ಉಂಡು ಹೊದ್ದು ಮಲಗಿದೆ. ಮಹಿಳೆಯರೆಂದರೆ ಅಲ್ಲಿಯ ರಾಮ ಭಕ್ತರಿಗೆ ಕಾಲಿನ ಕಸ ಇದ್ದಂತೆ. ಇದನ್ನೆಲ್ಲಾ ನಾನು ಅಲಹಾಬಾದಿನಲ್ಲಿ ಉದ್ಯೋಗದಲ್ಲಿ ಇದ್ದಾಗ ಗಮನಿಸಿದ್ದೇನೆ.

ಮಾಯಾವತಿಯವರು 2011 ರಲ್ಲಿಯೇ ಉತ್ತರಪ್ರದೇಶವನ್ನು ನಾಲ್ಕು ರಾಜ್ಯವಾಗಿ ವಿಭಜಿಸುವ ವಿಧೇಯಕ ಪಾಸ್ ಮಾಡಿ ಕೇಂದ್ರಕ್ಕೆ ಕಳುಹಿಸಿದ್ದಾರೆ. ಆದರೆ ಹಿಂದಿನ ಮನಮೋಹನ್ ಸಿಂಗ್ ಸರಕಾರ ಮತ್ತು ಇಂದಿನ ಮೋದಿ ಸರಕಾರ ಈ ವಿಧೇಯಕವನ್ನು ಕಣ್ಣೆತ್ತಿಯೂ ನೋಡಿಲ್ಲ.





2013 ರಲ್ಲಿ ಆಂಧ್ರವನ್ನು ವಿಭಜಿಸುವ ಬದಲು ಉತ್ತರ ಪ್ರದೇಶವನ್ನು ವಿಭಜಿಸಿದ್ದರೆ ಇಷ್ಟೊತ್ತಿಗೆ ಅಲ್ಲಿ ಒಳ್ಳೆಯ ಆಡಳಿತ ಸಾಧ್ಯವಾಗುತ್ತಿತ್ತು ಹಾಗೂ 22 ಕೋಟಿ ಜನರ ಭವಿಷ್ಯ ಒಬ್ಬ ತಲೆತಿರುಕ ಯೋಗಿಯ ಕೈಯಲ್ಲಿ ಸಿಗುವುದು ತಪ್ಪುತ್ತಿತ್ತು. ಕಾರಣ ನಾಲ್ಕು ರಾಜ್ಯಕ್ಕೆ ನಾಲ್ವರು ಮುಖ್ಯ ಮಂತ್ರಿಗಳು ಇರುತ್ತಿದ್ದರು ಹಾಗೂ ಬಹುಶಃ ಬೇರೆ ಬೇರೆ ಪಕ್ಷಗಳು ಆಡಳಿತದಲ್ಲಿ ಇರುತ್ತಿದ್ದವು ಮತ್ತು ನಾಲ್ಕು ರಾಜ್ಯಗಳಲ್ಲಿ ಅವರವರಲ್ಲಿಯೇ ಸ್ಪರ್ಧೆಯಾಗಿ ಆಡಳಿತ ಉತ್ತಮಗೊಳ್ಳುತ್ತಿತ್ತು.

ಗೋರಖಪುರದಲ್ಲಿ ಈ 63 ಮಕ್ಕಳು ಸಾಯಲು ಕಾರಣ ಹಲವಾರು ವರ್ಷಗಳಿಂದ ಆ ಮೆಡಿಕಲ್ ಕಾಲೇಜಿಗೆ ಸಲಗ್ನ ಸರಕಾರಿ ಆಸ್ಪತ್ರೆಗೆ ಆಕ್ಸಿಜನ್ ಪೂರೈಸುತ್ತಿದ್ದ ಕಂಪನಿ ಒಮ್ಮೆಲೇ ಆಕ್ಸಿಜನ್ ಪೂರೈಕೆ ನಿಲ್ಲಿಸಿದ್ದು. ಆ ಕಂಪನಿಯ ಸುಮಾರು 70 ಲಕ್ಷ ರೂಪಾಯಿ ಬಿಲ್ ಬಾಕಿ ಇದ್ದು ಸರಕಾರ ಅದನ್ನು ಪಾವತಿಸುವ ಯಾವುದೇ ಆಸಕ್ತಿ ತೋರದ್ದರಿಂದ ಆ ಕಂಪನಿ ಗತ್ಯಂತರವಿಲ್ಲದೆ ಆಕ್ಸಿಜನ್ ಪೂರೈಕೆ ನಿಲ್ಲಿಸಬೇಕಾಯಿತಂತೆ. ವಿಪರ್ಯಾಸವೆಂದರೆ ಗುಜರಾತಿನಲ್ಲಿ ಮೊನ್ನೆ ರಾಜ್ಯಸಭಾ ಚುನಾವಣೆ ವೇಳೆ ಅಡ್ಡ ಮತದಾನ ಮಾಡಿದ ಕಾಂಗ್ರೆಸ್ಸಿನ 15 ಶಾಸಕರನ್ನು ಕೊಂಡುಕೊಳ್ಳಲು 'ಕ್ರಿಮಿತ್' ಷಾ ತಲಾ 20 ಕೋಟಿಯಂತೆ ಸುಮಾರು 300 ಕೋಟಿ ರೂಪಾಯಿ ಖರ್ಚು ಮಾಡಿರುವನು. ಆದರೆ ಉತ್ತರ ಪ್ರದೇಶದಲ್ಲಿ ಅವರದೇ ಪಕ್ಷ ಅಧಿಕಾರದಲ್ಲಿ ಇರುವಾಗ ಆಕ್ಸಿಜನ್ ಕಂಪನಿಯ ಸಣ್ಣ ಮೊತ್ತವಾದ 70 ಲಕ್ಷ ಬಿಲ್ ಕೊಡಲು ಸಾಧ್ಯವಾಗದೇ 63 ಬಡಮಕ್ಕಳು ಸಾಯುವಂತೆ ಮಾಡಲಾಯಿತು. ಬಿಜೆಪಿಯವರ ಆಡಳಿತದಲ್ಲಿ ಮಾನವ ಜೀವಕ್ಕೆ ಬೆಲೆಯಿಲ್ಲ ಬಿಡಿ. ಆದರಲ್ಲೂ ಅತಿ ಹಿಂದುಳಿದ ಗೋರಖಪುರದಲ್ಲಿ ಈ ಸರಕಾರಿ ಆಸ್ಪತ್ರೆಗೆ ಬರುವವರು ದಲಿತರು, ಅತಿ ಹಿಂದುಳಿದವರು ಮತ್ತು ಮುಸ್ಲಿಮರು. ಇವರ ಜೀವ ಗೋವಿಗಿಂತಲೂ ಅಗ್ಗ ಹಾಗಾಗಿ ಅಲ್ಲಿ ಗೋವಿಗೆ ಯೋಗಿ ಸರಕಾರ 100 ಹೊಸ ಅಂಬ್ಯುಲೆನ್ಸಿನ ತುರ್ತು ಸೇವೆ ಒದಗಿಸಿದೆ, ಆದರೆ ಮನುಷ್ಯರಿಗೆ ಆಂಬ್ಯುಲೆನ್ಸ್ ಸೇವೆ ಇಲ್ಲ!

-ಅನಿಲ್ ಕುಮಾರ್ ಪೂಜಾರಿ, ಮಂಗಳೂರು


ಕೃಷ್ಣ ಸಾಮಾಜಿಕ ನ್ಯಾಯದ ಸಂಕೇತವಲ್ಲ

ಈಗೀಗ ಪ್ರತಿ ವರ್ಷ ಜನ್ಮಾಷ್ಟಮಿಯಂದು ಮೊಸರು ಕುಡಿಕೆ ಅರ್ಥಾತ್ ದಹಿಹಂಡಿ ಮೆರವಣಿಗೆಯಲ್ಲಿ ಕೃಷ್ಣನ ಪಾತ್ರಧಾರಿಯೊಂದಿಗೆ ಒಬ್ಬ ತಲೆ ಬೋಳಿಸಿ ಜುಟ್ಟು ಜನಿವಾರ ಉಳ್ಳ ಸುಧಾಮನ ಪಾತ್ರಧಾರಿಯೂ ಇರುತ್ತಾನೆ. ಗುಜರಾತಿನಲ್ಲಿ ದಹಿ-ಹಂಡಿ ಮೆರವಣಿಗೆಯಲ್ಲಿ ಸುಧಾಮನ ಪಾತ್ರಧಾರಿ ಇರಲೇಬೇಕಂತೆ. ಕಾರಣ ಭಾಗವತ ಪುರಾಣದ ಪ್ರಕಾರ ಸುಧಾಮ ಈಗಿನ ಗುಜರಾತಿನ ಭರೋಚ್ ಅಥವಾ ಪೋರಬಂದರ್ ಊರಿನವನು ಎಂದು ನಂಬಲಾಗುತ್ತದೆ. ಹಾಗಾಗಿ ಕೃಷ್ಣ ಗುಜರಾತಿನ ದ್ವಾರಕೆಯಲ್ಲಿ ರಾಜ್ಯವಾಳುತ್ತಿದ್ದಾಗ ಅಲ್ಲಿಯೇ ಹತ್ತಿರದಲ್ಲಿದ್ದ ಭರೋಚ್/ಪೋರಬಂದರದಿಂದ ಸುಧಾಮ ನಡೆದುಕೊಂಡೇ ದ್ವಾರಕೆಗೆ ಹೋಗಿ ಕೃಷ್ಣನನ್ನು ಭೇಟಿಯಾಗಿ ಅವಲಕ್ಕಿ ಕೊಟ್ಟಿದ್ದು ಎನ್ನಲಾಗುತ್ತದೆ. ಅದೇನೇ ಇರಲಿ, ದಹಿಹಂಡಿ ಸಮಾರಂಭದಲ್ಲಿ ಸುಧಾಮನ ಕಾಲು ಕೃಷ್ಣ ತೊಳೆಯುವ ಅಣಕು ಪ್ರದರ್ಶನ ಅಥವಾ ಈ ಚಿತ್ರದ ಫ್ಲೆಕ್ಸ್ ಬೋರ್ಡ್ ಇದ್ದೇ ಇರುತ್ತದೆ.

ನಿಜವಾಗಿ ಮೂಲ ಮಹಾಭಾರತ, ವಿಷ್ಣುಪುರಾಣ ಅಥವಾ ಹರಿವಂಶ ಪುರಾಣದಲ್ಲಿ ಈ ಸುಧಾಮನ ಉಪಕಥೆ ಇಲ್ಲವೇ ಇಲ್ಲವಂತೆ. ನಂತರದ ಕಾಲದಲ್ಲಿ ಬರೆದ ಭಾಗವತದಲ್ಲಿ ಮಾತ್ರ ಸುಧಾಮನ ಉಪಕಥೆ ಬಂದಿದ್ದು ಹಾಗೂ ಭಾಗವತ ಬರೆದವರು ತಮ್ಮ ಬ್ರಾಹ್ಮಣ ಜಾತಿಯ ಮೇಲ್ಮೆ ತೋರಿಸುವ ಸಲುವಾಗಿ ಈ ಸುಧಾಮನ ಕಥೆ ಹೊಸದಾಗಿ ಹೆಣೆದು ಸೇರಿಸಿದರು ಎನ್ನಲಾಗುತ್ತದೆ. ಅದಕ್ಕಾಗಿಯೇ ಕೃಷ್ಣನು ಕ್ಷತ್ರಿಯ ರಾಜನಾಗಿದ್ದರೂ ಅವನು ಬ್ರಾಹ್ಮಣ ಸುಧಾಮನ ಕಾಲು ತೊಳೆಯುವ ಸನ್ನಿವೇಶವನ್ನು ಕಥೆಯಲ್ಲಿ ಸೇರಿಸಲಾಯಿತು! ಅಂದರೆ ಬ್ರಾಹ್ಮಣರು ದೇವರಿಗಿಂತಲೂ ಹೆಚ್ಚಿನ ಪವಿತ್ರತೆ ಉಳ್ಳವರು ಎಂದು ಬಿಂಬಿಸುವ ಮೂಲ ಉದ್ದೇಶದಿಂದಲೇ ಕೃಷ್ಣ ಸುಧಾಮನ ಕಾಲು ತೊಳೆಯುವ ಅವಾಸ್ತವ ಕಥೆಯನ್ನು ಭಾಗವತದಲ್ಲಿ ಸೇರಿಸಲಾಯಿತು ಎನ್ನುವುದು ಪುರಾಣ ಸಂಶೋಧಕರ ಅಭಿಪ್ರಾಯ.



ಕೃಷ್ಣನಿಗೆ ಇನ್ನೂ ಅನೇಕ ಬಾಲ್ಯದ ಗೆಳೆಯರಿದ್ದರು. ಅವರಲ್ಲಿ ಕೆಳಜಾತಿಯ ಬಡ ಯಾದವ ಗೆಳೆಯರೇ ಹೆಚ್ಚು, ಅವರಲ್ಲಿ ಯಾರಿಗೂ ಕೃಷ್ಣ ದ್ವಾರಕೆಯ



ರಾಜನಾದ ಮೇಲೆ ಸಹಾಯ ಮಾಡಲಿಲ್ಲವೇ? ಮಾಡಿದ್ದರೆ ಆ ಕಥೆಗಳು ಯಾಕೆ ಭಾಗವತದಲ್ಲಿ ... ಬ್ರಾಹ್ಮಣರ ಹುಸಿ ಜಾತಿ ಶ್ರೇಷ್ಠತೆಯ ಮನೋ... ಇಂಬು ಕೊಡಲು ಈ ಸುಧಾಮನ ಕಥೆ ... ಸೇರಿಸಲಾಯಿತೆ? ಕೃಷ್ಣ ತನ್ನ ಬಾಲ್ಯ ಕಳೆದಿದ್ದು ಗೋ... ಅದು ಉತ್ತರ ಪ್ರದೇಶದ ಮಥುರಾದ ಹತ್ತಿರವ... ಅಲ್ಲಿಂದ ದ್ವಾರಕೆ ಸುಮಾರು ಒಂದು ಸಾವಿರ... ದೂರವಿದೆ. ಹಾಗಾದರೆ ಅತ್ಯಂತ ಬಡ ಬ್ರಾಹ್ಮಣ ಸುಧಾಮ ಗುಜರಾತಿನ ಭರೋಚ್-ಪೋರಬಂದ... ದೂರದ ಉತ್ತರ ಪ್ರದೇಶದ ಗೋಕುಲಕ್ಕೆ ಸಾವಿರ... ನಡೆದುಕೊಂಡು ಹೋಗಿ ಅಲ್ಲಿ ಸಾಂದೀಪನಿ ... ಗುರುಕುಲದಲ್ಲಿ ತನ್ನ ಬಾಲ್ಯವನ್ನು ಕೃಷ್ಣನೊಟ್ಟಿಗೆ ... ಎಷ್ಟು ಸತ್ಯ? ಇದರ ಅರ್ಥ ಸುಧಾಮನ ಉಪಕಥೆ... ಮಹಾಭಾರತವೇ ಸರಿಯಾದುದು ಹಾಗೂ ನಂತರ... ಉಪಕತೆಗಳನ್ನು ಸೇರಿಸಿ ಬರೆದ ಭಾಗವತ ಗ್ರಂಥ ... ಶ್ರೇಷ್ಠತೆಯನ್ನು ಗುಲಾಮೀ ಮಾನಸಿಕತೆಯ ಶೂದ್ರ... ಹೇರುವುದಕ್ಕಾಗಿ ಬರೆದಿರುವ ಉಪಗ್ರಂಥ ಎ... ಸರಿಯೆನ್ನಿಸುತ್ತದೆ.

"ದೇವರು ಮಂತ್ರದ ಅಧೀನ, ಮಂತ್ರ ಬ... ಅಧೀನ, ಆ ಮೂಲಕ ದೇವರು ಬ್ರಾಹ್ಮಣನ ... ಎಂದು ನಿರೂಪಿಸುವ ಮಹಾಮೂರ್ಖ ನಾಣ್ಣುಡಿ... ಯಾರೋ ಬ್ರಾಹ್ಮಣ ಜಾತಿ ಶ್ರೇಷ್ಠತೆಯ


ಶಾ ಹುನ್ನಾರವನ್ನು ವಿಫಲಗೊಳಿಸಬೇಕಿದೆ...


ಇತ್ತೀಚಿನ ಗುಜರಾತ್ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಹಮದ್ ಪಟೇಲರನ್ನು ಸೋಲಿಸಲೇಬೇಕೆಂದು ಪಣ ತೊಟ್ಟಿದ್ದ ಮೋದಿ ಮತ್ತು ಅಮಿತ್ ಶಾರ ರೂ. 300 ಕೋಟಿಯ ಮಹಾಭ್ರಷ್ಟ ಯೋಜನೆ ವಿಫಲವಾಗಿ ಮೋದಿ ಮತ್ತು ಅಮಿತ್ ಶಾಗೆ ಭಾರಿ ಮುಖಭಂಗವಾದ ನಂತರ ಡ್ಯಾಮೇಜ್ ಕಂಟ್ರೋಲಿಗಾಗಿ ಬಿಜೆಪಿಯ ಮೀಡಿಯಾ ಸೆಲ್- "ಮೋದಿಗೆ ಅಹಮದ್ ಪಟೇಲರೆಂದರೆ ಮೊದಲಿನಿಂದಲೂ ಭಾರಿ ಗೌರವವಿದೆ, ಅದಕ್ಕಾಗಿ ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗಲೂ ಎಲ್ಲಾ ಸಾರ್ವಜನಿಕ ಸಭೆಯಲ್ಲಿ ಅಹಮದ್ ಪಟೇಲರನ್ನು ಕಾಂಗ್ರೆಸ್ಸಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಸಂಬೋಧಿಸಿ ರಾಜಕೀಯ ಮಹತ್ವ ನೀಡುತ್ತಿದ್ದರು" ಎಂದು ಹುಸಿ ಪ್ರಚಾರದಲ್ಲಿ ತೊಡಗಿದೆ.

ಮೋದಿ ಅಹಮದ್ ಪಟೇಲರನ್ನು ಗುಜರಾತಿನ ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಸಂಬೋಧಿಸುತ್ತಿದ್ದದ್ದು ನಿಜವಾದರೂ ಇದು ಮೂಲದಲ್ಲಿ ಅಹಮದ್ ಪಟೇಲರ ಬಗ್ಗೆ ಮೋದಿಗೆ ಇದ್ದ ಗೌರವದ ಸೂಚಕವಾಗಿರದೇ ಇದರ ಹಿಂದೆ ಮನೋವೈಜ್ಞಾನಿಕ ರಾಜಕೀಯ ತಂತ್ರ ಅಡಗಿತ್ತು, ಅಂದರೆ ಕಾಂಗ್ರೆಸ್ ಪಕ್ಷವು ಮುಸ್ಲಿಂ ಪಕ್ಷಪಾತಿ ಪಕ್ಷ, ಹಾಗಾಗಿ ಅದು ಅಧಿಕಾರಕ್ಕೆ ಬಂದರೆ ಗುಜರಾತ್ ರಾಜ್ಯಕ್ಕೆ ಮುಸ್ಲಿಂ ಮುಖ್ಯಮಂತ್ರಿಯೇ ಗತಿ ಎಂದು ಮತದಾರರ ಮನಸ್ಸಲ್ಲಿ ಪರೋಕ್ಷವಾಗಿ ಕೋಮುಭಾವನೆ ತುಂಬಿಸುವ ಏಕೈಕ ಉದ್ದೇಶ ಮೋದಿ ಹೊಂದಿದ್ದರು. ಮೋದಿ ಎಂತಹ ಚಾಣಾಕ್ಷ ಎಂದರೆ ಕಾಂಗ್ರೆಸ್ ಪಕ್ಷ ಅಹ್ಮದ್ ಪಟೇಲರನ್ನು ಮುಖ್ಯಮಂತ್ರಿ ಅಭ್ಯರ್ಥಿ ಮಾಡಲು ಎಂದೂ ಬಯಸಿರದಿದ್ದರೂ, ಸ್ವತಃ ಮೋದಿಯೇ ಅಹ್ಮದ್ ಪಟೇಲ್ ಎಂಬ ಮುಸ್ಲಿಮನನ್ನು ಕಾಂಗ್ರೆಸ್ಸಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿ, ಆ ಮೂಲಕ ಕಾಂಗ್ರೆಸ್ ಪಕ್ಷವು ಹಿಂದೂ-ವಿರೋಧಿ ಪಕ್ಷ ಎಂದು ಗುಜರಾತಿನ ಮತದಾರರ ತಲೆಯಲ್ಲಿ ಕೋಮು ವಿಷ ತುಂಬಿಸಿ ಹಿಂದೂಗಳ ವೋಟನ್ನು ತನ್ನ ಬಿಜೆಪಿ ಪಕ್ಷದತ್ತ ಧ್ರುವೀಕರಣಗೊಳಿಸುವ ಅತ್ಯಂತ ಪರಿಣಾಮಕಾರಿ ಮನೋವೈಜ್ಞಾನಿಕ ರಣತಂತ್ರ ಮೋದಿಯ ಈ ಕುತಂತ್ರದ ಹಿಂದೆ ಅಡಗಿತ್ತು.

ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಒಮ್ಮೆ ಒಂದು ಮುಸ್ಲಿಮರ ಸಮಾರಂಭಕ್ಕೆ ಹೋಗಿ ಅಲ್ಲಿ ಮುಸ್ಲಿಮರು ಕೊಟ್ಟ ಲೇಸ್ ಟೊಪ್ಪಿಯನ್ನು ತೊಡಲು ಬಹಿರಂಗವಾಗಿ ನಿರಾಕರಿಸಿದ್ದು ದೇಶವಿಡಿ ಪತ್ರಿಕೆಗಳಲ್ಲಿ ದೊಡ್ಡದಾಗಿ ಸುದ್ದಿಯಾಗಿತ್ತು. ಈ ಒಂದೇ ಒಂದು ಘಟನೆಯಿಂದ ಸಂಘ ಪರಿವಾರದ ಕಾಲಾಳುಗಳಲ್ಲಿ ಮೋದಿಯ ಜನಪ್ರಿಯತೆ ಅದ್ಭುತವಾಗಿ ಹೆಚ್ಚಿತು. ಆದರೆ ಆಮೇಲೆ ಬಹಿರಂಗವಾದ ಕರಾಳ ಸತ್ಯ ಏನೆಂದರೆ ಮೋದಿ ತನ್ನ ಕೆಲವು ಮುಸ್ಲಿಂ ಚೇಲಾಗಳಿಗೆ ಹಣ ಕೊಟ್ಟು ಅವನೇ ರಚಿಸಿದ ಪೂರ್ವ-ಯೋಜಿತ (ಪ್ರೀ-ಸ್ಕ್ರಿಪ್ಟೆಡ್) ... ಇದಾಗಿತ್ತು, ಅಂದರೆ ಮುಸ್ಲಿಮರು ಒಂದು ಸಭೆ... ಆಯೋಜಿಸುವುದು ಮತ್ತು ಅದಕ್ಕೆ ಮೋದಿ... ಆಹ್ವಾನಿಸುವುದು ಹಾಗೂ ಮೋದಿಗೆ ವೇದಿ... ಎಲ್ಲರೆದುರು ಮುಸ್ಲಿಮರು ತೊಡುವ ಲೇಸ್ ... ಕೊಡುವುದು, ನಂತರ ಎಲ್ಲ ಪತ್ರಕರ್ತರ ಎದುರೇ ... ಆ ಮುಸ್ಲಿಮರ ಟೊಪ್ಪಿ ತೊಡಲು ನಿರಾಕರಿಸು... ಈ ರೀತಿಯ ಒಂದು ಸ್ಕ್ರಿಪ್ಟನ್ನು ಮೋದಿಯ ... ಕಂಪನಿ (APCO) ಮೊದಲೇ ತಯಾರಿಸಿ ... ಹಾಗೂ ಗುಟ್ಟಾಗಿ ಮುಸ್ಲಿಮರ ಸಹಿತ ಎಲ್ಲರಿಂದ ... ರಿಹರ್ಸಲ್ ಸಹ ಮಾಡಿಸಿತ್ತು. ಆದರಂತೆ ಮೋದಿ... ಆ ಚೇಲಾ ಮುಸ್ಲಿಂ ನೇತಾರರು ಸಾರ್ವಜನಿಕ ವೇ... ಮೇಲೆ ಆ ಲೇಸ್ ಟೋಪಿಯ ನಾಟಕ ಆಡಿದ... ಒಂದು ಸಣ್ಣ ನಾಟಕ ಸಂಕುಚಿತ ಬುದ್ಧಿಯ ಹಿಂದ... ಮೋದಿಯ ಜನಪ್ರಿಯತೆಯನ್ನು ಆಕಾಶದೆತ್ತರಕ್ಕೆ ... ಕಾರಣ ಈ ಸಣ್ಣ ನಾಟಕಕ್ಕೂ ಅಂತಹ ಒಂದ... ಮನೋವೈಜ್ಞಾನಿಕ ಪ್ರಭಾವ ಇತ್ತು!

ಮೋದಿ 1978 ರಿಂದಲೂ ಹೆಜ್ಜೆ ಹೆಜ್ಜೆ... ಮುಸ್ಲಿಂ-ದ್ವೇಷಿ ಎಂಬುದನ್ನು ಬಹಿರಂಗವಾಗಿ ಪ್ರದ... ಆರೆಸ್ಸೆಸ್ ನೇತಾರರ ವಿಶ್ವಾಸ ಗಳಿಸಿ ಬಿಜೆಪಿಯ... ಸ್ಥಾನ ಭದ್ರಗೊಳಿಸುತ್ತಾ ಹೋಗಿ, ಕೊನೆಗೆ ಗು... ರಾಜಕಾರಣದಲ್ಲಿ ಗಟ್ಟಿಯಾಗಿ ಬೇರೂರಿದ್ದು! ಮೋ... ಮುಸ್ಲಿಂ ದ್ವೇಷದ ಪರಿಣಾಮಕಾರಿ ನಾಟಕ ನೋ... ಆರೆಸ್ಸೆಸ್ ನೇತಾರರು ಅಡ್ವಾಣಿಯನ್ನು ಹಿಂದ... ರಾಷ್ಟ್ರಮಟ್ಟದಲ್ಲಿಯೂ ಮೋದಿಯನ್ನು ಮುನ್ನೆಲೆಗೆ ... ಆರೆಸ್ಸೆಸ್ ಮತ್ತು ಸಂಘ ಪರಿವಾರದ ಸ್ಥಾಪಕರಲ್ಲಿ... ರಿಂದಲೂ ಆಳವಾಗಿ ಬೇರೂರಿರುವ ಮುಸ್ಲಿಂ-ದ್ವೇ... ಮೋದಿ ಸಂಘ ಪರಿವಾರದ ಚರಿತ್ರೆ ಓದಿ ಸೂ... ಗುರುತಿಸಿದ್ದನು. ಅದಕ್ಕಾಗಿ ಆರೆಸ್ಸೆಸ್‌ನಲ್ಲಿ ತ... ಗಟ್ಟಿಗೊಳಿಸಲು ಮತ್ತೂ ರಾಷ್ಟ್ರ ರಾಜಕಾರಣದಲ್ಲಿ... ಏರಲು ಮುಸ್ಲಿಂ-ದ್ವೇಷದ ಬಹಿರಂಗ ನಾಟಕವನ್ನು ಮಾಡಿಕೊಂಡೇ ಸಂಘ ಪರಿವಾರದ ಅಪಾರ ವಿಶ್ವಾಸ...





ವಿಚಾರದವರೇ ನಂತರ ಹೇಳಬೇಕು. ಹಾಗಿರುವಾಗ ಹಿಂದೂ ಸಮಾಜದಲ್ಲಿ ಕೇವಲ ಹುಟ್ಟಿನ ಆಧಾರದಲ್ಲಿ ಬೇರುಬಿಟ್ಟ ಹುಸಿ ಜಾತಿ ಶ್ರೇಷ್ಠತೆ ಗೀಳನ್ನು ಕಿತ್ತೆಸೆಯುವ ಕಾಲ ಬಂದಿರುವಾಗ ಕೃಷ್ಣ ಸುಧಾಮನ ಕಾಲು ತೊಳೆಯುವ ದೃಶ್ಯವನ್ನು ಅಥವಾ ಬ್ಯಾನರನ್ನು ಈಗಿನ ಮೊಸರು ಕುಡಿಕೆ-ದಹಿಹಂಡಿ ಸಮಾರಂಭದಲ್ಲಿ ಸೇರಿಸಬೇಕೇ ಬೇಡವೇ ಎಂಬ ಜಿಜ್ಞಾಸೆ ಅಗತ್ಯವಿದೆ.


ನಮ್ಮ ಜಗಜ್ಯೋತಿ ಬಸವಣ್ಣನವರು ನಿಜವಾಗಿಯೂ ದಲಿತರಾಗಿದ್ದ ಹರಳಯ್ಯ ಮತ್ತು ಮಾದಿಗರ ಚೆನ್ನಯ್ಯ ಇವರ ಕಾಲು ತೊಳೆದು ಗೌರವಿಸಿದ್ದರು! ಆದರೆ ಕೃಷ್ಣ ಹಾಗೆ ದಲಿತರ ಅಥವಾ ಕೆಳಜಾತಿಯವರ ಅಥವಾ ಮಹಿಳೆಯರ ಕಾಲು ಎಂದೂ ತೊಳೆಯಲಿಲ್ಲ. ಹಾಗಾಗಿ ಕೃಷ್ಣ ಸಾಮಾಜಿಕ ನ್ಯಾಯದ ಸಂಕೇತ ಎಂದು ಇವತ್ತು ಜನ್ಮಾಷ್ಟಮಿ ಸಮಾರಂಭದಲ್ಲಿ ಕೆಲವು ಮುಖಂಡರು ಮತ್ತು ಸ್ವಾಮೀಜಿಗಳು ಹೇಳಿದ್ದು ಸರಿಯಲ್ಲ.

-ಹರೀಶ್ ಎಂ ರೈ, ಉಡುಪಿ

ಮೂಕಾಂಬಿಕೆಯ ದುಡ್ಡಿಗೆ ಕನ್ನ?

ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯದಂತಹ ದಕ ಜಿಲ್ಲೆಯ ದಕ್ಷಿಣ ಭಾಗ ಮತ್ತು ಕಾಸರಗೋಡಿನ ಕೆಲ ಪ್ರದೇಶಗಳ ಪರಿಚಯ ನಿಮಗಾದರೆ ಈ 'ಅಡ್ಕ' ಎಂಬ ಶಬ್ದದಿಂದ ತಪ್ಪಿಸಿಕೊಳ್ಳಲು ನಿಮಗೆ ಸಾಧ್ಯವೇ ಇಲ್ಲ. ಬೆಟ್ಟಗುಡ್ಡ ಇಳಿಜಾರು ಸಮತಟ್ಟು ಕಣಿವೆಕೊರಕಲೆಂಬ ಒಂದು ನಿರ್ದಿಷ್ಟ ಪರಿಸರದ ಪ್ರಾದೇಶಿಕ ಚಿತ್ರಣವನ್ನು ನೀಡುವಂತಹ ಸ್ಥಳೀಯ ಶಬ್ದವೇ ಈ ಅಡ್ಕ. ಬದಿಯಡ್ಕ, ಕುದಿಯಡ್ಕ, ಅಡ್ಯನಡ್ಕ, ಸಾರಡ್ಕ, ಪೇರಡ್ಕ, ಜಾರಡ್ಕ ಇಂತಹ ಲೆಕ್ಕವಿಲ್ಲದಷ್ಟು ಅಡ್ಕಗಳು ಇಲ್ಲಿದ್ದರೂ ಇವೆಲ್ಲಕ್ಕೂ ದೊಡ್ಡದಾಗಿರುವ ಹಿರಿಯಡ್ಕ ಇರುವುದು ಮಾತ್ರ ದೂರದ ಉಡುಪಿ ಪರಿಸರದಲ್ಲಿ. ಇಂತಹ ಒಂದು ಅಡ್ಕವೇ ನಮ್ಮ ಕಲ್ಲುಗಳ ಪರಿಸರದ ಕಲ್ಲಡ್ಕ. ಇಂತಹ ಕಲ್ಲಡ್ಕ ಇದೀಗ ಮತ್ತೆ ಸುದ್ದಿಯಲ್ಲಿದೆ. ಅದು ಸರಕಾರ ಅಲ್ಲಿನ ಶಾಲೆ ಮಕ್ಕಳ ಅನ್ನ ಕಸಿದಿದೆ ಎಂಬ ಕಾರಣಕ್ಕೆ.

ಸಿಎಂ ಸಿದ್ದರಾಮಯ್ಯನವರ ಬದ್ಧ ದ್ವೇಷಿ; ಕಾಂಗ್ರೆಸಿನ ಸ್ವಯಂನಿವೃತ್ತ ಹುಲಿಯಾದ ಮಂಗಳೂರಿನ ಜನಾರ್ದನ ಪೂಜಾರಿಯವರೇ ಈ ಬಗ್ಗೆ ಉರಿದೆದ್ದು ಕಲ್ಲಡ್ಕ ಶಾಲೆಯ ಮಕ್ಕಳ ಅನ್ನವನ್ನು ಕಿತ್ತುಕೊಂಡ ಸಿದ್ದರಾಮಯ್ಯನದ್ದು ರಾಕ್ಷಸೀ ಕೃತ್ಯ. ಹಾಗಾಗಿ ಕರ್ನಾಟಕಕ್ಕೆ ಅಮಿತ್ ಶಾ ಬಂದದ್ದು ಒಳ್ಳೇದೇ ಆಯಿತು. ಯಾಕೆಂದರೆ, ಅಮಿತ್ ಶಾ ಹೋದ ರಾಜ್ಯಗಳಲ್ಲೆಲ್ಲ ಅಲ್ಲಿನ ಮುಖ್ಯಮಂತ್ರಿಗಳು ಕುರ್ಚಿ ಬಿಟ್ಟಿದ್ದಾರೆ.




ಇಲ್ಲೂ ಕೂಡ ಹಾಗೇ ಆಗಬೇಕು ಹ್ಹಾ ಹ್ಹಾ ಹ್ಹಾ ಎಂದವರು ವಿಕಟ ನಗೆ ಬೀರಿದ್ದಾರೆ. ಆದರೆ ಕಟ್ಟರ್ ಹಿಂದೂತ್ವದ ದೃಷ್ಟಿಯಿಂದ ನೋಡಿದರೆ ಸಿದ್ದರಾಮಯ್ಯರ ಈ ನಡೆ ಹಿಂದೂತ್ವದ ಪರವಾಗಿಯೇ ಇದ್ದಂತಿದೆ ಎನ್ನುವುದು ವಿಚಿತ್ರವಾದರೂ ಸತ್ಯ.

ಈ ಅವಿಭಜಿತ ದಕ ಜಿಲ್ಲೆಯನ್ನು ದೇವಾಲಯಗಳ ನಾಡು ಎನ್ನುವವರಿದ್ದಾರೆ. ಕೊಲ್ಲೂರು, ಉಡುಪಿ, ಕಟೀಲು, ಸುಬ್ರಹ್ಮಣ್ಯ, ಧರ್ಮಸ್ಥಳದಂತಹ ಅನೇಕಾನೇಕ ಪ್ರಸಿದ್ಧ ದೇಗುಲಗಳು ಇಲ್ಲಿವೆ. ಆದರೆ ನೀವು ಕರ್ನಾಟಕದಲ್ಲಾಗಲೀ ದಕ ಜಿಲ್ಲೆಯಲ್ಲೇ ಆಗಲೀ ಒಂದು ಸಮೀಕ್ಷೆಯನ್ನು ನಡೆಸಿದರೆ ಉಡುಪಿ, ಕಟೀಲು, ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ಕಾಯಮ್ಮಾಗಿ ಯಾತ್ರೆ ಹೋಗುವ ಪ್ರವಾಸಿಗರು ನಿಮಗಿಲ್ಲಿ ಕಾಣಸಿಕ್ಕರೆ ಇದೇ ಕೊಲ್ಲೂರಿಗೆ ಹೋಗುವಂತವರು ಮಾತ್ರ ಬಹಳ ಕಡಿಮೆಯೆಂಬುವುದು ನಿಮಗೆ ಗೋಚರವಾಗುತ್ತದೆ. ಇದನ್ನು ಅಲ್ಲಿನ ದೇಗುಲ ಪರಿಚಾರಕರೂ ಒಪ್ಪುತ್ತಾರೆ. ಹಾಗಾದರೆ ಇಲ್ಲಿಗೆ ಬರುವವರಾದರೂ ಯಾರು? ಅದು ಕೇರಳಿಗರು ತಪ್ಪಿದರೆ ತಮಿಳರು ಅಷ್ಟೆ. ಹಿಂದೂ ಮುಸಲ್ಮಾನರೆನ್ನದೇ ಪವಿತ್ರ ಗೋಮಾಂಸದ ಬಗ್ಗೆ ಯಾವ ತಕರಾರುಗಳಿಲ್ಲದ ಬಹುತೇಕ ಗೋಮಾಂಸ ಭಕ್ಷಕರೇ ಆಗಿರುವ ಕೇರಳಿಗರ ಪಾಪಿ ಹುಂಡಿಹಣದ ಪಾಲು ಅನುಭವಿಸಿ ಅವರ ಪಾಪವನ್ನು (ಗಮನಿಸಿ ಸನಾತನವಾದದ ಪ್ರಕಾರ ಗೋಹತ್ಯೆ ಹಾಗು ಗೋಮಾಂಸ ಭಕ್ಷಣೆ ಎಲ್ಲಕ್ಕಿಂತಲೂ ಪರಮ ಪಾಪಕಾರ್ಯ) ನಿಷ್ಪಾಪಿ ಶಾಲೆಯ ಮಕ್ಕಳ ಮೇಲೆ ಹೇರೋದು ಯಾವ ನ್ಯಾಯ? (ಕೆಲವರ್ಷಗಳ ಹಿಂದೆ ಟಿವಿಯಲ್ಲಿ ಸ್ವಾಮೀಜಿಯೊಬ್ಬ "ಭಿಕ್ಷುಕರಿಗೆ ಯಾವ ಕಾರಣಕ್ಕೂ ಭಿಕ್ಷೆ ನೀಡಬೇಡಿ. ಭಿಕ್ಷೆ ನೀಡಿದರೆ ಅವರ ಪಾಪಕರ್ಮಗಳು ನಿಮ್ಮನ್ನೇ ಸುತ್ತಿಕೊಳ್ಳುತ್ತದೆ" ಎಂದು ಹೇಳಿದ್ದ. ಆ ನ್ಯಾಯ ಇಲ್ಲೂ ಅನ್ವಯವಾಗದೇ?)

ಕೆಲವರ್ಷಗಳ ಹಿಂದೆ ಒಂದು ವಾರದ ಮಟ್ಟಿಗೆ ಕೇರಳದ ಎರ್ನಾಕುಲಮ್‌ನಲ್ಲಿದ್ದೆ. ಅಲ್ಲಿ ಎಲ್ಲಿ ನೋಡಿದರೂ ಬಿರಿಯಾನಿಗಳು ಆದರಲ್ಲೂ ಬೀಫ್ ಬಿರಿಯಾನಿಗಳು ಇತ್ಯಾದಿ ಐಟಮ್‌ಗಳು ತುಂಬಾ ಸಾಮಾನ್ಯ. ಅಷ್ಟೇ ಯಾಕೆ, ದುಃಖಿತರು ಮತ್ತು ಬೇಜಾರಿನವರೇ ತುಂಬಿರುವ ಆಸ್ಪತ್ರೆ ಕ್ಯಾಂಟೀನಿನಲ್ಲೂ ಕೂಡ ಮಾಮೂಲಿ ಊಟ ಎಂಬಂತೆ ಜನ ಬಿರಿಯಾನಿ ಹೊಡೆಯುತ್ತಾರೆ. ಬೀಫ್ ಬಗ್ಗೆ ತಕರಾರಿರುವ ಕರ್ನಾಟಕದಂತಹ ಪ್ರದೇಶಗಳ ಗೊಡ್ಡು ಹಸುಗಳು ಬಹುತೇಕ ವ್ಯಾಪಾರ ದೃಷ್ಟಿಯಿಂದ ಸಪ್ಲೈ ಆಗುವುದು ಇದೇ ಕೇರಳಕ್ಕೆ. ಸದಾ ಯುದ್ಧಕ್ಕೆ ಕಾಲು ಕೆರೆದು ನಿಂತು ವೈರಿ ಪಾಕಿಗಳಿಗೆ ನೇರ ಸಪೋರ್ಟ್ ಮಾಡುವ ಚೈನಾದ ವಸ್ತುಗಳನ್ನು ತಿರಸ್ಕರಿಸುವ ಚೆಡ್ಡಿ ಅಭಿಯಾನದ ಮಾದರಿಯಲ್ಲೇ ಇನ್ನೂ ಒಂದು ಹೆಜ್ಜೆ ಪಾಪ-ಕರ್ಮ ಹಾಗು ಆಧ್ಯಾತ್ಮಿಕವಾಗಿ ಯೋಚಿಸಿ ಈ ಪಾಪಿ ಕೇರಳಿಗರ ಹುಂಡಿಹಣ ನಮ್ಮ ಮಕ್ಕಳಿಗ್ಯಾಕೆ? ಎಂದು ತಿರಸ್ಕರಿಸೋ ತೀರ್ಮಾನ ಇನ್ನೂ ಒಳ್ಳೆಯದಲ್ಲವೇ? ಈ ಬಗ್ಗೆ ಸಿದ್ದರಾಮಯ್ಯನವರನ್ನು "ಹಿಂದೂ ಹೃದಯ ಸಾಮ್ರಾಟ" ಎಂದು ಮೆಚ್ಚುವ ಬದಲು ಹೀಗೆಲ್ಲಾ ಟೀಕಿಸುವುದು ತರವೇ?

ಯಡಿಯೂರಪ್ಪನ ಕಾಲದಲ್ಲಿ ಗೋಕರ್ಣದ ತಿಜೋರಿಯನ್ನು ಅಕ್ರಮವಾಗಿ ರಾಘವೇಶ್ವರ ಸ್ವಾಮಿಯ ಕೈಗೆ ಅನೈತಿಕವಾಗಿ ಕೊಟ್ಟಂತೆ ಕರಾವಳಿ ಕರ್ನಾಟಕದ ಮತ್ತೊಂದು ಸಿರಿವಂತ ದೇಗುಲ ಕೊಲ್ಲೂರಿನ ಹಣವನ್ನು ಕಲ್ಲಡ್ಕಕ್ಕೆ ಹರಿಸುವ ಯೋಜನೆಗೆ ಕೈಹಾಕಲಾಯಿತು. ಜಯಲಲಿತಾ, ಎಂಜಿಆರ್, ಯೇಸುದಾಸ್, ಇಳಯ ರಾಜಾರಂತವರ ಮೆಚ್ಚಿನ (ಎಂಜಿಆರ್ ಕೊಟ್ಟ ತಂಗವಾಳ್ ಅಂದರೆ ಚಿನ್ನದ ಕತ್ತಿ ಮತ್ತು "ಎಸ್ಪಿಬಿ ಹಾಡುವ ನನ್ನ ಹಾಡಿಗೆ ಕಾಸು ಕೊಡಬೇಕು" ಎಂದು ಇತ್ತೀಚೆಗೆ ಚಿಲ್ಲರೆ ಜಗಳವಾಡಿದ ಇಳಯರಾಜಾರಂತವರೇ ಧರ್ಮಾರ್ಥವಾಗಿ ಕೊಟ್ಟ ಚಿನ್ನ ಬೆಳ್ಳಿಯ ಕಾಣಿಕೆಗಳೂ ಇಲ್ಲಿವೆ) ಕೊಲ್ಲೂರು ದೇಗುಲದ ಕಥೆಯ ಪ್ರಕಾರ ಕೇರಳಕ್ಕೆ ಹೋಗಬೇಕಿದ್ದ ದೇವಿ ಭಕ್ತನ ಅಚಾತುರ್ಯದ ಕಾರಣಕ್ಕೆ (ಹಿಂದೆ ನೋಡಬೇಡವೆಂದರೂ ಸದ್ದು ಕೇಳಿಬರಡ ಕಾರಣ ಹಿಂತಿರುಗಿ ನೋಡಿದ್ದಕ್ಕೆ) ಕೊಲ್ಲೂರಿನಲ್ಲಿ ನೆಲೆಯಾದದ್ದಂತೆ. ಅಂದರೆ ಈಕೆ ಎಷ್ಟೆಂದರೂ ಕೇರಳಿಗರ ದೇವಿಯೇ. ಈ ಕಾರಣಕ್ಕಾಗಿಯೇ ಬಹುತೇಕ ಭಕ್ತರೂ ಅಲ್ಲಿನವರೇ. ಇಂತಹ ಕೇರಳಿಗರ ದೇವಿಯ ಹಣ ಸ್ಥಳೀಯರು ಲಪಟಾಯಿಸುವುದರಲ್ಲಿ ಅರ್ಥವಿದೆಯೇ?

ಎಂಟತ್ತು ವರ್ಷಗಳ ಹಿಂದೆ ಮುಜರಾಯಿ ಇಲಾಖೆಗೆ ಸೇರಿದ ಪುತ್ತೂರು ಮಹಾಲಿಂಗೇಶ್ವರ ದೇಗುಲದ ಹಣದ ವಿಚಾರದಲ್ಲೂ ಇಂತಹ ಸಣ್ಣದೊಂದು ತಕರಾರು ಎದ್ದಿತ್ತು. ದೇವಸ್ಥಾನದ ಹೊರಭಾಗದಲ್ಲಿ 'ಮಹಾಲಿಂಗೇಶ್ವರ ದೇಗುಲ' ಎಂದು ಬರೆದಿರುವ ಒಂದು ದೊಡ್ಡ ಕಾಣಿಕೆಡಬ್ಬವನ್ನು ಸ್ಥಾಪಿಸಲಾಗಿತ್ತು. ವಸ್ತುಸ್ಥಿತಿಯೆಂದರೆ ಆ ಡಬ್ಬಕ್ಕೂ ಮಹಾಲಿಂಗೇಶ್ವರನಿಗೂ ಯಾವ ಸಂಬಂಧವೂ ಇದ್ದಿರಲಿಲ್ಲ. ಅದು ಸಂಘಪರಿವಾರದ ಡಬ್ಬವಾಗಿತ್ತು. ದೇವರಿಗೆ ಕಾಣಿಕೆಯೆಂದು ಭಕ್ತರು ಇದರಲ್ಲಿ ಹಾಕಿದ ಹಣವೆಲ್ಲ ನೇರವಾಗಿ ಸಂಘಿಗಳ ಕೈ ಸೇರುತಿತ್ತು. ಅದೇ ರೀತಿ ಗೋಕರ್ಣದ ಭಕ್ತರ ಹಣ ರಂಗೀಲಾ ರಾಘುವಿನ ವೈಯಕ್ತಿಕ ಕೋರ್ಟ್ ಕೇಸಿಗೆಂದೇ ಬಳಿಕ ಖರ್ಚಾದರೆ, ಕೊಲ್ಲೂರಿನ ಹಣ ಕಲ್ಲಡ್ಕಕ್ಕೆ ಹರಿದುಬಂದು ಅದು ಕೇವಲ ವಿದ್ಯಾರ್ಥಿಗಳ ವಿದ್ಯೆಗಷ್ಟೆ ಖರ್ಚಾಯಿತೆಂದರೆ ನಾವೆಲ್ಲಾ ನಂಬಲೇಬೇಕಷ್ಟೆ.



ಕೊಲ್ಲೂರಿನ ಪರಿಸರದಲ್ಲಿ ಅಥವ ಕರಾವಳಿ ಅಥವ ಇನ್ನಿತರ ಕಡೆಗಳಲ್ಲಿನ ಬಡ ಹಿಂದೂ ದೇಗುಲದ ಆಡಳಿತದಡಿಯಲ್ಲಿಯೇ ಇರುವಂತಹ ಅನೇಕಾನೇಕ ಶಾಲೆಗಳು ಅಥವ ನಿರ್ಲಕ್ಷ್ಯಕ್ಕೊಳಗಾದ ಸರಕಾರಿ ಶಾಲೆಗಳು ಸರಿಯಾದ ಕುರ್ಚಿ ಬೆಂಚುಗಳು ಅಥವ ಹೆಣ್ಣುಮಕ್ಕಳ ಸರಿಕಟ್ಟಿನ ಶೌಚಾಲಯವಿರದಂತಹ ದುಸ್ಥಿತಿಯಲ್ಲಿರುವಾಗ ಎಲ್ಲಾ ರಾಜಕೀಯ ಒಡನಾಟಗಳಿರುವ ದೂರದ ಊರಿನ ದೊಡ್ಡ ವ್ಯಕ್ತಿಯೊಬ್ಬರು ನಡೆಸುವ ಒಂದು ಖಾಸಗಿ ಶಾಲೆಯಷ್ಟೇ ಯಡಿಯೂರಪ್ಪನ ಕಣ್ಣಿಗೆ ಬಿದ್ದಂತಹ ಕಾರಣವಾದರೂ ಏನಿದೆ? ಆ ಸಮಯದಲ್ಲಿ ನಡೆದ ಆರೆಸ್ಸೆಸ್ ಸಮಾವೇಶಗಳಲ್ಲಿ, ಸಂಘೀ ಸಮಾರಂಭಗಳಲ್ಲಿ ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳನ್ನು ಬಳಸಿಕೊಂಡಂತಹ ಪ್ರಕರಣಗಳಿವೆ. ಇಲ್ಲೆಲ್ಲಾ ವಿದ್ಯೆಗೆ ಮಹತ್ವವೋ? ಇಲ್ಲಾ ಸಂಘೀ ಚಟುವಟಿಕೆಗಳಿಗೆ ಮಹತ್ವವೋ? ಎಂಬುದನ್ನು ಬಲ್ಲವರೇ ಹೇಳಬೇಕಷ್ಟೆ. ಬೃಹತ್ ಸಂತ ಸಮ್ಮೇಳನ ನಡೆದು ಕಲ್ಲಡ್ಕದಲ್ಲಿ ಕೋಟಿಗಟ್ಟಲೆ ಖರ್ಚಿನ ರಾಮ ಮಂದಿರವೂ ಇದೀಗ ತಲೆಯೆತ್ತಿದೆ. ದುಡ್ಡಿಗೆ ಅಲ್ಲಿ ಖಂಡಿತ ಬರವಿರದು. ಹಾಗಂತ, ಯಾವ ರಾಜಕೀಯ ಕಾರಣಕ್ಕೂ ಮಕ್ಕಳ ವಿದ್ಯೆ ಹಾಗು ದಾಸೋಹಕ್ಕೆ ಯಾವತ್ತಿಗೂ ತೊಂದರೆಯಾಗಕೂಡದು. ಹೇಗೂ ಸರಕಾರದ ದಾಸೋಹ ಯೋಜನೆಗಳೇ ಇವೆಯಲ್ಲ, ಅದಾದರೂ ಮುಂದುವರೆಯಬೇಕು. ಆದೇ ರೀತಿ ಭಕ್ತರ ದುಡ್ಡು ಯೋಗ್ಯ ಸಂಭಾವಿತರ ಕೈ ಸೇರಿ ಸದುಪಯೋಗವನ್ನ ಪಡೆಯುವಂತಿದ್ದರಷ್ಟೇ ಆ ದೇವರೂ ಕೂಡ ಮೆಚ್ಚಿಯಾಳೆಂಬುವುದು ಕೊಲ್ಲೂರ ಮಹಾ ಮಾತೆ ಮೂಕಾಂಬಿಕೆಯಾಣೆಗೂ ಸತ್ಯ.

-ಸತೀಶ ಪೂಜಾರಿ, ಮಂಗಳೂರು

ಉಪ್ಪು ತಿಂದವರು ಹಾಲು ಕುಡಿಯುತ್ತಿದ್ದಾರೆ

ಡಿ.ಕೆ.ಶಿವಕುಮಾರ್ ಮನೆ ಮೇಲೆ ಐಟಿ ದಾಳಿಯಾದ ನಂತರ ಬಹಳಷ್ಟು ಜನರು "ಉಪ್ಪು ತಿಂದವನು ನೀರು ಕುಡಿಯಲೇ ಬೇಕು" ಎಂದು ತತ್ವಜ್ಞಾನ ಮಾತನಾಡುತ್ತಿದ್ದಾರೆ. ಉಪ್ಪು ತಿಂದವನು ನೀರು ಕುಡಿಯಬೇಕು ನಿಜ. ಆದರೆ ಗುಜರಾತಿನಲ್ಲಿ ಸಣ್ಣ ಸಣ್ಣ ಮಕ್ಕಳನ್ನು ತ್ರಿಶೂಲದಿಂದ ಚುಚ್ಚಿ ಹೊಟ್ಟೆ ಬಗೆದು ಹತ್ಯಾಕಾಂಡ ನಡೆಸಿದವರು, ನಕಲಿ ಎನ್‌ಕೌಂಟರ್ ನಡೆಸಿದವರು, ಸರಕಾರದ ಆಸ್ತಿಗಳನ್ನು ಕವಡೆ ಬೆಲೆಗೆ ತಮ್ಮವರಿಗೆ ಪರಭಾರೆ ಮಾಡಿದವರು, ವಂಚಕ ಉದ್ಯಮಿಗಳಿಗೆ ಕಾನೂನಿನಿಂದ ರಕ್ಷಣೆ ನೀಡಿದವರು, ಶತಭ್ರಷ್ಟರು, ಕೊಲೆಗಾರರು, ತಮ್ಮದೇ ಪಕ್ಷದ ಕರಸೇವಕರಿದ್ದ ಟ್ರೇನಿಗೆ ತಾವೇ ಬೆಂಕಿ ಹಚ್ಚಿ ಅದನ್ನು ಮುಸ್ಲಿಮರ ತಲೆಗೆ ಕಟ್ಟಿದವರು... ಹೀಗೆ ಎಲ್ಲರೂ ಇಂದು ಉಪ್ಪು ತಿಂದ ಮೇಲೆ ನೀರು ಕುಡಿಯುವ ಬದಲು ಹಾಲು ಕುಡಿಯುತ್ತಿದ್ದಾರಲ್ಲ! ಮೃಷ್ಟಾನ್ನ ಭೋಜನ ಸವಿಯುತ್ತಿದ್ದರಲ್ಲಾ? ಹಾಗಾದರೆ ಉಪ್ಪು ತಿಂದವ ನೀರು ಕುಡಿಯಲೇ ಬೇಕು ಅನ್ನುವ ನಾಣ್ನುಡಿ ಎಲ್ಲಿ ಹೋಯಿತು? ಆ ಗಾದೆ ಗುಜರಾತಿಗೆ ಅನ್ವಯ ಆಗುವುದಿಲ್ಲವೇ?

ನಾನು ಶಿವಕುಮಾರರನ್ನು ಬೆಂಬಲಿಸುತ್ತಿಲ್ಲ. ಆದರೆ ಹೋದಲ್ಲೆಲ್ಲಾ ಈ ಸವಕಲು ಗಾದೆ ಬಳಸುತ್ತಿರುವವರನ್ನು ಪ್ರಶ್ನಿಸುತ್ತಿದ್ದೇನೆ ಅಷ್ಟೇ. ಭಾರತದ್ದ ಮಹಾಭ್ರಷ್ಟ ವಾತಾವರಣದಲ್ಲಿ ಈ ಗಾದೆ ಎಂದೋ ತನ್ನ ಸಮಂಜಸತೆಯನ್ನು ಕಳೆದುಕೊಂಡಿದೆ. ನರಹಂತಕರು ಭಾರತದ ಅತ್ಯುಚ್ಚ ಸ್ಥಾನ ಅಲಂಕರಿಸಬಲ್ಲರು ಹಾಗೂ ಭಕ್ತ ಕುರಿಗಳು ಮತ್ತು ಪೇಡ್ ಮಾಧ್ಯಮಗಳು ಆ ನರಾಧಮರನ್ನು ಹೊತ್ತುಕೊಂಡು ಕುಣಿದಾಡುವರು.

■ ಪ್ರಕಾಶ್ ಗಾಂಭೀರ್, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಮೋದಿ ಯಶಸ್ವಿಯಾಗಿದ್ದು, ಮೋದಿ ತನ್ನ 17 ನೇ ವಯಸ್ಸಿಗೆ ಮನೆಬಿಟ್ಟು ಓಡಿ ಹೋಗಿ 22 ನೇ ವಯಸ್ಸಿನವರೆಗೆ ಒಂದು ಗುಜರಾತಿ ನಾಟಕ ಕಂಪನಿಯಲ್ಲಿ ಕೆಲಸ ಮಾಡಿದ್ದರಿಂದ ಅವನು ಎಲ್ಲಾ ತರದ ನಾಟಕ ಆಡುವುದರಲ್ಲಿ ನಿಸ್ಸೀಮನಾಗಿದ್ದು ಆ ನಾಟಕ ಕಂಪನಿಯಲ್ಲಿಯ ನಟನೆಯ ಅಭ್ಯಾಸವನ್ನು ರಾಷ್ಟ್ರ ರಾಜಕಾರಣಕ್ಕೆ ಬಂದ ಮೇಲೂ ಮೋದಿ ಮುಂದುವರಿಸಿದ್ದಾನೆ. ಅಹ್ಮದ್ ಪಟೇಲರನ್ನು ಕಾಂಗ್ರೆಸ್ಸಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಮೋದಿಯೇ ಬಿಂಬಿಸುವುದರ ಹಿಂದೆಯೂ ಮತದಾರರಲ್ಲಿಯ ಮುಸ್ಲಿಂರ ಬಗೆಗಿನ ಪೂರ್ವಾಗ್ರಹವನ್ನು ಎನ್-ಕ್ಯಾಶ್ ಮಾಡುವ ಮನೋವೈಜ್ಞಾನಿಕ ತಂತ್ರ ಅಡಗಿರುವುದು ಸತ್ಯ. ಈ ಮನೋವೈಜ್ಞಾನಿಕ ತಂತ್ರವನ್ನು ಕಾಂಗ್ರೆಸ್ಸಿನ ರಣತಂತ್ರಗಾರರು ಸರಿಯಾಗಿ ಗುರುತಿಸಿ ಪ್ರತಿತಂತ್ರ ಹೆಣೆದು ತಾವು ಮುಸ್ಲಿಂ ಪಕ್ಷಪಾತಿ ಅಥವಾ ಹಿಂದೂ ವಿರೋಧಿ ಅಲ್ಲ ಎಂದು ಮತದಾರರಲ್ಲಿ ಬಿಂಬಿಸಲು ಪ್ರಯತ್ನಿಸಿದರೆ ಈ ವರ್ಷದ ಕೊನೆಗೆ ನಡೆಯಲಿರುವ ಗುಜರಾತ್ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯ.

ಕರ್ನಾಟಕದಲ್ಲೂ ಮುಸ್ಲಿಂ ದ್ವೇಷವನ್ನೇ ಬಿಜೆಪಿ ಬಂಡವಾಳ ಮಾಡಿಕೊಳ್ಳುವ ಸಾಧ್ಯತೆ ದಟ್ಟವಾಗಿದೆ. ಅದಕ್ಕಾಗಿ ವಿನಾಕಾರಣ "ಸಿದ್ದರಾಮಯ್ಯ ಸರಕಾರ ಗಣೇಶಚತುರ್ಥಿ ಆಚರಿಸಲು ಹೊಸದಾಗಿ ಹಲವಾರು ಕಠಿಣ ನಿಬಂಧನೆಗಳನ್ನು ಹಾಕಿದೆ" ಎಂದು ಹಸಿ ಸುಳ್ಳು ಪ್ರಚಾರ ಮಾಡುತ್ತಿದೆ. ಜತೆಗೆ ಇದೆ ತಿಂಗಳ ಕೊನೆಗೆ ನಡೆಯಲಿರುವ ಗಣೇಶ್ ಚತುರ್ಥಿ ಮೆರವಣಿಗೆಯ ಸಮಯದಲ್ಲಿ ಅಮಿತ್ ಶಾನ ಆದೇಶದಂತೆ ಉತ್ತರ ಕರ್ನಾಟಕದಲ್ಲಿ ಭೀಕರ ಕೋಮುಗಲಭೆ ಹುಟ್ಟು ಹಾಕುವ ಸಿದ್ಧತೆ ಸಹ ಸಂಘ ಪರಿವಾರ ಮಾಡಿದೆ ಎಂಬ ಸುದ್ದಿಯೂ ಬೆಡ್ರೂಮಿನಲ್ಲಿ ಹರಿದಾಡುತ್ತಿದೆ. ಹಾಗಾಗಿ ಕರ್ನಾಟಕ ಸರಕಾರ ಮತ್ತು ಪೊಲೀಸರು ಈ ಬಗ್ಗೆ ಸೂಕ್ತ ಮುಂಜಾಗ್ರತೆಯ ಕ್ರಮ ಕೈಗೊಂಡು ಕ್ರಿಮಿನಲ್ ಅಮಿತ್ ಶಾ ಮತ್ತು ಸಂಘ ಪರಿವಾರದ ಹುನ್ನಾರ ವಿಫಲಗೊಳಿಸಿದರೆ ಮುಂದಿನ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೇಲುಗೈ ಸಾಧ್ಯ.

-ಆರ್. ಬಿ. ಶೇಣವ, ಮಂಗಳೂರು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 30-08-2017 RNI No. KARKAN

'ಭೂಮಿಪುತ್ರ'ನಿಗೆ ಕತೆಯೇ ಫೈನಲ್ ಆಗಿಲ್ವಂತೆ



ನ್ಯಾಷನಲ್ ಕಾಲೇಜ್ ಗ್ರೌಂಡಿನಲ್ಲಿ ಅದ್ದೂರಿ ಮುಹೂರ್ತ ಮುಗಿಸಿಕೊಂಡಿದ್ದಷ್ಟೇ ಬಂತು, ಆಮೇಲೆ 'ಭೂಮಿಪುತ್ರ'ನ ಸುದ್ದಿ ಏನಾಯ್ತು ಎಂಬ ಸುಳಿವೇ ಇಲ್ಲ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಟ್ವೆಂಟಿ-ಟ್ವೆಂಟಿ ಸರ್ಕಾರದ ಸ್ಟೋರಿ ಇಟ್ಕೊಂಡು ಎಸ್.ನಾರಾಯಣ್ ಈ ಸಿನಿಮಾ ಮಾಡಲು ಮುಂದಾಗಿದ್ದರು. ಇದಕ್ಕೆ ಪ್ರಭುಕುಮಾರ್ ಅನ್ನೋರು ಕಾಸು ಸುರಿಯೋದಕ್ಕೂ ಕಮಿಟ್ ಆಗಿದ್ದರು. ರಾಜ್ಯ ಇನ್ನೇನು ಚುನಾವಣೆಗೆ ತಯಾರಾಗುತ್ತಿರುವ ಹೊತ್ತಲ್ಲಿ ಇಂತಹದ್ದೊಂದು ಸಿನಿಮಾ ಹೊಸ ಟ್ರೆಂಡನ್ನೇ ಹುಟ್ಟುಹಾಕಿತ್ತು. ಅತ್ತ ಬಿಜೆಪಿಯವರು ಉಪೇಂದ್ರರನ್ನು ಹೀರೊ ಆಗಿಸಿ ಯಡಿಯೂರಪ್ಪನವರ ಆಡಳಿತ ಕುರಿತು ರೀಲು ಸುತ್ತೋದಾಗಿ ಅನೌನ್ಸ್ ಮಾಡಲು 'ಭೂಮಿಪುತ್ರ' ಸಿನಿಮಾ ಪ್ರೇರೇಪಿಸಿತ್ತು. ಆದರೆ ಅದ್ಯಾಕೊ ಈಗ ಸ್ವತಃ 'ಭೂಮಿಪುತ್ರ' ಸಿನಿಮಾನೇ ಸೈಲೆಂಟಾಗಿದೆ. ಈ ಕುರಿತು ನಿರ್ದೇಶಕ ನಾರಾಯಣ್‌ರನ್ನ ಕೇಳಿದ್ರೆ ನಿರ್ಮಾಪಕರ ಹಣಕಾಸು ವಿಷಯದಿಂದಾಗಿ ಡಿಲೇ ಆಗುತ್ತಿದೆ ಎಂಬ ಕಾರಣ ಕೊಡುತ್ತಾರೆ. ಹಾಗಂತ ಪ್ರೊಡ್ಯೂಸರ್ ಪ್ರಭುಕುಮಾರ್ ಬಳಿ ಪ್ರಶ್ನೆ ಒಯ್ದರೆ ನಿರ್ದೇಶಕ ನಾಣಿ ಇನ್ನು ಕತೆಯನ್ನೇ ರೆಡಿ ಮಾಡಿಲ್ಲ ಸಿನಿಮಾ ಶುರುವಾಗೋದು ಎಲ್ಲಿಂದ ಬಂತು ಅಂತ ಶಾಕ್ ಕೊಟ್ಟಿದ್ದಾರೆ. ಪ್ರಭುಕುಮಾರ್ ಪ್ರಕಾರ ಕುಮಾರಸ್ವಾಮಿಯವರು ಇನ್ನೂ ಎಸ್.ನಾರಾಯಣ್ ಕಥೆಯನ್ನೇ ಓಕೆ ಮಾಡಿಲ್ಲವಂತೆ. ಕಥೆ ಓಕೆ ಆಗದೆ ಪಾಪ, ದೇವೇಗೌಡ್ರು-ಚೆನ್ನಮ್ಮ ದಂಪತಿಗಳನ್ನು ಕಷ್ಟಪಟ್ಟು ವೇದಿಕೆಗೆ ಕರೆತಂದು ಅದ್ದೂರಿ ಮುಹೂರ್ತ ಮಾಡಿಸಿಕೊಂಡದ್ದು ಪ್ರಚಾರದ ಗಿಮಿಕ್ಕಾ? ಅಥವಾ ಎಲೆಕ್ಷನ್ ಹತ್ತಿರ ಬಂದಂತೆ ನಡೆಯುವ ವಿದ್ಯಮಾನಗಳನ್ನೆಲ್ಲ ಕತೆಯೊಳಗೆ ತುರುಕಿ ಸಿನಿಮಾವನ್ನು ಡಾಕ್ಯುಮೆಂಟರಿ ಮಟ್ಟಕ್ಕಿಳಿಸುವ ಐಡಿಯಾವೇನಾದರು ಕುಮ್ಮಿ-ನಾಣಿ ತಲೆಯಲ್ಲಿದೆಯಾ? ಒಟ್ಟಿನಲ್ಲಿ ಅರ್ಜುನ್ ಸರ್ಜಾನಂತಹ ಒಬ್ಬ ಒಳ್ಳೆಯ ನಟ ಇವರಿಗೆ ಆಹಾರವಾಗದಿದ್ದರೆ ಅಷ್ಟೇ ಸಾಕು!

ಕನ್ನಡ ಸಿನಿಮಾದಲ್ಲಿ ಫಿಕ್ಸಿಂಗ್ ಶ್ರೀಶಾ

ಅಂಗಳದಲ್ಲಿ ಕ್ರಿಕೆಟ್ ಆಡಿದ್ದಕ್ಕಿಂತ ಹೆಚ್ಚು ವಿವಾದಗಳಿಂದಲೇ ಸುದ್ದಿ ಸ್ಪಾಟ್ ಫಿಕ್ಸಿಂಗ್ ವೀರ ಶ್ರೀಶಾಂತ್ ಬಣ್ಣದ ಲೋಕಕ್ಕೆ ಲಗ್ಗೆ ಆದಾಗಲೇ, ಮಲಿಯಾಳಿ ಮಾಲಿವುಡ್‌ನ ಬೆಳ್ಳಿಪರದೆ ಮೇಲೆ ಶ್ರೀಶಾಂತ್ ಇದೀಗ ಸ್ಯಾಂಡಲ್‌ವುಡ್ ಕದಗೂ ಮುಖ ಮಾ ಎಲ್ಲಾ ಅಂದುಕೊಂಡಂತೆ ನಡೆದರೆ 'ಕೆಂಪೇಗೌಡ-2' ಚಿತ್ರದ ಶ್ರೀಶಾಂತ್ ಬಣ್ಣ ಹಚ್ಚುತ್ತಾರೆ ಅನ್ನೋದು ಗಾಂಧಿನಗರದ ಲೇ ತಮಿಳಿನ 'ಸಿಂಗಂ' ಸಿನಿಮಾವನ್ನು ಕನ್ನಡಕ್ಕೆ ಭಟ್ಟಿ ಇಳಿಸಿ ಯಶಸ್ಸು ಶಂಕರೇಗೌಡರೇ ಈ ಸಿನಿಮಾಕ್ಕೆ ಬಂಡವಾಳ ಹಾಕುವುದರ ಜೊ ಕಟ್ ಕೂಡಾ ಹೇಳಲಿದ್ದಾರಂತೆ. ಆದರೆ ಒಂದೇಒಂದು ಬದಲಾ ಸುದೀಪ್ ಜಾಗಕ್ಕೆ ಕೋಮಲ್ ರೀಪ್ಲೇಸ್ ಆಗಿದ್ದಾರೆ. ಖಡಕ್ ಆಫೀಸರ್ ಸ್ಟೋರಿಗೆ ಸುದೀಪ್ ಒಗ್ಗಿಕೊಂಡಿದ್ದರು. ಆದರೆ ಕಾ ಇಮೇಜಿನ ಕೋಮಲ್ ಎಷ್ಟರಮಟ್ಟಿಗೆ ಸರಿ ಹೋಗ್ತಾರೆ ಅ ಮೂಡಿತ್ತು. ಆದ್ರೆ ಸಿನಿಮಾಕ್ಕಾಗಿ ಸಿಕ್ಕಾಪಟ್ಟೆ ಸ್ಲಿಮ್ ಆಗಿರುವ ಟೀಸರ್‌ನಲ್ಲಿ ಹೊಸ ಇಮೇಜ್ ಸೃಷ್ಟಿಸಿಕೊಳ್ಳುವ ಭರವಸೆ ಮೂ ಅಂದಹಾಗೆ, 'ಕೆಂಪೇಗೌಡ-2' ಸಿನಿಮಾದಿಂದ ಸುದೀಪ್‌ರನ್ನು ಪ ಒಂದಷ್ಟು ಟೀಕೆಗಳು ತೂರಿಬಂದಿದ್ದವು. ಇದೀಗ ಟೀಸರ್‌ನ ಬಿಟ್ಟಿರೋರೆಲ್ಲ ಗಂಡಸರಲ್ಲ, ಮೀಸೆ ತಿರುಗಿಸೋರೆಲ್ಲ ಕೆಂಪೇಗೌ ಎಂಬ ಡೈಲಾಗ್ ಕೇಳಿಬಂದಿದ್ದು ಸ್ಟಾರ್‌ವಾರ್‌ನ ಹೊಗೆಯಾಡಿಸ

ಹಾದಿಯಾಗುವ ಹಾದಿಯಲ್ಲಿ ಆಮೀರ್





ಸಿನಿಮಾದ ಸಂಕೀರ್ಣ ಸಮೀಕರಣ ಅರ್ಥವಾಗೋದು ತುಂಬಾ ಕಷ್ಟ. ಇನ್ನದರ ವ್ಯಾಕರಣವಂತೂ ಕಷ್ಟಕಷ್ಟ. ಬರೀ ಮನರಂಜನೆ ಇಟ್ಟುಕೊಂಡು ಸಿನಿಮಾ ಮಾಡಿದರೆ ಸಕ್ಸಸ್ ಸಿಗಬಹುದು, ಆದರೆ ನೋಡುಗರ ಮನದಾಳದ ಎಕ್ಕರಿ ದಕ್ಕುವುದಿಲ್ಲ. ಹಾಗಂತ ಮನರಂಜನೆಯೇ ಇಲ್ಲದೆ ಸಾಮಾಜಿಕ ಮೆಸೇಜುಗಳ ಬೋಧನೆಗೆ ಇಳಿದರೂ ಅಪಾಯ. ಬೆಳ್ಳಿತೆರೆಯ ಈ ಹದವನ್ನು ಅರ್ಥಮಾಡಿಕೊಂಡವರೇ ನಿಜವಾದ ಸಿನಿ ಭಾಣಸಿಗ. ಬಾಲಿವುಡ್ ನಟ ಆಮೀರ್ ಖಾನ್ ಸಿನಿಮಾಗಳು ಇದನ್ನು ಅರ್ಥ ಮಾಡಿಸುತ್ತವೆ. ಲಗಾನ್, ರಂಗ್ ದೆ ಬಸಂತಿ, ತಾರೆ ಜಮೀನ್ ಪರ್, ತ್ರೀ ಈಡಿಯಟ್ಸ್, ಪಿಕೆ ಸಿನಿಮಾಗಳಿಂದ ಹಿಡಿದು ಇತ್ತೀಚಿನ ದಂಗಲ್‌ವರೆಗೆ ಆಮೀರ್ ಆಯ್ಕೆ ಮಾಡಿಕೊಂಡ ಕತೆಯ ಸಂವೇದನೆಗಳೇ ಅಷ್ಟೂ ಸಕ್ಸಸ್‌ಗಳ ಹಿಂದಿರುವ ಸೂತ್ರ. ಹೀರೊ ಎನ್ನುವ ಇಮೇಜಿನ ಪೊರೆಯನ್ನ ಬಹಳ ಹಿಂದೆಯೇ ಕಳಚಿ ಬಿಸಾಕಿರುವುದರಿಂದಲೇ ಆಮೀರ್‌ಗೆ ಇದು ಸಾಧ್ಯವಾಗುತ್ತಿರೋದು. ಹಾಗಾಗಿಯೇ ಆಮೀರ್ ಹೊಸ ಸಿನಿಮಾ ಘೋಷಿಸಿದರೆ ಅವು ನೋಡುಗರಲ್ಲಿ ಕಾತರವನ್ನು ತಂದಿಕ್ಕುತ್ತವೆ. ಅದಕ್ಕೆ ತಕ್ಕಂತೆ ಮತ್ತೊಂದು ಸಿನಿಮಾವನ್ನು ಅರ್ಪಿಸಲು ಆಮೀರ್ ಸಜ್ಜಾಗಿದ್ದಾರೆ. ಅವರದೇ ನಿರ್ಮಾಣದ ಹೊಸ ಸಿನಿಮಾ 'ಸೀಕ್ರೆಟ್ ಸೂಪರ್ ಸ್ಟಾರ್' ಚಿತ್ರ ಸಂಗೀತದಲ್ಲಿ ದೊಡ್ಡ ಸಾಧನೆ ಮಾಡಬೇಕು ಎಂಬ ಕನಸು ಇಟ್ಟುಕೊಂಡಿರುವ ಸಣ್ಣ ಹುಡುಗಿಯ ಕಥಾಹಂದರವನ್ನು ಹೊಂದಿದೆ. ದಂಗಲ್ ಸಿನಿಮಾದಲ್ಲಿ ಆಮೀರ್ ಖಾನ್‌ರ ಪುಟ್ಟ ಮಗಳ ಪಾತ್ರ ಮಾಡಿದ್ದ ಝಾಯಿರಾ ವಾಸಿಮ್ ಇಲ್ಲಿ 14 ವರ್ಷದ ಇನ್ಸಿಯಾ ಎಂಬ ಲೀಡ್ ಕ್ಯಾರೆಕ್ಟರ್. ಅಕ್ಟೋಬರ್ 19 ಆಗಲಿರುವ ಈ ಸಿನಿಮಾದಲ್ಲಿ, ತನಗೆ ಎದುರಾಗುವ ಕಲ್ಚರಲ್ ಅಡೆ ಮೀರಿ ನಿಲ್ಲುವ ಪುಟ್ಟ ಹುಡುಗಿಯ ಮೂಲಕ ಯುವಪೀಳಿಗೆಗೆ ಪಾಠ ಹೇಳಲು ಆಮೀರ್ ಮೇಷ್ಟ್ರು ಮುಂದಾಗಿದ್ದಾರೆ. ಆಮೀ ಒಬ್ಬ ನಟ ಭಾರತೀಯ ಸಿನಿಮಾ ರಂಗದಲ್ಲಿರೋದೆ ನಮ್ಮೆಲ್ಲರ ಹೆ ಸಿನಿಪೀಳಿಗೆಗೆ ಅವರೇ ಒಂದು ಹಾದಿ.

ಸೀರಿಯಲ್ 'ಚಿನ್ನ'ಮ್ಮನ ತಮಿಳು ರ

'ಲಕ್ಷ್ಮಿ ಬಾರಮ್ಮ' ಸೀರಿಯಲ್‌ನ 'ಚಿನ್ನು' ಪಾತ್ರದ ಮೂಲಕ ಚಲಾವಣೆಗೆ ಬಂದಿದ್ದ ಕವಿತಾ ಗೌಡ ಈ ನಟಿ. 'ಶ್ರೀನಿವಾಸ ಕಲ್ಯಾಣ' ಅನ್ನೋ ಪಕ್ಕಾ ಡಬಲ್ ಮೀನಿಂಗ್ ಚಿತ್ರದಲ್ಲಿ ಹೀರೋಯಿನ್ ಆಗಿದ್ದ ರಿಲೀಸ್‌ಗೆ ಕೌಂಟ್‌ಡೌನ್ ಮಾಡುತ್ತಿರುವ 'ಫಸ್ಟ್ ಲವ್' ಚಿತ್ರಕ್ಕೂ ಹೀರೋಹಿಣಿ. ವಿಷ್ಯ ಅದಲ್ಲ, ಇಡೀ ಚಿತ್ರ ಲವ್' ಬಿಡುಗಡೆಯ ಪ್ರಚಾರ ಕಾರ್ಯದಲ್ಲಿ ಬ್ಯುಸಿಯಾಗಿದ್ದರೆ ಈ ಸೀರಿಯಲ್ ಚಿನ್ನಮ್ಮ ಮಾತ್ರ ಎಲ್ಲದಕ್ಕೂ ಆಗುತ್ತಿದ್ದಾಳಂತೆ. "ಚಿತ್ರದ ಪ್ರಮೋಷನ್‌ಗೆ ಬಾರಮ್ಮ" ಅಂತ ನಿರ್ದೇಶಕ ಆಯುಷ್ಮಾನ್ ಕರೆದರೆ "ನಾನ ಸಿನಿಮಾದಲ್ಲಿ ಸಿಕ್ಕಾಪಟ್ಟೆ ಬ್ಯುಸಿ ಮಾರಾಯ್ರೆ" ಎಂಬ ಸಬೂಬು ಶುರುಹಚ್ಚಿಕೊಳ್ತಾಳಂತೆ. ಕನ್ನಡದ ನಟಿ ಪರಭಾಷೆಯ ಕ್ಯಾನ್ವಾಸ್‌ಗಳಲ್ಲಿ ಮಿಂಚೋದು ಸಂತೋಷವೇ, ಆದ್ರೆ ಅದಕ್ಕೋಸ್ಕರ ಹಳೆಯ ಕಮಿಟ್ ಬಲಿ ಕೊಡೋದು ಎಷ್ಟು ಸರಿ? ಅನ್ನೋದು ಚಿತ್ರತಂಡದ ಪ್ರಶ್ನೆ. ಅಂದಹಾಗೆ, 'ಲವ್ ಗುರು' ಖ್ಯಾತಿಯ ಜಾಕಿ ರಾಜೇಶ್ ನಾಯಕನಾಗಿ ಅಭಿನಯಿಸಿರುವ ಸಿನಿಮಾ 'ಫಸ್ಟ್ ಲವ್'. ಈ ಚಿತ್ರದಲ್ಲಿ ಕವಿತಾ ಗೌಡ ಅ ರಾಜು ತಾಳಿಕೋಟೆ, ಅರುಣ್ ಬಾಲರಾಜ್ ಸೇರಿದಂತೆ ಹಲವರ ಅಭಿನಯವಿದೆ. ಅವರೆಲ್ಲ ಪ್ರ ಕೈಜೋಡಿಸುತ್ತಿದ್ದರೂ ಕವಿತಾ ಗೌಡ ಮಾತ್ರ ತಮಿಳು ಕನವರಿಕೆಯಲ್ಲಿ ಕಳೆದುಹೋಗಿದ್ದಾಳೆ. ಹೋಗ್ಲಿ ಬಿಡಿ ಚಿತ್ರರಂಗದಲ್ಲೇ ಆಯಮ್ಮ ಗಟ್ಟಿಯಾಗಿ ನೆಲೆ ನಿಲ್ಲಲಿ, ಥೇಟು ನಮ್ಮ ಜಯಲಲಿತಾ ಥರ!!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4.
Fax : 26604536, E-mail :lankesh79@...